ಪುಸ್ತಕ ಪ್ರಪಂಚ

ಸಂಪುಟ ೩೭ ೧೯೮೩ ನವಂಬರ್ ಸಂಚಿಕೆ ೪



ವಿಷಯ ಸೂಚಿ

೧. ಬರಲಿದೆ ವೃದ್ಧರ ವರ್ಷ !—ಎಸ್. ರಜಶಾದ್ರಿ ೧
೨. ಇಂಕಾ ಸಂಸ್ಕೃತಿಯ ನಿಗೂಢಗಳು—ಎಸ್. ಶ್ರೀಧರಮೂರ್ತಿ ೬
೩. ರೂಬಿಕ್ ಘನಾಕೃತಿ—ಜಿ. ಟಿ. ನಾರಾಯಣರಾವ್ ೧೨
೪. "ಪ್ರಾಚೀನ ಪಂಚಾಂಗಗಳ ರಹಸ್ಯ"—ವೆಂಕಟೇಶ ಶೇಟ್ ೧೯
೫. ನನ್ನ ಕನಸು—ಚಂದ್ರಮತಿ ೨೬
೬. ಗ್ರಾಮೀಣ ಮಹಿಳೆ ಮತ್ತು ಸಮುದಾಯ ಯೋಜನೆಗಳು —ಆರ್. ರಾಮಕೃಷ್ಣ ೩೧
೭. ಹೊಸ ಚಮತ್ಕಾರದ ವಿದ್ಯುತ್ ಚಿಕಿತ್ಸೆ-ಮಾನವ ಕುಲಕ್ಕೆ ಹೊಸ ಆಸೆ—ಜಗದಂಬಾ ಚಂದ್ರಯ್ಯ ೩೫
೮. ಹಸುಗಳ ರಾಣಿ : ಫ್ರೀಸಿಯನ್ ಹಸು—ಗಾಯಿತ್ರಿ ೪೧
೯. ಕ್ರಿಕೇಟ್‌ನ ವಿಶ್ವದಾಖಲೆಗಳು—ಡಿ. ಎನ್. ಶ್ರೀನಾಥ್ ೪೫
ಪುಸ್ತಕ ವಿಮರ್ಶೆ—೧) ಕೃಷ್ಣ ಹಾಸನ ೫೬
೨) ಚಂದ್ರಶೇಖರಾರಾಧ್ಯ
೩) ಆರ್. ರಾಮಕೃಷ್ಣ

ಮುಖಚಿತ್ರ : ಭುವನೇಶ್ವರಿ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೭ ನವೆಂಬರ್ ೧೯೮೨ ಸಂಚಿಕೆ ೪

ಬರಲಿದೆ ವೃದ್ಧರ ವರ್ಷ!

ವಿಶ್ವಸಂಸ್ಥೆಯ ಆಶ್ರಯದಲ್ಲಿ ಜುಲೈ ೨೬ ರಿಂದ ಆಗಸ್ಟ್ ೬ರವರೆವಿಗೆ ವಿಯನ್ನಾನಗರದಲ್ಲಿ ಜರುಗಿದ ಅಂತರರಾಷ್ಟ್ರೀಯ ಸಮ್ಮೇಳನವೊಂದು ವೃದ್ಧರ ಸಮಸ್ಯೆಗಳನ್ನು ಕುರಿತು ಚರ್ಚಿಸಿರುವುದು ಮಹತ್ವದ ಸಂಗತಿ. ವಿಶ್ವದ ಮೂಲೆ ಮೂಲೆಗಳಿಂದ ಬಂದಿದ್ದ ಪ್ರತಿನಿಧಿಗಳು ವೃದ್ಧರ ವರ್ಷವನ್ನು ಘೋಷಿಸಿ ಅದರ ಮೂಲಕ ಸರ್ಕಾರಗಳ ಗಮನವನ್ನು ಆ ಅತಿಮುಖ್ಯ ಸಮಸ್ಯೆಯ ಕಡೆಗೆ ಸೆಳೆದಿರುವುದು ಗಮನಾರ್ಹವಾದುದು.

೬೦ ವರ್ಷ ಮತ್ತು ಅದಕ್ಕೂ ಹೆಚ್ಚು ವಯಸ್ಸಾದವರ ಸಂಖ್ಯೆ ೧೯೭೫ರಲ್ಲಿ ಪ್ರಪಂಚದಲ್ಲಿ ೩೫೦ ಮಿಲಿಯನ್ ಆಗಿತ್ತು. ಈ ಶತಮಾನದ ಅಂತ್ಯಕ್ಕೆ (ಕ್ರಿ.ಶ. ೨೦೦೦) ಅವರ ಸಂಖ್ಯೆ ಹೆಚ್ಚು ಕಡಿಮೆ ಎರಡರಷ್ಟು ಆಗುತ್ತದಂತೆ! ಹಿಂದಿಗಿಂತಲೂ ಈಗ ಹೆಚ್ಚು ವೃದ್ಧರಿದ್ದಾರೆ. ಅವರ ಸಂಖ್ಯೆಯೂ ಬೆಳೆಯುತ್ತಿದೆ. ಮೇಲ್ಕಂಡ ಅಂಕಿಅಂಶಗಳು ಜನಜಂಗುಳಿಯ ಮೇಲೆ ಪರಿಣಾಮ ಬೀರುತ್ತವೆ. ಹಲವು ಆರ್ಥಿಕ ಸಾಮಾಜಿಕ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತವೆ.

ಇಂದು ಅವರಿಗೆ ಬೇಕಾದುದು ವಸತಿ, ಆರೋಗ್ಯ ಸೌಲಭ್ಯಗಳು, ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳಲು ಅಗತ್ಯವಾದ ಆತ್ಮೀಯ ಪರಿಸರ, ಸಾಕಷ್ಟು ವರಮಾನ, ದೇಹಮನಸ್ಸುಗಳನ್ನು ಲವಲವಿಕೆಯಿಂದ ಇಟ್ಟುಕೊಳ್ಳಲು ಕ್ರಿಯಾಶೀಲ, ರಚನಾತ್ಮಕ ಚಟುವಟಿಕೆಗಳು. ಇಷ್ಟೆ. ಕೆಲವು ಸರ್ಕಾರಗಳು ತಮ್ಮ ಉದ್ಯೋಗಿಗಳನ್ನು ೫೫ ವರ್ಷಕ್ಕೆ ನಿವೃತ್ತಿ ಮಾಡುತ್ತವೆ. ಅವರು ಬೇರಾವ ಕೆಲಸಕ್ಕೂ ಅನರ್ಹರೆಂಬ ತೀರ್ಮಾನಕ್ಕೆ ಬರುವುದುಂಟು. ಆದ್ದರಿಂದಲೇ ನಿವೃತ್ತರಾದವರನ್ನು ಮತ್ತೆ ಯಾವುದೇ ರೀತಿಯ ಸರ್ಕಾರದ ಕೆಲಸಗಳಿಗೆ ನಿಯಮಿಸಿಕೊಳ್ಳಬಾರದೆಂಬ ಆಜ್ಞೆ ಹೊರಡಿಸಿರುವುದೂ ಉಂಟು.

ನಿವೃತ್ತರಾದವರಿಗೆ ಹಲವಾರು ಸಂಕಷ್ಟಗಳಿವೆ. ಅವರ ವರಮಾನ ನಿವೃತ್ತಿಯ ನಂತರ ಇಳಿದುಹೋಗುತ್ತದೆ. ಪಿಂಚಣಿಯ ಇತಿಮಿತಿಯೊಳಗೆ ಅವರು ಜೀವನ ಕಳೆಯಬೇಕಾಗುತ್ತದೆ. ಆರ್ಥಿಕ ಮುಗ್ಗಟ್ಟಿಗೆ ಒಳಗಾಗುತ್ತಾರೆ. ಮದುವೆಯಾದ ಮಕ್ಕಳು ಅವರಿಂದ ದೂರ ಹೋಗುತ್ತಾರೆ. ಮುಪ್ಪಿನಲ್ಲಿ ಆಶ್ರಯ ನೀಡುವವರಿಲ್ಲದೆ ರೋಗ ರುಜಿನಗಳಿಂದ ನರಳುತ್ತಾ ಏಕಾಂತ ಜೀವನ ನಡೆಸುವರೂ ಇಲ್ಲದಿಲ್ಲ. ಜತೆಗೆ ಸಾಲದ ಹೊರೆ, ಚಿಕ್ಕಮಕ್ಕಳ ಕ್ಷೇಮ ಸೇರಿದರಂತೂ ಅವರು ಮಾನಸಿಕವಾದ ಹಿಂಸೆಗೆ ಒಳಗಾಗುತ್ತಾರೆ. ತಾವು ಬಂಧುಗಳಿಂದ ಸಮಾಜದಿಂದ ಅವರ ಆತ್ಮೀಯ ಸಂಪರ್ಕದಿಂದ ವಂಚಿತರಾಗಿದ್ದೇವೆ ಎಂದು ಅವರು ದುಃಖಿಸುತ್ತಾರೆ.

ಪಾಶ್ಚಾತ್ಯ ದೇಶಗಳಲ್ಲಿ ವೃದ್ಧಗೃಹಗಳನ್ನು ನಡೆಸುವ ಸಂಘ ಸಂಸ್ಥೆಗಳಿಗೆ ಸರ್ಕಾರ ಸಹಾಯಧನ ನೀಡುತ್ತದೆ. ಗೃಹವಾಸಿಗಳು ತಮ್ಮ ವರಮಾನದಲ್ಲಿ ನಿಯಮಿತ ಭಾಗವನ್ನು ಸಲ್ಲಿಸಿ ಊಟ, ವಸತಿ, ಔಷಧೋಪಚಾರ ಮುಂತಾದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ. ನಗರ ಬಡಾವಣೆಗಳಲ್ಲಿ ಅವರಿಗಾಗಿ ಸೌಧಗಳು ನಿರ್ಮಿಸಲ್ಪಟ್ಟಿರುತ್ತವೆ. ಪ್ರತಿಯೊಬ್ಬರಿಗೂ ಒಂದು ಕೊಠಡಿ ಇರುತ್ತದೆ. ಅದರಲ್ಲಿ ಅವರ ಸರಕುಗಳನ್ನು ಇಟ್ಟುಕೊಳ್ಳಬಹುದು. ವೈದ್ಯರೊಬ್ಬರು ಅವರ ಕ್ಷೇಮ ವಿಚಾರಿಸಿಕೊಳ್ಳುತ್ತಾರೆ. ಭಾನುವಾರ ಚರ್ಚಿನ ಬೋಧಕರು ಬಂದು ಉಪನ್ಯಾಸ,ಪ್ರಾರ್ಥನೆ ನಡೆಸುತ್ತಾರೆ. ತಮಗೆ ಇಷ್ಟಬಂದಾಗ ಬಂಧು ಮಿತ್ರರನ್ನು ನೋಡಿ ಬರಬಹುದು. ಇಷ್ಟೆಲ್ಲಾ ಇದ್ದರೂ ಕುಟುಂಬದ ಪರಿಸರದಲ್ಲಿ ಸಿಗುವ ಸಂತೋಷ ಸಂತೃಪ್ತಿ ಸಿಗುವುದಿಲ್ಲವೆನ್ನಲಾಗಿದೆ. ಈ ವ್ಯವಸ್ಥೆಯಿಂದಾಗಿ, ಬೇರೆಡೆ ಇರುವಂತೆ, ಅವರು ಬೀದಿಯ ಪಾಲಾಗುವುದಿಲ್ಲ. ಕೊನೆಯ ದಿನಗಳನ್ನು ಅವರು ನೆಮ್ಮದಿಯಿಂದ ಕಳೆಯಲು ಸಹಾಯಕವಾಗುವುದಂತೂ ನಿಜ.

ಭಾರತದಲ್ಲಿ ಜಾರಿಯಲ್ಲಿದ್ದು ಇತ್ತೀಚೆಗೆ ಅಳಿದು ಹೋಗುತ್ತಿರುವ ಸಮಷ್ಠಿ ಕುಟುಂಬದ ವ್ಯವಸ್ಥೆಯು ಜಗತ್ತಿನಾದ್ಯಂತ ಪ್ರಶಂಸಿಸಲ್ಪಟ್ಟಿದೆ. ಹಿಂದೂ ಕುಟುಂಬದ ವ್ಯವಸ್ಥೆಯು ಒಂದು ವಟವೃಕ್ಷದಂತೆ ಬೆಳೆದು ಹಲವು ವ್ಯಕ್ತಿಗಳಿಗೆ ಆಶ್ರಯ ನೀಡುತ್ತದೆ. ಅಬಲೆಯರಿಗೆ, ನಿರಾಶ್ರಿತರಿಗೆ, ಅಂಗಹೀನರಿಗೆ, ರೋಗಗ್ರಸ್ಥರಿಗೆ, ವೃದ್ಧರಿಗೆ ರಕ್ಷಣೆ ನೀಡುತ್ತದೆ. ಕುಟುಂಬದ ಇತರ ಸದಸ್ಯರೊಡನೆ ಅವರೂ ತಮ್ಮ ಕೈಲಾದಷ್ಟು ದುಡಿಮೆಮಾಡಿ ಒಟ್ಟು ಉತ್ಪತ್ತಿಗೆ ಕಾಣಿಕೆ ನೀಡುತ್ತಾರೆ. ಒಟ್ಟು ಉತ್ಪತ್ತಿಯಿಂದ ಅವರವರ ಅಗತ್ಯಗಳಿಗೆ ಅನುಸಾರವಾಗಿ ಸೌಲಭ್ಯಗಳು ಕೊಡಲ್ಪಡುತ್ತವೆ. ಇಡೀ ಕುಟುಂಬಕ್ಕೆ ತಂದೆ ಅಥವಾ

ಹಿರಿಯಮಗ ಅಥವಾ ದಕ್ಷನಾದ ವ್ಯಕ್ತಿ ಯಜಮಾನನಾಗಿರುತ್ತಾನೆ. ಅವನು ಸ್ವಾರ್ಥರಹಿತನಾಗಿ ಎಲ್ಲರಿಗೂ ಬೇಕಾದವನಾಗಿ, ಎಲ್ಲರ ಹಿತಾಸಕ್ತಿಗಳನ್ನು ಕಾಪಾಡುತ್ತಾನೆ. ಇಡೀ ವ್ಯವಸ್ಥೆ ಒಂದು ದೃಷ್ಟಿಯಲ್ಲಿ ಒಂದು ಪುಟ್ಟ 'ಕೋ ಆಪರೆಟಿವ್ ಕಾಮನ್‌ವೆಲ್ತ್' ನಂತಿರುತ್ತದೆ.

ಇಂತಹ ಕುಟುಂಬ ವ್ಯವಸ್ಥೆಯಲ್ಲಿ ಹಲವಾರು ತೊಡಕುಗಳು ತಲೆದೋರಿ ಒಡೆದು ಛಿದ್ರವಾಗುತ್ತಿದೆ. ಮದುವೆಯಾದ ಗಂಡುಮಕ್ಕಳು ತಮ್ಮ ಪಾಲು ಆಸ್ತಿಯೊಡನೆ ಬೇರಾಗುತ್ತಾರೆ. ಹೀಗಾಗಿ ಆಸ್ತಿಯೂ ಚೂರುಚೂರಾಗುವುದಲ್ಲದೆ ಸಮಷ್ಟಿ ಹಿತರಕ್ಷಣೆಯೂ ಮಾಯವಾಗಿ ಹಲವಾರು ಸಾಮಾಜಿಕ ಸಮಸ್ಯೆಗಳು ತಲೆ ಎತ್ತಿವೆ. ವೃದ್ಧರ ಸ್ಥಿತಿಗತಿಗಳೂ ಅಸ್ತವ್ಯಸ್ತಗೊಳ್ಳುತ್ತಿವೆ. ಅವರ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಂಡು ಅವರನ್ನು ನಿರ್ಲಕ್ಷಿಸಿರುವ ಮಕ್ಕಳಿಗೂ ಕೊರತೆಯಿಲ್ಲ. ಅಜ್ಜ-ಅಜ್ಜಿ, ವಿಧವೆಯಾದ ತಾಯಿ, ವಿದುರನಾದ ತಂದೆಯಂತಹವರು ಕಷ್ಟಗಳಿಗೆ ಒಳಗಾಗಿರುವುದನ್ನು ಎಲ್ಲಡೆ ಕಾಣಬಹುದು.

ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಬೆಳೆದುಬಂದಿರುವ ವ್ಯವಸ್ಥೆಗಳನ್ನು ಭಗ್ನಗೊಳಿಸುವ ಯತ್ನಗಳನ್ನು ಕಾನೂನಿನ ಬೆಂಬಲದಿಂದ ತಡೆಹಿಡಿಯಬೇಕೆಂದು ಅಂತರರಾಷ್ಟ್ರೀಯ ಸಂಸ್ಥೆಯು ಅಭಿಪ್ರಾಯಪಟ್ಟಿದೆ.

ವೃದ್ಧರ ಇನ್ನೊಂದು ಮುಖವನ್ನು ಈಗ ನೋಡೋಣ. ವಯಸ್ಸಿನೊಡನೆ ಅವರು ಅಪಾರ ಅನುಭವ, ತಾಳ್ಮೆ, ದೂರದೃಷ್ಟಿ, ಜಾಣ್ಮೆಗಳನ್ನು ಬೆಳಸಿಕೊಂಡಿರುತ್ತಾರೆ. ಅದು ಒಂದು ದೃಷ್ಟಿಯಲ್ಲಿ ದುಬಾರಿ ಗಳಿಕೆಯೆ. ವೃದ್ಧ ಹಲವು ಗುಣಗಳ ಗಣಿ. ಅವನ ಅನುಭವ ಸರಿಯಾದ ರೀತಿಯಲ್ಲಿ ಉಪಯೋಗಿಸಲ್ಪಡದಿದ್ದರೆ ನಷ್ಟವಾಗುತ್ತದೆ. ಅದು ರಾಷ್ಟ್ರೀಯ ಸಂಪತ್ತಿನ ವ್ಯಯವಲ್ಲದೆ ಬೇರೆಯಲ್ಲ. ನಾಳೆಯ ಯೋಜನೆಗೆ ಇಂದಿನ ಅನುಭವವೇ ತಳಹದಿ. ಆಧುನಿಕ ಯುವಜನವೂ ತಮ್ಮ ಹಿಂದಿನ ಅನುಭವ ಆಧಾರದ ಮೇಲೆಯೇ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಅವರಿಗೆ ಅನುಭವ ಮಾರ್ಗದರ್ಶನವಿಲ್ಲದಿದ್ದರೆ, ಹುಟ್ಟಿಲ್ಲದ ದೋಣಿಯಂತೆ, ಪರಿತಪಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ 'ಜನಾಂಗಗಳ ಅಂತರ' ಎಂಬ ಮಾತು ಕೇಳಿಬರುತ್ತಿದೆ. ಕಾಲಾನುಗತಿಯಲ್ಲಿ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಬದಲಾವಣೆಯಾಗಿರುತ್ತವೆ. ಯುವಕರಿಗೆ ಅವುಗಳ ಬಗ್ಗೆ ಆಸಕ್ತಿಯಿಲ್ಲವೆಂಬ ದೂರು ಎಲ್ಲೆಡೆ ಕೇಳಿಬರುತ್ತಿದೆ. ಹಿರಿಯರು ಯುವಜನ ಭಕ್ತಿಗೌರವಗಳಿಲ್ಲದೆ, ಶ್ರದ್ಧೆ ಆಸಕ್ತಿಗಳಿಲ್ಲದೆ ತಪ್ಪು ದಾರಿಯಲ್ಲಿ ಹೋಗುತ್ತಿದೆ ಎನ್ನುತ್ತಾರೆ. ಹೀಗಾಗಿ

ಹಿರಿ-ಕಿರಿಯರ ಆಲೋಚನೆ, ಭಾವನೆಗಳಲ್ಲಿ ಅಂತರ ಸ್ಪಷ್ಟವಾಗಿ ಕಂಡು ಬರುತ್ತಿದೆ.

ವಯಸ್ಸಿನೊಡನೆ ಪ್ರತಿಭೆ ಕುಂದುವುದಿಲ್ಲವೆಂಬುದಕ್ಕೆ ಭಾರತದಲ್ಲಿ ಲೆಕ್ಕವಿಲ್ಲದಷ್ಟು ಉದಾಹರಣೆಗಳು ಸಿಗುತ್ತವೆ. ಮಹಾತ್ಮಗಾಂಧೀಜಿಯವರಿಂದ ಇಂದಿರಾಗಾಂಧಿಯವರವರೆವಿಗೆ ರಾಷ್ಟ್ರವನ್ನು ಮುನ್ನಡೆಸಿದ ಜನಪ್ರಿಯ ನಾಯಕರೆಲ್ಲಾ ೭೦ ದಶಕದವರೇ.

ಅಂತರರಾಷ್ಟ್ರೀಯ ಶಾಂತಿಗಾಗಿ ಸಕ್ರಿಯವಾಗಿ ಪಾತ್ರವಹಿಸಿದ ಬಟ್ರಾಂಡ್ ರಸೆಲ್‌ಗೆ ೯೪, ಫಾರ್‌ಫೆಚ್ಡ್ ಫೇಬಲ್ಸ್ ನಾಟಕ ಬರೆದಾಗ ಬರ್ನಾರ್ಡ್‌ಷಾಗೆ ೯೩, ಫೌಸ್ಟ್ ಕೃತಿ ರಚಿಸಿದಾಗ ಗಯಟೆಗೆ ೮೩ ಇತ್ಯಾದಿ.

ವೃದ್ಧರಲ್ಲಿ ಬಹುಮಂದಿ ದೈಹಿಕ, ಮಾನಸಿಕ ಚಟುವಟಿಕೆಯಿಂದ ಕೂಡಿ ದೇಶದ ಪ್ರಗತಿಯಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಬಲ್ಲರು ಎಂಬ ಅಂಶ ಸಮೀಕ್ಷೆಯಿಂದ ದೃಢಪಟ್ಟಿದೆ, ಅವರನ್ನು ಹೇಗೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿಸಬಹುದೆಂಬುದನ್ನು ಸರ್ಕಾರಗಳು ಪರಿಶೀಲಿಸಿ ಸೂಕ್ತ ಯೋಜನೆಗಳನ್ನು ರೂಪಿಸುವುದು ಅನಿವಾರ್ಯ. ಸಾಕಷ್ಟು ವಿಶ್ರಾಂತಿ ದೊರಕಿಸಲು ಮತ್ತು ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಅವರನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುವುದು ಅತಿ ಜರೂರಾದ ಸಮಸ್ಯೆ ಎಂದು ಪರಿಗಣಿಸಲಾಗಿದೆ.

ಡೆನ್ಮಾರ್ಕಿನ ಬ್ರಾಂಡೆನ್‌ಬರ್ಗ್ ಫೋಕ್ ಹೈಸ್ಕೂಲಿನಲ್ಲಿ ಇತ್ತೀಚಿಗೆ ಒಂದು ವಿಶಿಷ್ಟ ರೀತಿಯ ಪ್ರಯೋಗ ನಡೆಯಿತು. 'ಜನಾಂಗದ ಅಂತರ'ದ ಬಗ್ಗೆ ಎರಡು ವಾರಗಳ ವ್ಯಾಸಂಗ ಗೋಷ್ಠಿ ಆರಂಭಿಸಲಾಯ್ತು. ೧೮ ರಿಂದ ೨೫ರವರೆವಿಗೆ ಮತ್ತು ೪೫ ರಿಂದ ೮೦ರವರೆವಿಗೆ—ಎರಡು ತಂಡಗಳಲ್ಲಿ ಶಿಕ್ಷಣಾರ್ಥಿಗಳನ್ನು ಸೇರಿಸಿಕೊಳ್ಳಲಾಯ್ತು. ಊಟ ಮತ್ತು ವಸತಿ ಒಂದೇ ಕಡೆ. ಉಪನ್ಯಾಸ ಮತ್ತು ಚರ್ಚೆಗಳು ಬೇರೆಬೇರೆ. ಹಲವು ಸಾಮಾಜಿಕ ಸಮಸ್ಯೆಗಳನ್ನು ಪ್ರಚಲಿತ ವಿಷಯಗಳನ್ನು ಕುರಿತು ಚರ್ಚಿಸಲಾಯ್ತು. ಗೋಷ್ಠಿಯು ಮುಕ್ತಾಯಗೊಂಡಾಗ ಎರಡು ಅಂಶಗಳು ಹೊರಬಿದ್ದವು ಜೀವನದ ಗುರಿ ಮತ್ತು ಮೌಲ್ಯಗಳ ಬಗ್ಗೆ ಎರಡೂ ತಂಡಗಳಲ್ಲಿಯೂ ಏಕಾಭಿಪ್ರಾಯ ವ್ಯಕ್ತವಾಯಿತು. ಭಿನ್ನತೆ ಕಂಡುಬಂದದ್ದು ಅವರು ಅನುಸರಿಸುವ ಮಾರ್ಗದಲ್ಲಿ ಮಾತ್ರ. ಜನಾಂಗದ ಅಂತರವನ್ನು ತಗ್ಗಿಸಲು ಬೇಕಾದುದು ಪರಸ್ಪರ ಹೊಂದಾಣಿಕೆಯೆ ವಿನಹ ಬೇರೆನೂ ಅಲ್ಲ ಎಂಬುದು ದೃಢಪಟ್ಟಿತು.

ವೃದ್ಧರ ಬಗ್ಗೆ ನಡೆಯಲಿರುವ ಮಹಾ ಸಮ್ಮೇಳನದ ಪ್ರಧಾನಕಾರ್ಯದರ್ಶಿಯವರಾದ ಡಬ್ಲಿಯು, ಎಂ. ಕೆರ್ರಿಗ್ಯಾನ್ ಅವರು ದೆಹಲಿಯಲ್ಲಿ ಮಾತನಾಡುತ್ತಾ ತಾವು ಭಾರತದಲ್ಲಿ ವಯಸ್ಸಾದವರನ್ನು ನೋಡಿಕೊಳ್ಳುತ್ತಿರುವ ರೀತಿಯ ಬಗ್ಗೆ ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರತದ ನಿಯೋಗದವರು ಸಮ್ಮೇಳನ ಕುಟುಂಬದ ವ್ಯವಸ್ಥೆಯ ಬಗ್ಗೆ ಚರ್ಚಿಸಿ ಸದಭಿಪ್ರಾಯ ಮೂಡಿಸುವರೆಂದು ಆಶಿಸಿದರು.

ವೃದ್ಧಾಪ್ಯ ಎಂದೂ ದೇಶಕ್ಕೆ ಭಾರ ಅಲ್ಲ; ವರದಾನ! ವಯಸ್ಕರು ತಮ್ಮ ಅಮೂಲ್ಯ ಜೀವನಾನುಭವದಿಂದ ದೇಶದ ಅಭಿವೃದ್ಧಿ ಕೆಲಸಗಳಲ್ಲಿ ಪಾಲ್ಗೊಳ್ಳಬಹುದು. ಗ್ರಾಮಾಂತರ ಪುರೋಭಿವೃದ್ಧಿ, ಶಿಕ್ಷಣ, ಪತ್ರಿಕಾರಂಗ, ಗೃಹ ಕೈಗಾರಿಕೆಗಳು, ಕೈಗಾರಿಕಾ ಸಂಸ್ಥೆಗಳಲ್ಲಿ ಮೇಲ್ವಿಚಾರಣೆ, ಆರೋಗ್ಯ ಮತ್ತು ಕುಟುಂಬ ಕ್ಷೇಮ. ಹಿಂದುಳಿದ ವರ್ಗದವರ ಸೇವೆ, ವಯಸ್ಕರ ಶಿಕ್ಷಣ ಮುಂತಾದ ಹಲವು ಕ್ಷೇತ್ರಗಳಲ್ಲಿ ತಮ್ಮ ಶ್ರಮದ ಕಾಣಿಕೆಯನ್ನು ನೀಡಬಹುದು. ಅವರ ಸೇವೆಯನ್ನು ಉಪಯೋಗಿಸಿಕೊಳ್ಳಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಲು. ಮುಂದೆ ಬರಲಿರುವ 'ಅಂತರರಾಷ್ಟ್ರೀಯ ವೃದ್ಧರ ವರ್ಷ'ದಿಂದ ಪ್ರಚೋದನೆ ದೊರೆಯಲಿದೆ.

ಎಸ್. ರಜತಾದ್ರಿ



ಮಾನವೀಯತೆಯನ್ನು ಮನುಷ್ಯ ಮರೆತರೆ ದಾನವನಾಗುತ್ತಾನೆ. ಮಾನವನಾಗಿಯೇ ಬಾಳಬೇಕಾದರೆ ಮಾನವೀಯತೆಯನ್ನು ಮರೆಯಬಾರದು.

—ನೇತಾಜಿ

ಇಂಕಾ ಸಂಸ್ಕೃತಿಯ ನಿಗೂಢಗಳು

ಇಂಕಾಗಳ ಅದ್ಭುತ ಸಂಸ್ಕೃತಿ ಉಗಮಗೊಂಡಿದ್ದು ಹೇಗೆ? ಕಮಾನುಗಳಿಲ್ಲದೆ, ಚಕ್ರಗಳನ್ನು ಬಳಸದೆ ಇವರು ತಮ್ಮ ಭವ್ಯ ಕಟ್ಟಡಗಳನ್ನು ಹೇಗೆ ನಿರ್ಮಿಸಿದರು? ಬರವಣಿಗೆಯೇ ಗೊತ್ತಿಲ್ಲದೆ, ಸಂಖ್ಯೆಗಳ ಸಹವಾಸವೇ ಇಲ್ಲದೆ ತಮ್ಮ ವಿಶಾಲ ಸಾಮ್ರಾಜ್ಯವನ್ನು ಹೇಗೆ

ದಕ್ಷಿಣ ಅಮೆರಿಕ ಖಂಡದ ಪೆರು ರಾಷ್ಟ್ರದಲ್ಲಿನ ಆಂಡೀಸ್ ಪರ್ವತ ಶ್ರೇಣಿಯ ನಡುವೆ ಎರಡು ಉನ್ನತ ಶಿಖರಗಳ ಮಧ್ಯೆ ಉರುಬಂಬಾ ನದಿಯ ದಡದಲ್ಲಿ ವಿಸ್ಮಯಗೊಳಿಸುವಷ್ಟು ಸುಂದರ ಇಂಕಾ ನಗರವಿದೆ. ಈ 'ಮಾಚು ಪಿಚ್ಚು' ನಗರದಲ್ಲಿ ಮನೆಗಳು, ಆವರಣಗಳು, ಗುಡಿಗಳು ಎಲ್ಲವೂ ಸೋಜಿಗ. ಜಗತ್ತಿನಲ್ಲಿ ಪ್ರಾಕ್ತನ ಶಾಸ್ತ್ರಜ್ಞರು ಅಗೆದು ತೆಗೆದ ನಗರಗಳಲೆಲ್ಲ ಇದೂ ಒಂದು ಅಸಾಧಾರಣ ಆವಿಷ್ಕಾರ. ೧೯೧೧ರಲ್ಲಿ ಅಮೆರಿಕನ್ ಅನ್ವೇಷಕ ಹೀರಮ್ ಬಿಂಗಾಮ್ ಇದನ್ನು ಕಂಡುಹಿಡಿದ. ಅಲ್ಲಿಯವರೆಗೆ ಸುಮಾರು ಐದು ಶತಮಾನಗಳಿಂದ ಈ ನಗರ ಪಾಳುಬಿದ್ದು ಜಗತ್ತಿಗೆ ಮರೆತೇಹೋಗಿತ್ತು. ಹದಿನೈದನೇ ಅಥವಾ ಹದಿನಾರನೇ ಶತಮಾನದಲ್ಲೆಲ್ಲೊ ಯಾವುದೋ ಗೊತಿಲ್ಲದ ಕಾರಣಗಳಿಂದ ಈ ನಗರ ಪಾಳು ಬಿದ್ದು ಮಣ್ಣುಪಾಲಾಗತೊಡಗಿತ್ತು.

ಮಾಚುಪಿಚ್ಚು ನಗರದಲ್ಲಿ ಅಗಾಧ ಶಿಲಾ ಕಟ್ಟಡಗಳು ಇಂದಿನ ಆಧುನಿಕ ಶಿಲ್ಪಿಗಳಿಗೆ ಒಂದು ಸವಾಲಾಗಿದೆ. ಇಂಕಾ ಜನ ಇವುಗಳನ್ನು ಹೇಗೆ ಕಟ್ಟಿದರೆಂಬುದು ಇನ್ನೂ ರಹಸ್ಯಪೂರ್ಣವಾಗಿದೆ. ಏಕೆಂದರೆ ಇಂಕಾಗಳ ಬಳಿ ಭಾರ ಎಳೆಯುವ ಪ್ರಾಣಿಗಳಿರಲಿಲ್ಲ. ಚಕ್ರ ಇರುವ ಗಾಡಿಗಳಿರಲಿಲ್ಲ, ಕಬ್ಬಿಣದ ಸಲಕರಣೆಗಳಿರಲಿಲ್ಲ. ಅವರ ಬಳಿ ಇದ್ದದ್ದು ಕಲ್ಲಿನ ಸುತ್ತಿಗೆಗಳು, ಹಿತ್ತಾಳೆ ಉಳಿಗಳು, ಹಿತ್ತಾಳೆ ಮತ್ತು ಮರದ ಹಾರೆಗಳು ಮತ್ತು ನಾರುಹಗ್ಗಗಳು ಅಷ್ಟೆ. ಆದರೂ ಈ ಕಚ್ಚಾ ಸಾಧನಗಳಿಂದಲೇ ಅವರು ಭಾರಿ ಕಲ್ಲುಬಂಡೆಗಳನ್ನು ಒಡೆದು, ಆಳ ಕಂದರಗಳಿಂದ ಅವುಗಳನ್ನು ಎಳೆತಂದು, ಹಲವಾರು ಮೈಲಿಗಳ ದೂರದಲ್ಲಿ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಬಂಡೆಗಳ ಮೇಲೆ ಬಂಡೆಗಳನ್ನು ಕೂರಿಸುವಾಗ ಗಾರೆಯನ್ನು ಬಳಸಿಯೇ ಇಲ್ಲ. ಆದರೂ ಅವು ಇನ್ನು ಎಷ್ಟು

೧೯೮೭ರ ಆಗಸ್ಟ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾಗಿರುವ ಅನ್‌ಸಾಲ್ವಡ್ ಮಿಸ್ಟರೀಸ್ ಆಫ್ ದಿ ಇಂಕಾಸ್ ಲೇಖನದ ಅನುವಾದ.

ಭದ್ರವಾಗಿ ಕೂತಿವೆ ಎಂದರೆ ಎರಡು ಕಲ್ಲು ಬಂಡೆಗಳ ನಡುವೆ ತೆಳುವಾದ ಚಾಕುವನ್ನು ತೂರಿಸಲಾಗುವುದಿಲ್ಲ.

ಇಂಥ ಇಂಜನಿಯರಿಂಗ್ ಸೋಜಿಗಗಳು ಇಂಕಾ ನಾಡಿನಲ್ಲಿ ವಿಪುಲವಾಗಿದೆ. ಇಂಕಾ ರಾಜಧಾನಿಯಾದ ಕುಜ್ಕೊ ನಗರದ ಕಾಪಿಗಾನಿ ವೃತ್ತಾಕಾರದ ಕೋಟೆಯನ್ನು ಕಟ್ಟಲಾಗಿದೆ. ಈ ಕೋಟೆಯನ್ನು ಅಗಾಧ ಶಿಲಾ ಬಂಡೆಗಳಿಂದ ಕಟ್ಟಲಾಗಿದೆ. ಒಂದೊಂದು ಬಂಡೆಯ ತೂಕ ೩೦೦ ಟನ್‌ಗಳು. ಇಂಥ ಅಗಾಧ ಬಂಡೆಗಳನ್ನು ಎತ್ತಿದ್ದು ಹೇಗೆ ಇಳಿಸಿದ್ದು ಹೇಗೆ ಒಂದರ ಮೇಲೊಂದು ಬಿಗಿಯಾಗಿ ಕೂರುವಂತೆ ಮಾಡಿದ್ದು ಹೇಗೆ ?

ಪೆರು ರಾಷ್ಟ್ರದ ಇತಿಹಾಸವನ್ನು ಗಮನಿಸಿದರೆ ಇಂಕಾ ಸಂಸ್ಕೃತಿ ಪ್ರಭಾವಶಾಲಿಯಾಗಿದ್ದು ಬಹಳ ಇತ್ತೀಚೆಗೆ. ಅದಕ್ಕೂ ಹಿಂದಿನ ಅನೇಕ ಸಂಸ್ಕೃತಿಗಳ ಕುಶಲತೆಗಳನ್ನು ಪ್ರತಿಭೆಯನ್ನು ಇಂಕಾಗಳು ಭಟ್ಟಿ ಇಳಿಸಿಕೊಂಡಿದ್ದಾರೆ. ಕ್ರಿ.ಪೂ. ೪೫೦ ರಷ್ಟು ಹಿಂದೆಯೇ ಮಧ್ಯ ಆಂಡೀಸ್ ಪರ್ವತದ ನಡುವೆ ಆಳ ಅರಣ್ಯಗಳಲ್ಲಿ ಒಂದು ಸಂಸ್ಕೃತಿ ಇತ್ತು. ಅದರ ಕಲ್ಲು ದೇಗುಲಗಳ ಮೇಲಣ ಚಿತ್ರಗಾರಿಕೆಯನ್ನು ಇಂದೂ ಕಾಣಬಹುದು.

ಪೆರುವಿನ ಉತ್ತರ ಕರಾವಳಿಯಲ್ಲಿನ ಮೋಚೆ ಕಣಿವೆಯಲ್ಲಿ ಕ್ರಿ.ಶ. ೩೦೦ರಲ್ಲಿ ಒಂದು ಬಗೆಯಲ್ಲಿ ಸೈನಿಕ ಪ್ರವೃತ್ತಿಯದೂ ಆದರೆ ಅತ್ಯಂತ ಧಾರ್ಮಿಕವಾದದ್ದು ಆದ ಒಂದು ಸಂಸ್ಕೃತಿ ವಿಕಾಸಗೊಂಡಿತ್ತು. ಇಲ್ಲಿಯ ಜನ ಜಗತ್ತಿನ ಅತ್ಯಂತ ಅಗಾಧ ಕಟ್ಟಡಗಳಲ್ಲಿ ಒಂದನ್ನು ನಿರ್ಮಿಸಿದ್ದಾರೆ. ೩೦೦ ಮೀಟರ್ ಉದ್ದ ೧೬೦ ಮೀಟರ್ ಅಗಲದ ಭಾರಿ ಪಿರಮಿಡ್ಡಿನ ರಚನೆ ಇಲ್ಲಾಗಿದೆ. ಇದಕ್ಕೆ ಬಳಸಿರುವ ಜೇಡಿ ಇಟ್ಟಿಗೆಗಳ ಒಟ್ಟು ಸಂಖ್ಯೆ ೧೪ ಕೋಟಿಗೂ ಹೆಚ್ಚು. ಇಂದು ಲೂಟಿಯಾದ ಅವಶೇಷವಾಗಿ ಪಾಳುಬಿದ್ದು ನಿಂತಿದೆ. ಆದರೆ ಅದು ಕಂಡ ಮಹತ್ವದ ದಿನಗಳಲ್ಲಿ ಕಣ್ಣು ಕೋರೈಸುವ ಭವ್ಯ ದೃಶ್ಯವಾಗಿದ್ದಿರಬೇಕು. ೩೦ ಮೀಟರ್ ಎತ್ತರದ ಈ ಅಗಾಧ ಕಟ್ಟಡದ ಮೇಲೆಲ್ಲ ಸುಂದರ ಭಿತ್ತಿ ಚಿತ್ರಗಳು.

ಈ ಮೋಚೆ ಕಣಿವೆಯಲ್ಲಿ ದೊರೆತಿರುವ ಮಡಿಕೆಗಳು ೧೫೦೦ ವರ್ಷಗಳಷ್ಟು ಹಳೆಯವು. ಅವುಗಳ ಮೇಲಿನ ಚಿತ್ರಗಳು ಅಲ್ಲಿಯ ಸಂಸ್ಕೃತಿಯನ್ನು ಬಿತ್ತರಿಸುತ್ತವೆ. ಗತ್ತಿನ ಆಸ್ಥಾನಿಕರ ಚಿತ್ರಗಳಿವೆ. ದೀನ ಭಿಕ್ಷುಕರ ಚಿತ್ರಗಳು ಇವೆ. ಮೂಗು ಕೊಯ್ದ ಮನುಷ್ಯರ ಚಿತ್ರಗಳೂ ಇವೆ. (ಬಹುಶಃ ಅಪರಾಧಗಳಿಗೆ ಶಿಕ್ಷೆಯಾಗಿ ಮೂಗು ಕತ್ತರಿಸಿರಬೇಕು). ಅಲ್ಲದೆ ಆಶ್ಚರ್ಯಕರವಾಗುವಂಥ ವಿವರಣಾತ್ಮಕ ಲೈಂಗಿಕ ದೃಶ್ಯಗಳ ಚಿತ್ರಗಳೂ ಇವೆ.

ನಂತರದ ಸಾಮ್ರಾಜ್ಯವೆಂದರೆ ಕ್ರಿ. ಶ. ೬೦೦ ರಿಂದ ೧೧೦೦ ರವರೆಗೆ ಬೊಲಿವಿಯಾ ರಾಷ್ಟ್ರದಲ್ಲಿ ಪ್ರವರ್ಧಮಾನವಾಗಿದ್ದ ಸಂಸ್ಕೃತಿಯದು. ಇಲ್ಲಿಯ ರಾಜಧಾನಿ ಐತಿಹ್ಯ ಪ್ರಸಿದ್ಧ ಟಿಹಾಹುವನಾಕೊ ಶಿಲಾನಗರ. ಸಮುದ್ರದಂಡೆಯಿಂದ ಸುಮಾರು ೪೩೦೦ ಮೀಟರ್ ಎತ್ತರದಲ್ಲಿನ ಈ ನಗರ ವಿಸ್ಮಯಕಾರಿಯಾದುದು.

ಕ್ರಿ. ಪೂ. ೧೦೦೦ ದ ವೇಳೆಗೆ ಪೆರುವಿನ ಉತ್ತರ ಕರಾವಳಿಯಲ್ಲಿ ಚಿಮೋರ್ ಸಾಮ್ರಾಜ್ಯ ಅರಳಿತು. ಇದರ ರಾಜಧಾನಿ ಚಂಚನ್. ೨೧ ಚದರ ಕಿಲೋಮೀಟರ್ ವಿಸ್ತೀರ್ಣದ ಈ ನಗರ ಆ ಕಾಲದಲ್ಲಿ ಜಗತ್ತಿನ ಅತ್ಯಂತ ದೊಡ್ಡ ಹಾಗೂ ಶ್ರೀಮಂತ ನಗರಗಳಲ್ಲಿ ಒಂದಾಗಿತ್ತು. ೧೪೬೭ ರಲ್ಲಿ ಇಂಕಾಗಳ ಧಾಳಿಗೆ ತುತ್ತಾಗಿ ಪಾಳುಬಿದ್ದಿತು. ಈಗಿನ ಅವಶೇಷಗಳನ್ನು ನೋಡಿದರೂ ಅದು ಎಂಥ ಬಾಳ್ವೆಯನ್ನು ನಡೆಸಿದೆ ಎನ್ನುವುದು ಗೊತ್ತಾಗುತ್ತದೆ.

ಕೌತುಕಪೂರ್ಣ ಪ್ರಶ್ನೆಗಳು: ಲಿಪಿ ಇರುವ ಭಾಷೆಯಿಲ್ಲದೆ, ಚಲಾವಣೆಯ ಹಣವಿಲ್ಲದೆ ಪೆರುವಿನ ಜನ ಮಹಾನ್ ಸಂಸ್ಕೃತಿಗಳನ್ನು ಹೇಗೆ ಸಾಧಿಸಿದರು ಎನ್ನುವುದು ಬಿಡಿಸಲಾಗದ ಸೋಜಿಗ. ವಾಣಿಜ್ಯ ವ್ಯವಹಾರಗಳೆಲ್ಲ ಸಾಟಿ ಪದ್ಧತಿಯಲ್ಲಿಯೇ ನಡೆಯುತ್ತಿತ್ತು. (ಅಮೂಲ್ಯ ಲೋಹಗಳು ಇವರಿಗೆ ಪವಿತ್ರದ ವಸ್ತುಗಳು. ಬಂಗಾರವನ್ನು ಇವರು "ಸೂರ್ಯನ ಬೆವರು" ಎಂದು ಪರಿಗಣಿಸುತ್ತಿದ್ದರು. ಅದನ್ನು ಧಾರ್ಮಿಕ ಉದ್ದೇಶಗಳಿಗೆ ಮಾತ್ರ ಚಕ್ರವರ್ತಿ ಮತ್ತು ಆಸ್ಥಾನಿಕರು ಬಳಸಬಹುದಾಗಿತ್ತು).

ಪೆರುವಿನ ಸಾಂಸ್ಕೃತಿಕ ಕಲೆಗಳ ಉಗಮವೂ ಇನ್ನು ಸ್ಪಷ್ಟವಾಗದೆ ಊಹೆಗಳ ಮಟ್ಟದಲ್ಲಿ ನಿಂತಿವೆ. ಕ್ರಿ. ಪೂ. ೨೦೦ ರ ಕಾಲದ ಮಡಿಕೆಗಳ ಮೇಲಣ ಮಾನವಾಕೃತಿಯ ಚಿತ್ರಗಳ ಪೂರ್ವ ಏಶಿಯಾದ ಅದೇ ಬಗೆಯ ಚಿತ್ರಗಳನ್ನು ಹೋಲುವುದನ್ನು ಕಂಡು ಆ ಆಧಾರದ ಮೇಲೆ ಕೆಲವರು ಪೆಸಿಫಿಕ್ ಸಾಗರದಾಚೆಯ ಸಂಸ್ಕೃತಿಯ ಪ್ರಭಾವ ಆಗಿರಬೇಕು ಎಂದು ಊಹಿಸುತ್ತಾರೆ. ದೂರ ದೂರದ ಜನಗಳಲ್ಲಿ ಒಂದೇ ಬಗೆಯ ಸಮಸ್ಯೆ, ಒಂದೇ ಬಗೆಯ ಸಾಮಗ್ರಿ, ಒಂದೇ ಬಗೆಯ ಅವಕಾಶಗಳು ಒದಗಿದಾಗ ಒಂದೇ ಬಗೆಯ ಪರಿಹಾರಗಳು ಕಂಡು ಬರುವುದು ಅಸಹಜವೇನಲ್ಲ. ಅಲ್ಲದೆ ಈ ಬಗೆಯ ಪ್ರಭಾವ ಇದ್ದುದ್ದೇ ಆದಲ್ಲಿ ಪೆರುವಿಯನ್ನರು ಖಂಡಿತವಾಗಿ ಲಿಪಿಯನ್ನು ಹಾಗೂ ಚಕ್ರದ ಬಳಕೆಯನ್ನು ಕಲಿಯುತ್ತಿರಲಿಲ್ಲವೆ?

ಆದರೆ ಒಂದು ಕೌತುಕಪೂರ್ಣ ವಿಚಾರವಿದೆ. ಆರನೆ ಶತಮಾನ ಪೆರುವಿನ

ಮಡಿಕೆ ಚಿತ್ರಗಳ ಮೇಲೆ ಮಾತ್ರ ಪೌರ್ವಾತ್ಯ ಮಾನವ ಮುಖಗಳಿವೆ. ಉಳಿದವುಗಳ ಮೇಲೆ ಆಫ್ರಿಕನ್ನರ ಮತ್ತು ಅರಬ್ಬರ ಮುಖಗಳಿವೆ. ಏಕೆ?

ಪೆರುವಿನ ದಕ್ಷಿಣ ಕರಾವಳಿಯಲ್ಲಿನ ನಾಜ್ಕಾ ಬಯಲು ಪ್ರದೇಶದಲ್ಲಿ ನೆಲದ ಮೇಲೆ ಕೆಲವು ದೈತ್ಯಾಕಾರದ ವಿನ್ಯಾಸಗಳನ್ನು ಬರೆಯಲಾಗಿದೆ. ಜ್ಯಾಮಿತೀಯ ವಿನ್ಯಾಸಗಳು, ಹಕ್ಕಿಗಳು, ಪ್ರಾಣಿಗಳು ಹಾಗೂ ಕೀಟಗಳ ವಿನ್ಯಾಸಗಳು ಇವೆ. ಇವುಗಳನ್ನು ೧೪೦೦ ವರ್ಷಗಳ ಹಿಂದೆ ಬರೆಯಲಾಗಿದೆ. ನೆಲದ ಮೇಲೆ ನಿಂತು ನೋಡಿದರೆ ಅವುಗಳ ವಿನ್ಯಾಸ ಗೊತ್ತೇ ಆಗುವುದಿಲ್ಲ. ಅಷ್ಟು ಭಾರಿ ಪ್ರಮಾಣದ ವಿನ್ಯಾಸಗಳು ಅವು. ೧೯೩೯ರಲ್ಲಿಯೇ ಅವುಗಳ ಅಸ್ತಿತ್ವ ಗಮನಕ್ಕೆ ಬಂದಿದ್ದು.

ಹಾರುವತಟ್ಟೆಗಳಲ್ಲಿ ನಂಬಿಕೆ ಇರುವ ಜನ ಈ ವಿನ್ಯಾಸಗಳು ಪ್ರಾಚೀನ ಗಗನಗಾಮಿ ರಾಕೆಟ್ಟುಗಳ ಇಳಿದಾಣಗಳು ಎಂದು ಹೇಳುತ್ತಾರೆ. ಆದರೆ ನಂಬಲರ್ಹವಾದ ವಿವರಣೆ ಎಂದರೆ: ಈ ಅಡ್ಡನೇರ ಗೆರೆಗಳು ಸೂರ್ಯ, ಚಂದ್ರ ಹಾಗೂ ನಕ್ಷತ್ರಗಳ ವಾರ್ಷಿಕ ಸ್ಥಾನಗಳನ್ನು ಗುರುತಿಸುವ ಸಾಧನಗಳು. ಪ್ರಾಣಿ ಚಿತ್ರಗಳು ಬಹುಶ ನಕ್ಷತ್ರಪುಂಜಗಳ ಪ್ರತಿನಿಧಿಗಳು.

ಇಂಕಾಗಳ ಪುರಾಣ ಐತಿಹ್ಯಗಳನ್ನು ನೋಡಿದರೆ ಅವರ ಉಗಮ ಅವರಿಗೆ ನಿಗೂಢ. ಅವರ ಚಕ್ರವರ್ತಿ ತಾನು ಸೂರ್ಯದೇವತೆಯ ವಂಶಸ್ಥ ಎಂದು ಕೊಂಡಿದ್ದಾನೆ. ನಮಗೆ ಗೊತ್ತಿರುವ ಮಟ್ಟಿಗೆ ಅವರು ಸುಮಾರು ಕ್ರಿ. ಶ. ೧೧೦೦ ರಲ್ಲಿ ಕುಜ್ಕೊ ನಗರವನ್ನು ರಾಜಧಾನಿಯಾಗಿಸಿಕೊಂಡು ಅನೇಕ ದಶಕಗಳ ಕಾಲ ಸುತ್ತಲಿನ ಬಿಡಿ ಬಿಡಿ ಬುಡಕಟ್ಟುಗಳ ವಿರುದ್ಧ ಹೋರಾಡುತ್ತ ಸಾಮ್ರಾಜ್ಯ ವಿಸ್ತರಿಸತೊಡಗಿದ್ದರು.

೧೪೩೮ ರ ವೇಳೆಗೆ ಸಾಕಷ್ಟು ದೊಡ್ಡ ಸಾಮ್ರಾಜ್ಯವೇ ಇವರದಾಗಿತ್ತು. ೧೫೩೨ ರ ಸುಮಾರಿಗೆ ಸ್ಪಾನಿಷರು ಬಂದಿಳಿವ ವೇಳೆಗೆ ಇವರ ಸಾಮ್ರಾಜ್ಯದ ವಿಸ್ತಾರ ಒಂದು ಅಂಚಿನಿಂದ ಇನ್ನೊಂದು ಅಂಚಿಗೆ ೪೦೦೦ ಕಿಲೋಮೀಟರ್‌ಗಳಷ್ಟಾಗಿತ್ತು.

ಇಂಕಾಗಳ ಸಮಾಜ ವ್ಯವಸ್ಥೆ ಅದ್ಭುತವಾದದ್ದು. ಜಗತ್ತಿನಲ್ಲಿ ಹಿಂದೂ ಇರದ ಈಗಲೂ ಇರದ ಅತ್ಯಂತ ಶಿಸ್ತಿನ ಕಾಯಕಪ್ರವೃತ್ತಿಯ ಕಲ್ಯಾಣ ರಾಜ್ಯ ಅವರದಾಗಿತ್ತು.

ಇಡೀ ಜನಸಮುದಾಯವನ್ನು ವಯೋಮಾನದ ಮೇಲೆ ೧೨ ಗುಂಪುಗಳಾಗಿ ವಿಭಜಿಸಿ ಪ್ರತಿಯೊಂದು ಗುಂಪಿಗೂ ನಿರ್ದಿಷ್ಟ ಕೆಲಸಗಳನ್ನು ಹಂಚಲಾಗಿತ್ತು.

ಪ್ರತಿಯೊಬ್ಬ ದೃಢಕಾಯದ ಪುರುಷನು ಸೈನ್ಯದಲ್ಲಿ ಹಾಗೂ ರಸ್ತೆ ಕಾಮಗಾರಿಯಲ್ಲಿ ಸೇವೆ ಸಲ್ಲಿಸಬೇಕಾಗಿತ್ತು.

ಬೆಳೆದ ಬೆಳೆಯಲ್ಲಿ ಸರ್ಕಾರಕ್ಕೆ, ಜನಸಮುದಾಯಕ್ಕೆ ಹಾಗೂ ದೇಗುಲಗಳಿಗೆ ನಿರ್ದಿಷ್ಟ ಪ್ರಮಾಣದ ಪಾಲು ಹೋಗಬೇಕಿತ್ತು. ಸೈನ್ಯಕ್ಕೆ ಒದಗಿಸಲು, ಆಪತ್ಕಾಲಕ್ಕೆ ಬಳಸಲು ಸಾಕಷ್ಟು ಪ್ರಮಾಣದ ದಾಸ್ತಾನು ಇಟ್ಟಿರಲಾಗುತ್ತಿತ್ತು. ಭೂಕಂಪ, ಪ್ರವಾಹ ಇತ್ಯಾದಿ ಅವಘಡಗಳಾದರೆ ಇತರ ಪ್ರಾಂತ್ಯಗಳಿಂದ ನೆರವು ಧಾವಿಸುತ್ತಿತ್ತು.

ಯಾರಿಗೂ ಅನ್ನದ ಅಭಾವವಿರಲಿಲ್ಲ. ಉಡುಪಿನ ಕೊರತೆ ಇರಲಿಲ್ಲ. ವಸತಿಯ ತೊಂದರೆ ಇರಲಿಲ್ಲ. ಆದರೆ ಸಾಕಷ್ಟು ಸ್ವಾತಂತ್ರ್ಯವೂ ಇರಲಿಲ್ಲ. ಎಲ್ಲಿ ವಾಸಿಸಬೇಕು, ಯಾವ ಬೆಳೆ ಹಾಕಬೇಕು, ಯಾವ ರೀತಿ ಉಡುಗೆ ಧರಿಸಬೇಕು ಯಾರನ್ನು ಮದುವೆಯಾಗಬೇಕು ಎಲ್ಲ ನಿರ್ದೇಶನಗಳೂ ಸರ್ಕಾರದಿಂದ ಬರುತ್ತಿದ್ದವು. ಅಧಿಕಾರಿಗಳು ಹಠಾತ್ ಭೇಟಿ ನೀಡಿ ತನಿಖೆ ನಡೆಸುತ್ತಿದ್ದರು. ಸುಳ್ಳು ಹೇಳುವಿಕೆ, ಹಾದರ, ಸೋಮಾರಿತನಗಳಿಗೆ ಮರಣದಂಡನೆಯಾಗುತ್ತಿತ್ತು ಅತ್ಯಂತ ಸುಂದರ ಎಳೆಯ ಯುವತಿಯರನ್ನು ಆಯ್ದು ಅವರನ್ನು "ಸೂರ್ಯನ ಕನ್ಯೆಯರು" ಎಂದು ಮಾಡಿ ಮಠದಲ್ಲಿ ಸನ್ಯಾಸಿ ಜೀವನ ನಡೆಸುವಂತೆ ಮಾಡುತ್ತಿದ್ದರು.

ಅಸಂಭವ ಎನಿಸಬಹುದು, ಅಸಾಧ್ಯ ಎನಿಸಬಹುದು ಆದರೂ ಇಂಕಾಗಳು ತಮ್ಮ ವಿಶಾಲ ಸಾಮ್ರಾಜ್ಯವನ್ನು ಲಿಪಿ ಇಲ್ಲದೆ, ಅಂಕಿ ಸಂಖ್ಯೆಗಳ ಬಳಕೆಯೇ ಇಲ್ಲದೆ ನಿಭಾಯಿಸುತ್ತಿದ್ದರು. ರಾಜಧಾನಿಯಿಂದ ಸಂದೇಶಗಳನ್ನು ದೂತರು ಬಾಯಿಮಾತಿನ ಮೂಲಕ ಹೋಗಿ ಹರಡುತ್ತಿದ್ದರು. ಸಂದೇಶ ಸಾಗಿಗೆ ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ವ್ಯಾಪಕ ರಸ್ತೆ ಜಾಲಗಳು ವೇಗವಾಗಿ ಓಡಬಲ್ಲ ಓಟಗಾರರು (ಸಂದೇಶ ವಾಹಕರು) ನೆನಪು ಇಟ್ಟುಕೊಂಡು ಮರಳಿ ಒಪ್ಪಿಸುವ ವೃತ್ತಿ ಸಂದೇಶ ವಾಹಕರ ಸಮೂಹವೇ ಇತ್ತು. ಇವೆಲ್ಲದರ ಸಹಾಯದಿಂದ ಇಂಕಾಗಳು ಕೆಲವೇ ದಿನಗಳಲ್ಲಿ ದೇಶದ ವಿವಿಧ ಭಾಗಗಳಿಂದ ಸಾವಿರಾರು ಜನರ ಸೈನ್ಯವನ್ನು ಸೇರಿಸಲು ಸಾಧ್ಯವಾಗುತ್ತಿತ್ತು. ಈ ಸೈನ್ಯಕ್ಕೆ ಆಯುಧ ಹಾಗೂ ಆಹಾರಗಳನ್ನು ಒದಗಿಸುವ ದಾಸ್ತಾನು ಇರುತ್ತಿತ್ತು.


ಇಂಥ ಶ್ರೇಷ್ಠ ಮಟ್ಟದ ವ್ಯವಸ್ಥಿತ ಸಾಮ್ರಾಜ್ಯವನ್ನು ೧೫೩೨ರಲ್ಲಿ ಕೇವಲ ೧೭೦ ಮಂದಿ ಸ್ಪಾನಿಷ್ ಸಾಹಸಿ ಸೈನಿಕರು ಮಣ್ಣುಗೂಡಿಸಿದ್ದು ಅತ್ಯಂತ ದುರಂತಕರ.

ಫ್ರಾನ್ಸಿಸ್ಕೊ ಪಿಜಾರೊ ತನ್ನ ಸೈನಿಕರೊಡನೆ ಬಂದಿಳಿದ ಕಾಲದಲ್ಲಿ ಇಂಕಾ ಸಾಮ್ರಾಜ್ಯದಲ್ಲಿ ಸಿಂಹಾಸನಕ್ಕಾಗಿ ಒಳಜಗಳ ಆರಂಭವಾಗಿ ಐದು ವರ್ಷವಾಗಿತ್ತು. ಸೈನ್ಯ ಜರ್ಜರಿತವಾಗಿತ್ತು ಸರ್ಕಾರ ದುರ್ಬಲವಾಗಿತ್ತು ಈ ರೀತಿ ಒಳಕಲಹದಿಂದ ಭಿನ್ನಮತೀಯರಾಗಿದ್ದ ಗುಂಪು ಸ್ಪಾನಿಷರ ಮೊರೆಹೊಕ್ಕಿತು. ಸ್ಪಾನಿಷರ ಕರೆಗೆ ಓಗೊಟ್ಟು ಚಕ್ರವರ್ತಿ ಆತ ಹುಅಲ್ಪ ಸ್ಪಾನಿಶ್ ಶಿಬಿರವನ್ನು ಪ್ರವೇಶಿಸಿದಾಗ ಅವನನ್ನು ಸೆರೆ ಹಿಡಿದ ಅವನ ಸಹಸ್ರಾರು ಅನುಯಾಯಿಗಳನ್ನು ಕಗ್ಗೊಲೆಗೆ ಈಡುಮಾಡಿದರು.

ಈ ವಿದೇಶಿ ಸೈನಿಕರಿಗೆ ಬಂಗಾರದ ಆಸೆ ಇದೆ ಎಂದು ಚಕ್ರವರ್ತಿಗೆ ಅರಿವಾದಾಗ, ಆತ ಬಂಗಾರದ ದೊಡ್ಡ ರಾಶಿಯನ್ನು, ಬೆಳ್ಳಿಯ ಮತ್ತೆರಡು ದೊಡ್ಡ ರಾಶಿಗಳನ್ನು ಕೊಡುತ್ತೇನೆ ತನ್ನನ್ನು ಬಿಡಿ ಎಂದು ಅಂಗಲಾಚಿದ. ಅಂತೆಯೇ ಅಷ್ಟು ಅಮೂಲ್ಯ ಸಂಪತ್ತನ್ನು ಕೊಟ್ಟರೂ ಸ್ಪಾನಿಷರು ಅವನನ್ನು ಬಿಡದೆ ನೇಣು ಹಾಕಿದರು.

ದೇವತ್ವವುಳ್ಳ ಚಕ್ರವರ್ತಿ ಅಳಿದಮೇಲೆ ಇಂಕಾ ಸಾಮ್ರಾಜ್ಯ ಹಾಗೆಯೇ ಕರಗಿ ಹೋಯಿತು. ಈ ದುರಂತದಿಂದ ಪೆರು ಮತ್ತೆ ಮೇಲೆ ಏಳಲೇ ಇಲ್ಲ. ಜಗತ್ತಿಗೆ ಮತ್ತೆ ಪಡೆಯಲಾರದಂಥ, ಸಾಂಸ್ಕೃತಿಕ ನಷ್ಟ ಸಂಭವಿಸಿತು.

ಎಸ್. ಶ್ರೀಧರಮೂರ್ತಿ



ಸತ್ಯ, ಧರ್ಮ ಹಾಗೂ ನಿಷೆಗಳು ಸದಾ ಕಾಲವೂ ಮನುಷ್ಯನ ಅಂಗರಕ್ಷಕರು. ಹೃದಯದಲ್ಲಿ ಈ ಗುಣತ್ರಯಗಳಿರುವವರೆಗೆ ಹೋರಿಗೂ ಸೋಲಿಲ್ಲ.

—ಲೋಕಮಾನ್ಯ ತಿಲಕ

ರೂಬಿಕ್ ಘನಾಕೃತಿ

ಈಚೆಗೆ ಅಮೆರಿಕದಿಂದ ಭಾರತಕ್ಕೆ ಮರಳಿದ ಶಿಷ್ಯನೊಬ್ಬ ತನ್ನ ಹದಿಹರೆಯದ ಹೈದನಿಗೆ ನನ್ನನ್ನು "ಸುಪ್ರಸಿದ್ಧ ಗಣಿತವಿದ್ವಾಂಸ"ನೆಂದು ಪರಿಚಯಿಸಿಕೊಟ್ಟ. ಆ ಪೋರ ಒಡನೆ ನನಗೆ ರೂಬಿಕ್ ಘನಾಕೃತಿಯ, (Rubik Cubeನ) ಮೋಡಿ ಹಾಕಿದ. ಸೋಂಕು ತಾಗಿಸಿದ. ಅದೇ ನನ್ನ ಪ್ರಥಮ ದರ್ಶನ.

ಅದು ಹೇಗಿದೆ? ರಂಗುರಂಗಿನ ಗಟ್ಟಿ ಇಟ್ಟಿಗೆ. ಉದ್ದ ಅಗಲ ಎತ್ತರ ಎಲ್ಲವೂ ಸಮ. ಎಂದೇ ಅದೊಂದು ವಿಶಿಷ್ಟ ಗಣಿತಾಕೃತಿ—ಗಣಿತದ ಪರಿಭಾಷೆಯಲ್ಲಿ ಘನಾಕೃತಿ. ಆಪಾತ ಮಧುರಾಕಾರ. ಆರು ಮುಖಗಳು. ಒಂದೊಂದು ಮುಖದಲ್ಲೂ ಒಂಬತ್ತು ಬಣ್ಣ ಚೌಕಗಳು. ಬಣ್ಣಗಳಲ್ಲಿ ಏಕತೆ ಇಲ್ಲ. ಕಲಸು ಮೇಲೋಗರ. ಎಡದಿಂದ ಬಲಕ್ಕೆ ಎಣಿಸಿದರೆ ತಲಾ ಒಂಬತ್ತು ಶಿಶುಘನಾಕೃತಿಗಳು, cubelets ರಚಿಸುವ ಮೂರು ಗೋಡೆಗಳು ಕೆಳಗಿನಿಂದ ಮೇಲಕ್ಕೆ ಎಣಿಸಿದರೆ ಮತ್ತೆ ತಲಾ ಒಂಬತ್ತು ಶಿಶುಗಳು. ರಚಿಸುವ ಮೂರು ಚಪ್ಪಡಿಗಳು. ಆದರೆ ಒಟ್ಟು ಶಿಶುಗಳ ಸಂಖ್ಯೆ ೨೭+೨೭=೫೪ ಅಲ್ಲ, ೨೭ ಮಾತ್ರ. ಪ್ರಾಯಶಃ ಇಪ್ಪತ್ತಾರೇ. ಏಕೆಂದರೆ ತಿರುಳಿನಲ್ಲಿರಬಹುದಾದ ಶಿಶು ಅಗೋಚರ. ಗೋಡೆಗಳನ್ನೂ ಚಪ್ಪಡಿಗಳನ್ನೂ ಪರಡಿಗಳನ್ನೂ ಪರಸ್ಪರ ಒತ್ತೊತ್ತಾಗಿ ಬಂಧಿಸಿದೆ. ಪ್ರತಿಯೊಂದು ಗೋಡೆ ಅಥವಾ ಚಪ್ಪಡಿ ಅದರ ಕೇಂದ್ರದ ಸುತ್ತ, ಇತರ ಗೋಡೆ ಅಥವಾ ಚಪ್ಪಡಿಗಳ ವಿನ್ಯಾಸಕ್ಕೆ ಭಂಗ ಬರದಂತೆ, ಹಿಂದಕ್ಕೂ ಮುಂದಕ್ಕೂ ತಿರುಗಬಲ್ಲದು. ಗೋಡೆ, ಚಪ್ಪಡಿ ಇಲ್ಲವೇ ಶಿಶು ಯಾವುದೂ ಕಳಚಿಕೊಂಡು ಬರುವುದಿಲ್ಲ. ಬಿಡಿಶಿಶುಗಳಿಗೆ ಸಾಮೂಹಿಕ ಚಲನೆ ವಿನಾ ಸ್ವತಂತ್ರ ಚಲನೆ ಇಲ್ಲ.

ಪೋರ ನನಗೆ ಸವಾಲೆಸೆದ "ಮಾವಾ! ಪ್ರತಿಯೊಂದು ಮುಖದ ಒಂಬತ್ತು ಚೌಕಗಳ ಬಣ್ಣವೂ ಒಂದೇ ಆಗಿರುವಂತೆ ಹೊಂದಿಸುತ್ತೀರಾ ನೋಡೋಣ?"

ಘನಾಕೃತಿಯನ್ನು ನಿರ್ಲಕ್ಷ್ಯ ದೃಷ್ಟಿಯಿಂದ ತೆಗೆದುಕೊಂಡೆ—ತಿರ್ಗಿಸ್ದೆ, ತಿರುಗಿಸಿದೆ, ತಿರುತಿರುಗಿಸಿದೆ, ತಿ–ರು–ಗಿ–ಸಿ–ದೆ, ತಿಪ್ಪರಲಾಗ ಹೊಡೆದೆ. ಬಣ್ಣಗಳ ಕಲಸು ಹೊಲಸಾಯಿತು. ಕೈಲಾಸವೆತ್ತ ಹೊರಟ ರಾವಣನ ಪಾಡು. ಗಣ್ಯಗಣಿತವಿದನಾದ ನನಗೆ ಕ್ಷುದ್ರ ಗಣಿತಾಕೃತಿಯಿಂದ ಅಪಮಾನ—ಅದೂ ಸಾರ್ವಜನಿಕವಾಗಿ! ಅಭಿಮಾನಿ ಶಿಷ್ಯನಿಗೆ ತನ್ನ ಸಮರ್ಥ ಗುರುವಿನ ಚಿಂತಾಜನಕ ಸೋಲು ಸಹಿಸಲು ಸಾಧ್ಯವಾಗದ ಮಾನಸಿಕ ವೇದನೆ. ತುಂಬ

ಅಣುಗನಿಗೆ ತನ್ನ ಪ್ರಚಂಡ ತಂದೆಯ ಪ್ರಸಿದ್ಧ ಗುರುವನ್ನು ಅಂಗಾತ ಕೆಡಹಿದೆನೆಂಬ ಸಂತೃಪ್ತಭಾವನೆ.

ಅದನ್ನು ಅವನು ನನ್ನ ಕೈಯಿಂದ ಕಸಿದುಕೊಂಡ. ಕೆಲವು ನಿಮಿಷಗಳ ಕಾಲ ಚಕಚಕಚಕ ಎಂದು ಬೆರಳುಗಳ ಚಳಕ ಪ್ರದರ್ಶಿಸಿದ. ಅಗೋ! ಐವತ್ತನಾಲ್ಕು ಸಿಪಾಯಿಗಳೂ ತಮ್ಮ ಸಹಜ ನೆಲೆಗಳಲ್ಲಿ ಶಿಸ್ತಿನಿಂದ ನಿಂತು ಮಂದಹಾಸಸೂಸಿ ನನ್ನನ್ನು ಏಡಿಸಿದರು: ಕೆಂಪು ಮುಖ, ನೀಲಿ ಮುಖ, ಹಸಿರು ಮುಖ, ಹಳದಿ ಮುಖ, ಬಿಳಪು ಮುಖ, ಕಪ್ಪು ಮುಖ. ಅವನದು ಗೆಲುಮುಖ, ನನ್ನದು ಜೋಲುಮುಖ!

ಈ ಹಿಕಮತ್ತಿನ ಹಿನ್ನೆಲೆಯ ಕರಾಮತ್ತು ಏನು?

ಅವನು ಮತ್ತೆಮತ್ತೆ ತನ್ನ ಕೈಚಕ ಪ್ರದರ್ಶಿಸಿದ. ಅದರಲ್ಲಿ ಯಾವ ಮೋಡಿ ಜಾದು ಮಾಟ ಇರಲಿಲ್ಲ. ಆದರೆ ನನಗೆ ಮಾತ್ರ ಅದು ಕರಗತವಾಗಲಿಲ್ಲ. ಅಜನ್ಮ ಕಲಾವಿದನ ನೈಜ ಪ್ರತಿಭೆ ಅವನದು. ತನ್ನ ನಡೆಗಳನ್ನು ಅವನು ವಿವರಿಸಲಾರದವನಾಗಿದ್ದ. ವಿಮರ್ಶಕನ ಶಾಸ್ತ್ರೀಯ ದೃಷ್ಟಿ ನನ್ನದು. ಅವನ ನಡೆಗಳಲ್ಲಿ ಅಡಗಿದ್ದ ಗಣಿತವನ್ನು ನಾನು ಅರಿಯಬಲ್ಲವನಾಗಿದ್ದೆ—ಅನುಕರಿಸಲಾಗದಿದ್ದರೂ.

ಅಂದ ಹಾಗೆ, ಸಫಲ ವಿಮರ್ಶಕ ವಿಫಲ ಕಲಾವಿದನೇ?

ರೂಬಿಕ್ ಘನಾಕೃತಿ ಎಂದರೇನು? ಎರ್ನೊ ರೂಬಿಕ್ ಅವನ ಹೆಸರು. ಹಂಗರಿ ದೇಶದ ಬುಡಾಪೆಸ್ಟ್ ನಗರದಲ್ಲಿಯ ವಾಣಿಜ್ಯ ಕಲಾಶಾಲೆಯಲ್ಲಿ ವಾಸ್ತುಶಿಲ್ಪದ ಅಧ್ಯಾಪಕ. ಉದ್ದ ಅಗಲ ಎತ್ತರ ಎಂಬ ಮೂರು ಆಯಾಮಗಳಲ್ಲಿರುವ ವಸ್ತುವಿನ ಮಾನಸಿಕ ಮಾದರಿ ರೂಪಿಸಿಕೊಂಡು ಹಲಬಗೆಯ ಸರಿತ್ರಕ್ಕೆ ಆದನ್ನು ಒಳಪಡಿಸಿದಾಗ ಅದು ಪ್ರಾರಂಭದಲ್ಲಿ ಪ್ರದರ್ಶಿಸುವ ವಿನ್ಯಾಸಕ್ಕೂ ಅಂತ್ಯದಲ್ಲಿ ಪ್ರದರ್ಶಿಸುವ ವಿನ್ಯಾಸಕ್ಕೂ ನಡುವೆ ಇರುವ ಸಂಬಂಧವೇನು? ವಾಸ್ತುಶಿಲ್ಪದ ಈ ಸಮಸ್ಯೆಯನ್ನು ವಿದ್ಯಾರ್ಥಿಗಳಿಗೆ ವಿವರಿಸುತ್ತಿದ್ದ. ಅವರ ಕಲ್ಪನೆಗೆ ಸಾಣೆ ಹಿಡಿಯಲು ಅವನು ೨೭ ಸರ್ವಸಮ ಶಿಶುಘನಾಕೃತಿಗಳನ್ನು ತೆಗೆದುಕೊಂಡು ಉದ್ದ ಅಗಲ ಎತ್ತರ ಆಯಾಮಗಳಲ್ಲಿ ತಲಾ ಮೂರು ಇರುವಂತೆ ಅಡಕವಾಗಿ ಒಟ್ಟಿದ—ಮನೆ ಕಟ್ಟುವಾಗ ಗಾತ್ರ ಶಿಲೆಗಳನ್ನೋ ಇಟ್ಟಿಗೆ ಗಟ್ಟಿಗಳನ್ನೋ ಓರಣವಾಗಿ ಪೇರುವುದಿಲ್ಲವೇ, ಹಾಗೆ. ರೂಬಿಕ್‌ನ ಈ ಮಾನವ ಶಿಶು ರೂಪುಗೊಂಡದ್ದು ೧೯೭೪ರಲ್ಲಿ. ಮರು ವರ್ಷವೇ ಅಂದರೆ ೧೯೭೫ರಲ್ಲಿ ಆದನ್ನು ಯಾಂತ್ರಿಕ ವಾಸ್ತವತೆಯಾಗಿ ಪೈ ಬಳಿಸಿ ಏಕಸ್ವ

Patent ಪಡೆದ. ಇದೇ ಇಂದಿನ ರೂಬಿಕ್ ಘನಾಕೃತಿ—ಹೇಗೆ ನೋಡಿದರೂ ಹೇಗೆ ತಿರುಗಿಸಿದರೂ ಜೊತೆ ಬಿಡದ ವಿನೂತನ ಕ್ರಿಯಾವಳಿಗಳ ಒಕ್ಕೂಟ. ಇದೊಂದು ಅದ್ಭುತ ಯಾಂತ್ರಿಕ ಸಿದ್ಧಿ.

ಅದೇ ಸುಮಾರಿಗೆ ಜಪಾನಿನ ಟೆರುಟೋಷಿ ಇಷಿಗೇ ಎಂಬ ಎಂಜಿನಿಯರ್ ಕೂಡ, ಸ್ವತಂತ್ರವಾಗಿ, ಈ ಸಿದ್ಧಿಯನ್ನು ಪಡೆದಿದ್ದ (೧೯೭೬). ಎಲ್ಲ ನೂತನ ಭಾವನೆಗಳೂ ಸಮಕಾಲೀನ ಹವೆಯಲ್ಲಿ ತೇಲುತ್ತಿರುವುವು. ಅವನ್ನು ಆವಾಹಿಸಿ ಪ್ರತಿಷ್ಠಾಪಿಸುವ ಯೋಗ ಕೆಲವೇ ಕೆಲವು ಸಿದ್ಧ ಮತ್ತು ಪರಿಣತ ಮನಸ್ಸು ಗಳಿಗೆ ಮಾತ್ರ ಲಭ್ಯ. ರೇಡಿಯೊ ಅಲೆಗಳಿಗೂ ರೇಡಿಯೊ ಉಪಕರಣಗಳಿಗೂ ನಡುವೆ ಇರುವ ಒಂದು ಬಗೆಯ ಸಂಬಂಧವಿದು.

ಆಟದ ವಸ್ತುವಾಗಿ, ಕಾಲಕಳೆವ ಅಥವಾ ನಾವೇ ಕಳೆದುಹೋಗುವ ಆಟವಾಗಿ ಇಲ್ಲವೇ ಮನಸ್ಸಿನ ವಿವಿಧ ಲಹರಿಗಳ ಪ್ರಕಟಿತ ರೂಪವಾಗಿ ರೂಬಿಕ್ ಘನಾಕೃತಿ ಸಂದಿನ ಕೆಲವೇ ವರ್ಷಗಳಲ್ಲಿ ಪ್ರಪಂಚಾದ್ಯಂತ 'ಪಿಡುಗಾಗಿ' ಹಬ್ಬಿತು. ಖ್ಯಾತಗಣಿತಜ್ಞರು ಇದರ ಚಲನ ವಲನಗಳಲ್ಲಿಯೂ ವಿನ್ಯಾಸ ವೈವಿಧ್ಯ ಗಳಲ್ಲಿಯೂ ನವಗಣಿತ ಸಾಧ್ಯತೆಗಳನ್ನು ಗುರುತಿಸಿದರು. ಅಂದ ಮೇಲೆ ರೂಬಿಕ್ ಘನಾಕೃತಿ ಪಂಡಿತ ಪಾಮರರ ಮನೆಗಳಲ್ಲಿ ಸರ್ವತ್ರ ಪ್ರತಿಷ್ಠೆಯ ದ್ಯೋತಕ ವಾಗಿ ವಿಜೃಂಭಿಸಿದ್ದು ನಿರೀಕ್ಷಿತವೇ.

ಇದೊಂದು ಅದ್ಭುತ ವಿಶ್ವಕರ್ಮಸೃಷ್ಟಿ—ಅತ್ಯಂತ ಜಟಿಲವೆಂದೆನಿಸುವ ರಚನೆಯೊಳಗೆ ಅತ್ಯಂತ ಸರಳ ಯಂತ್ರವಿನ್ಯಾಸ. ಇದನ್ನು ಖುದ್ದು ನೀವೇ ಕಳಚಿ–ಮುರಿದು ಅಲ್ಲ–ಮರುಜೋಡಿಸಿದಾಗ ಈ ಹೇಳಿಕೆಯ ತಥ್ಯ ಮನವರಿಕೆ ಆದೀತು. ಇದರಲ್ಲಿ ಮೂರುಬಗೆಯ ಶಿಶುಘನಾಕೃತಿಗಳಿವೆ. ಒಂದು ಮುಖಕ್ಕೆ ಬಣ್ಣ ಬಳಿದಿರುವುವು ಆರು—ಇವು ಮುಖಕೇಂದ್ರಗಳು. ಎರಡು ಮುಖಗಳಿಗೆ ಬಣ್ಣ ಬಳಿದಿರುವವು ಹನ್ನೆರಡು—ಇವು ಕೆಳ ಮತ್ತು ಮೇಲು ಚಪ್ಪಡಿಗಳಲ್ಲಿ ಪ್ರತಿ ಯೊಂದು ಬದಿಯ ನಡುವಿನವು ಎಂಟು ಮತ್ತು ನಡುಚಪ್ಪಡಿಯ ಮೂಲೆಗಳವು ನಾಲ್ಕು. ಮೂರು ಮುಖಗಳಿಗೆ ಬಣ್ಣ ಬಳಿದಿರುವವು ಎಂಟು—ಇವು ಘನಾ ಕೃತಿಯ ಮೂಲೆಗಳು. ಹೀಗೆ ರೂಬಿಕ್ ಘನಾಕೃತಿಯಲ್ಲಿ ಒಟ್ಟು ೨೬ ಶಿಶು ಘನಾಕೃತಿಗಳು ಮತ್ತು ೫೪ ವರ್ಣಮುಖಗಳು ಅಥವಾ ಬಣ್ಣಚೌಕಗಳು ಇವೆ. ಆರು ಮುಖಕೇಂದ್ರಗಳ ಬಣ್ಣಗಳು ಆರು ಬಗೆ. ಈ ಐವತ್ತನಾಲ್ಕು ಬಣ್ಣಚೌಕ ಗಳು ಸಾಧಾರಣವಾಗಿ ಯಾವ ಕ್ರಮವೂ ಇಲ್ಲದೆ ಹಂಚಿಹೋಗಿರುತ್ತವೆ. ಆದ್ದರಿಂದ ಪ್ರತಿಯೊಂದು ಮುಖವೂ ಹಲವಾರು ಬಣ್ಣಗಳಿಂದಾದ ಒಂಬತ್ತು

ಚೌಕಗಳ ಸಂಕಲನವಾಗಿ ಕಾಣುತ್ತವೆ. ಬಣ್ಣಗಳನ್ನು ವ್ಯವಸ್ಥಿತವಾಗಿ ಹಂಚಿದರೆ ಅವು ಆರು ಬೇರೆ ಬೇರೆ ಬಗೆಗಳಲ್ಲಿ ಆಳವಡುತ್ತವೆ. ಉದಾಹರಣೆಗೆ ಕೆಂಪು, ಹಸಿರು, ಹಳದಿ, ನೀಲಿ, ಬಿಳುಪು, ಕಪ್ಪು. ಆರು ಮುಖಕೇಂದ್ರಗಳ ಬಣ್ಣಗಳು ಈ ಆರು ಬಗೆಗಳು.

ರೂಬಿಕ್ ಘನಾಕೃತಿಯ ನಿಜ ಸಮಸ್ಯೆ ಏನೆಂದು ಈಗ ನೋಡೋಣ: ಇದರ ಮುಖಗಳಲ್ಲಿಯ ಬಣ್ಣ ಚೌಕಗಳ ವಿತರಣೆ ಕ್ರಮರಹಿತವಾಗಿದೆ. ಅಂದರೆ ಈ ವಿತರಣೆ ಆರು ಬಣ್ಣಗಳ ಮಿಶ್ರಣವಾಗಿದೆ. ಈ ಘನಾಕೃತಿಯ ಪರಿಹಾರವೆಂದರೇನು? ಘನಾಕೃತಿಯ ತಲಾ ಒಂಬತ್ತು ಶಿಶುಘನಾಕೃತಿಗಳು ರಚಿಸುವ ಮೂರು ಚಪ್ಪಡಿಗಳನ್ನೊ ಮೂರು ಗೋಡೆಗಳನ್ನೊ ಹಿಂದಕ್ಕೆ, ಮುಂದಕ್ಕೆ ಬಲಕ್ಕೆ ಅಥವಾ ಎಡಕ್ಕೆ ಬೇಕಾದಂತೆ ತಿರುಗಿಸಿ ಪ್ರತಿಯೊಂದು ಮುಖದಲ್ಲಿಯೂ ಬಣ್ಣಗಳಲ್ಲಿ ಏಕತೆ ತರುವುದು. ಅಂದರೆ ಒಂದೊಂದು ಮುಖದ ಎಲ್ಲ ಒಂಬತ್ತು ಚೌಕಗಳ ಬಣ್ಣಗಳೂ ಒಂದೇ ಆಗುವಂತೆ ಮಾಡುವುದು. ಘನಾಕೃತಿಯ ಈ ಸ್ಥಿತಿಗೆ ಆರಂಭ ಸ್ಥಿತಿ ಅಥವಾ ವರ್ಣಸಮತೋಲಸ್ಥಿತಿ ಎಂದು ಹೆಸರು.

ಹಾಗಾದರೆ ಆರಂಭ ಸ್ಥಿತಿಯಲ್ಲಿ ಅಂದರೆ ವರ್ಣಸಮತೋಲದಲ್ಲಿ ಇರದ ಘನಾಕೃತಿಯನ್ನು ಆ ಸ್ಥಿತಿಗೆ ತರುವುದು ಹೇಗೆ? ಈ ಸಮಸ್ಯೆಯನ್ನು ಲಘುವಾಗಿ ಪರಿಗಣಿಸಿ ಚಪ್ಪಡಿಗಳನ್ನೂ ಗೋಡೆಗಳನ್ನೂ ಸ್ವೇಚ್ಛೆಯಂತೆ ತಿರುಗಿಸುವವರು ವರ್ಣ ಸಮತೋಲಏದುವುದಕ್ಕಿಂತ ಎಷ್ಟೋಷ್ಟೊ ಮೊದಲೇ ಮಾನಸಿಕ ಸಮತೋಲ ಕಳೆದುಕೊಂಡು ಹತಾಶರಾಗುವುದು ಖಾತ್ರಿ.

ಯಾವುದೇ ಘನಾಕೃತಿಯಲ್ಲಿ ಸಾಧ್ಯವಾಗುವ ವಿವಿಧ ವರ್ಣಸಂಯೋಜನೆಗಳ ಸಂಖ್ಯೆ 'ಕೇವಲ' ೪೩,೨೫೨,೦೦೩,೨೭೪,೪೮೯,೮೫೬,೦೦೦ ಅಥವಾ ಸುಮಾರು ೪×೧೦^{19}. ಇನ್ನು ಶಿಶುಘನಾಕೃತಿಗಳನ್ನು ಕಳಚಿ ಸ್ಥಾನಾಂತರಿಸಿದರೆ ದೊರೆಯುವ ಸಂಖ್ಯೆ ಇದಕ್ಕಿಂತ 'ತುಸು'ವೇ ದೊಡ್ಡದು: ೫೧೯, ೦೨೪,೦೩೯,೨೯೩,೮೭೮,೨೭೨,೦೦೦ ಅಥವಾ ಸುಮಾರು ೫×೧೦^{20}. ಈಗ ನೀವು ರೂಬಿಕ್ ಘನಾಕೃತಿಯನ್ನು ಎಡ ಮುಂಗೈಯಲ್ಲಿ ಧರಿಸಿ ಅವರ ಎಲ್ಲ ೫×೧೦^{20} ವರ್ಣಸಂಯೋಜನೆಗಳನ್ನೂ ಹೊಂದಿಸಿಯೇ ಹೊಂದಿಸುತ್ತೇನೆಂಬ ಪ್ರತಿಜ್ಞೆಯನ್ನು ಬಲಗೈ ಎತ್ತಿ ಘೋಷಿಸಿ ಕಾರ್ಯೋದ್ಯುಕ್ತರಾಗುವಿರೆಂದು ಭಾವಿಸೋಣ. ನಿರ್ದಿಷ್ಟ ಯೋಜನಾನುಸಾರ ಸೆಕೆಂಡಿಗೆ ಒಂದು ಸಂಯೋಜನೆಯ ದರದಲ್ಲಿ ಎಡೆಬಿಡದೆ ಮುಂದುವರಿಯುತ್ತೀರಿ. ಸುಮಾರು ೫×೧೦^{20} ಸೆಕೆಂಡ್ ಅಥವಾ ೧.೬×೧೦^{13} ವರ್ಷ ಗತಿಸುವಾಗ ದೀಕ್ಷಾವಿಮುಕ್ತರಾಗು

ತ್ತೀರಿ. ಈ ಮಹಾಯಾನದ ವೇಳೆ ಒಮ್ಮೆ ಆರಂಭಸ್ಥಿತಿ ಕೂಡ ತಲಪಿರುತ್ತೀರಿ. ವಿಶ್ವದ ವಯಸ್ಸು ಸುಮಾರು ೨×೧೦^{10} ವರ್ಷವೆಂಬುದನ್ನು ಗಮನಿಸಿದರೆ ನಿಮ್ಮ ಘೋರ ಶಪಥವೀಡೇರಲು ನೀವು ವಿಶ್ವದ ವಯಸ್ಸಿನ ಒಂಭೈನೂರುಪಟ್ಟು ಕಾಲ ಸತತ ಕಾರ್ಯಮಗ್ನರಾಗಿರಬೇಕಾಗುವುದೆಂದು ಗಣನೆ ತಿಳಿಸುತ್ತದೆ.

ಸಮಸ್ಯಾಪರಿಹಾರ ಸುಲಭ ಅಲ್ಲ. ಆದರೆ ಅಸಾಧ್ಯ ಖಂಡಿತ ಅಲ್ಲ. ನನ್ನ ಶಿಷ್ಯನ ಮಗ ಕೆಲವೇ ನಿಮಿಷಗಳಲ್ಲಿ ಪರಿಹರಿಸಿದ್ದನ್ನು ನೋಡಿದ್ದೇನೆ. ಎಷ್ಟು ಚುರುಕಾಗಿ ಮತ್ತು ಎಷ್ಟು ಕಡಿಮೆ ತಿರುಗುಚಲನೆಗೈದು ಗುರಿತಲಪುವುದು ಸಾಧ್ಯ ಎಂಬುದೊಂದು ಸ್ವಾರಸ್ಯಕರ ಅಧ್ಯಯನ. ಹದಿನಾರರ ಹರೆಯದ ಇಂಗ್ಲಿಷ್ ಅಣುಗ ನಿಕೊಲಾಸ್ ಹಾಮಂಡ್ ತೆಗೆದುಕೊಳ್ಳುವ ಕಾಲ ಸರಾಸರಿಯಲ್ಲಿ ೪೦ ಸೆಕೆಂಡುಗಳು. ಇಪ್ಪತ್ತೈದು ವಯಸ್ಸಿನ ಫ್ರೆಂಚ್ ತರುಣ ಜೆರೋಮ್ ಜೇನ್‌ಚಾರ್ಲ್ಸ್ ಕೇವಲ ೩೨ ಸೆಕೆಂಡುಗಳಲ್ಲೇ ಮುಗಿಸಿಬಿಡುತ್ತಾನೆ.

ಪರಿಹಾರ ಸಾಧಿಸಿದವರೆಲ್ಲರೂ ತಿಳಿದೊ ತಿಳಿಯದೆಯೊ ಕೆಲವು ಗಣಿತನಿಯಮಗಳನ್ನು ಅನುಸರಿಸಿರುವುದಂತೂ ನಿಜ. ಇವರು ನಡೆದುಬಂದ ದಾರಿಯನ್ನು ಗಣಿತದ ಪರಿಭಾಷೆಯಲ್ಲಿ ನಿರೂಪಿಸಿದರೆ ಅದೊಂದು ಪುಟ್ಟ ಸಂಶೋಧನ ಪ್ರಬಂಧವಾಗುತ್ತದೆ. ಏಕೆಂದರೆ ತಲೆಗಳು ಎಷ್ಟೋ ಹಾದಿಗಳು ಅಷ್ಟು. ಇಲ್ಲಿ ಅನುಸರಿಸಬೇಕಾದ ಶಿಷ್ಟಗಣಿತ ಪರಿಭಾಷೆಯನ್ನು ವಿವರಿಸುವ ಪುಸ್ತಕಗಳಿವೆ.

ಘನಾಕೃತಿ ಸಮಸ್ಯೆಯನ್ನು ವೈಜ್ಞಾನಿಕವಾಗಿ ಅಧ್ಯಯಿಸುವಾತನಿಗೆ ಘನಾಕೃತಿಕಾರ cubist ಎಂದೂ ಈ ಅಧ್ಯಯನಕ್ಕೆ ಘನಾಕೃತಿತ್ವ cubism ಎಂದೂ ಹೆಸರು. ಭವಿಷ್ಯದ ಒಬ್ಬ ಘನಾಕೃತಿಕಾರ ಅಕ್ಷರಶಃ ಒಂದು ವಿಜ್ಞಾನವನ್ನೇ ಸೃಷ್ಟಿಸಬೇಕಾಗುವುದೆಂದು ಬರ್ನಿ ಗ್ರೀನ್‌ಬರ್ಗ್ ಬರೆದಿದ್ದಾನೆ. ಘನಾಕೃತಿತ್ವ ವಿಧಿಸುವ ನಿರ್ಬಂಧವಿದು. ಆತ ತನಗೆ ತಾನೇ ಸಂಶೋಧನವಲಯವನ್ನು ನಿರ್ಧರಿಸಿ ಪ್ರಯೋಗಗಳನ್ನು ರೂಪಿಸಿ ತತ್ತ್ವಗಳನ್ನು ಶೋಧಿಸಿ ಸಿದ್ಧಾಂತಗಳನ್ನು ಕಟ್ಟಿ ಇವು ಫಲಪ್ರದವಾಗದಾಗ ಎಲ್ಲವನ್ನೂ ನಿರಾಕರಿಸಿ ಮತ್ತೆ ಮೊದಲಿನಿಂದ ತೊಡಗಿ ಮುನ್ನಡೆಯಬೇಕಾಗುತ್ತದೆ.

ಒಂದು ಮುಖದಲ್ಲಿ, ಅಂದರೆ ಒಂದೇ ಸಮತಲದ ಮೇಲಿರುವ ಒಂಬತ್ತು ಬಣ್ಣ ಚೌಕಗಳಲ್ಲಿ ವರ್ಣಸಮತೋಲ ತರುವುದು ಕಷ್ಟವಲ್ಲ. ಆ ಮುಖದ ಕೇಂದ್ರಚೌಕದ ಬಣ್ಣವೇ ಉಳಿದ ಚೌಕಗಳ ಬಣ್ಣವೂ ಆಗಬೇಕು. ಏಕೆಂದರೆ ಗೋಡೆಯನ್ನಾಗಲಿ ಚಪ್ಪಡಿಯನ್ನಾಗಲಿ ತಿರುಗಿಸುವಾಗ ಅವರ ಕೇಂದ್ರಚೌಕ ಸ್ವಸ್ಥಾನದಲ್ಲಿ ತಿರುಗುವುದೇ ಹೊರತು ಸ್ಥಾನಾಂತರಗೊಳ್ಳುವುದಿಲ್ಲ. ಹೆಚ್ಚಿ

ನವರು ಮುಖಗಳವರೆಗೂ ವರ್ಣ ಸಮತೋಲ ಸಾಧಿಸುವುದರಲ್ಲಿ ಯಶಸ್ವಿಗಳಾಗುತ್ತಾರೆ. ಐದನೆಯದರಲ್ಲಿ ಸಮತೋಲ ಬಂದುದಾದರೆ ಆರನೆಯದರಲ್ಲಿ ತಂತಾನೇ ಬರುವುದೆಂಬುದು ಸ್ವಯಂವೇದ್ಯ. ಪರ್ವತಾರೋಹಣದಲ್ಲಿಯಂತೆ ಇಲ್ಲಿಯೂ ಈ ಕೊನೆಯ ಘಟ್ಟವೇ ಘನಾಕೃತಿಕಾರನ ಧೃತಿಗೆ ಎದುರಾಗುವ ನಿಜ ಸವಾಲು.

ಎಳೆಯರು ದೊಡ್ಡವರಿಗಿಂತ ಸಲೀಸಾಗಿ ಕೈಚಳಕ ಪ್ರದರ್ಶಿಸುವುದನ್ನು ಕಂಡಿದ್ದೇನೆ. ಅವರು ಗಣಿತಕ್ಕೆ ಪ್ರವೇಶ ಪಡೆಯದೆಯೂ ಅಂತರ್ಬೋಧೆಯಿಂದಲೇ ಗಣಿತ ವಿಧಾನ ಅನುಸರಿಸುವುದು ಕಂಡು ಬೆರಗಾಗಿದ್ದೇನೆ. ಗಣಿತ ಪರಿಭಾಷೆಗೆ ತರ್ಜುಮಿಸಿದರೆ ಈ ಲಿಖಿತರೂಪ ಇವರ ಮಾನಸಿಕ ಸಂರಚನೆಗೆ ಹಿಡಿದ ಕನ್ನಡಿ ಆದೀತು.

ರೂಬಿಕ್ ಘನಾಕೃತಿಯ ಸಮಸ್ಯಾಪರಿಹಾರದ ವೇಳೆ ತಲೆ ಎತ್ತಿರುವ ಕೆಲವು ಸ್ವಾರಸ್ಯಕರ ಪ್ರಶ್ನೆಗಳಿವೆ.

ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಹೋಗಲು ಎಷ್ಟು ಹಾದಿಗಳಿವೆ? ಇವುಗಳ ಪೈಕಿ ನೇರ ದಾರಿಯಾವುದಯ್ಯಾ ವೈಕುಂಠಕೆ?

ವರ್ತಮಾನಸ್ಥಿತಿ ಆರಂಭ ಸ್ಥಿತಿಯಿಂದ ಎಷ್ಟು ಹಿಂದೆ ಇದೆ?

ಆರಂಭ ಸ್ಥಿತಿಗೆ ಸಮೀಪತಮ ಅಂತೆಯೇ ದೂರತಮ ಸ್ಥಿತಿಗಳು ಎಷ್ಟು ಇವೆ?

ಒಂದು ಸ್ಥಿತಿಯಿಂದ ತೊಡಗಿ ನಿರ್ದಿಷ್ಟ ಚಲನೆಗಳನ್ನು ಮುಗಿಸಿದ ಬಳಿಕ ತಲಪುವ ಸ್ಥಿತಿ ಯಾವುದೆಂಬುದನ್ನು ಮುನ್ನುಡಿಯಬಹುದೇ?

ಘನಾಕೃತಿಯ ಮುಖಗಳಲ್ಲಿ ಎಷ್ಟು ಬಗೆಯ ಸಮಾಂಗೀಯ ಪ್ರರೂಪಗಳನ್ನು (symmetrical patterns) ತರಬಹುದು?

ಈಗ ಇರುವ ಘನಾಕೃತಿ ಉದ್ದ ಅಗಲ ಎತ್ತರ ತಲಾ ೩ರ ದರ್ಜೆಯದು. ಹಾಗಾದರೆ ತಲಾ ೨ರ ದರ್ಜೆಯದು ಇದೆಯೇ? ಇದೆ. ತಲಾ ೪ರ ದರ್ಜೆಯದು? ನೆದರ್ಲೆಂಡ್ಸಿನಲ್ಲಿ ತಯಾರಿಸಲಾಗುತ್ತಿದೆಯಂತೆ. ಇನ್ನೂ ಮೇಲಿನ ದರ್ಜೆಯವು? ಎಲ್ಲಿಯವರೆಗೆ? ಇದೊಂದು ಎಂಜಿನಿಯರಿಂಗ್ ಸಮಸ್ಯೆ.

ರೂಬಿಕ್ ಒಗಟಿನಿಂದ ಸ್ಫೂರ್ತಿ ಪಡೆದ ಇತರ ಸದೃಶ ಒಗಟುಗಳಿವೆಯೇ? ಇವೆ. ಉದಾಹರಣೆಗೆ ಮಾಯಾಗೋಳ, ಮಣಿಗೋಳ ಮುಂತಾದವು.

ನೀವು ಯಾವ ವಯಸ್ಸಿನವರೇ ಆಗಿರಬಹುದು, ನಿಮ್ಮ ವೃತ್ತಿ ಏನೇ ಇರಬಹುದು. ಗಣಿತ ನಿಮ್ಮ ಪ್ರಿಯ ವಿಷಯವಾಗಿರಬಹುದು ವೈರಿ ವಿಷಯವೇ

ಆಗಿರಬಹುದು—ನೀವು ಮಾತ್ರ ವೈಶಂಪಾಯನ ಸರೋವರ ಹೊಕ್ಕರೂ ರೂಬಿಕ್ ಸಾಂಕ್ರಾಮಿಕತೆಯಿಂದ ಪಾರಾಗಲಾರಿರಿ. ಗಾಳಿಯಿಂದ, ನೀರಿನಿಂದ ಇಲ್ಲವೇ ಬೆಳಕಿನಿಂದ ಹೇಗೆ ತಾನೇ ತಪ್ಪಿಸಿಕೊಂಡು ಇರಬಲ್ಲಿರಿ? ನಿಮ್ಮ ಅರಿವಿಗೆ ಬಾರದಂತೆ ನಿಮ್ಮ ಗಣಿತ ಪ್ರತಿಭೆಯನ್ನು ಪ್ರಕಟಿಸಬಲ್ಲ ಈ ಮಾಂತ್ರಿಕ ಘನಾಕೃತಿಯ ಸ್ಪರ್ಶದಿಂದ ನಿಮಗೆ ಇಹದಲ್ಲಿ ಸುಖ ಉಂಟು, ಶಾಂತಿ ಉಂಟೋ ಇಲ್ಲವೋ ತಿಳಿಯದು, ಪರದಲ್ಲಿ ಶಾಂತಿ ಸದ್ಗತಿ ಎರಡೂ ಉಂಟು. ಏಕೆಂದರೆ ಸಾಕ್ಷಾತ್ ಪರಮಾತ್ಮನ ಅಧುನಾತನ ಹವ್ಯಾಸ (latest hobby) ರೂಬಿಕ್ ಘನಾಕೃತಿಯ ಅಸಂಖ್ಯ ಸಾಧ್ಯತೆಗಳನ್ನು ಅನಾವರಣಗೊಳಿಸುವುದು ಎಂಬುದಾಗಿ ಗಣಿತ ಚಿತ್ರಗುಪ್ತರ ಅನ್ವೇಷಣೆಗಳಿಂದ ಈಚೆಗೆ ತಿಳಿದುಬಂದಿದೆ.

ಜಿ. ಟಿ. ನಾರಾಯಣರಾವ್



ನಾವು ಬಡವರಾಗಿರಬಹುದು. ಆದರೆ ನಮಗಿಂತಲೂ ಜಗತ್ತಿನಲ್ಲಿ ಬಡವರು ಇದ್ದಾರೆಂಬುದನ್ನು ತಿಳಿಯಬೇಕು. ಈ ತಿಳುವಳಿಕೆಯಿಂದ ನಮ್ಮ ಸುಖದ ಕಲ್ಪನೆಯನ್ನು ನಾವು ಹೆಚ್ಚಿಸಿಕೊಳ್ಳಬಹುದು.

ಕಾರ್ಯದಲ್ಲಿ ಕರ್ತವ್ಯದೃಷ್ಟಿಯೊಂದೇ ಇರಬೇಕೆ ವಿನಹ, ಇತರರನ್ನು ಮೆಚ್ಚಿಸುವ ದುರ್ಬುದ್ಧಿ ಇರಬಾರದು.

—ವಿನೋಬಾ

ಸ್ವಾತಂತ್ರ್ಯವಿಲ್ಲದ ಮಾನವನಿಗೆ ಬೆಲೆಯಿಲ್ಲ. ಸಮತೆಯಿಲ್ಲದ ಸ್ವಾತಂತ್ರ್ಯಕ್ಕೆ ನೆಲೆಯಿಲ್ಲ. ಬಂಧುತ್ವವಿಲ್ಲದ ಸಮತೆಗೆ ಶೋಭೆಯಿಲ್ಲ,

—ರೂಸೋ

" ಪ್ರಾಚೀನ ಪಂಚಾಂಗಗಳ ರಹಸ್ಯ "

" ಸೂಕ್ಷ್ಮ ಯಂತ್ರಗಳ ಶೋಧನೆಯಾಗಿರದಿದ್ದ ಕಾಲದಲ್ಲೂ ಪ್ರಾಚೀನ ಮಾನವರು ಆಶ್ಚರ್ಯಕರ ರೀತಿಯಲ್ಲಿ ಕಾಲದ ಸರಿಯಾದ ಗಣನೆಯನ್ನು ಮಾಡುತ್ತಿದ್ದರು ಹೇಗೆ? "

ಇದು ಸುಲಭವಾಗಿ ಎಲ್ಲೆಡೆಯಲ್ಲೂ ದೊರೆಯುವಂಥವುದಾದರೂ ನಾವು ಅದರ ಬಗ್ಗೆ ಅಷ್ಟಾಗಿ ಗಮನವನ್ನೇ ನೀಡುವುದಿಲ್ಲ. ಆದರೆ ಇದು ನಾಗರೀಕತೆಯ ಮಹತ್ವಪೂರ್ಣವಾದ ದಾಖಲೆಯಾಗಿದೆ. ಮಾನವ ತನ್ನ ತರ್ಕಶಕ್ತಿಯನ್ನು ಪಡೆದ ಪ್ರಯತ್ನದ ಪರಾಕಾಷ್ಠೆಯೆನಿಸಿದೆ. ನಾವಿದನ್ನು ' ಪಂಚಾಂಗ ' ಅಥವಾ ' ಕ್ಯಾಲೆಂಡರ್ ' ಎನ್ನುತ್ತೇವೆ.

ಪ್ರಾಚೀನ ಹಾಗೂ ಆಧುನಿಕ ಮಾನವರಿಬ್ಬರ ಅಸ್ತಿತ್ವಕ್ಕಾಗಿ ಸೂರ್ಯ, ಚಂದ್ರ ಹಾಗೂ ಗ್ರಹಗಳ ಗತಿಯ ಪೂರ್ವಜ್ಞಾನವೂ ಸಹ ಅತ್ಯವಶ್ಯಕವೆನಿಸಿದೆ. ಋತುಗಳು ಎಂದು ಬದಲಾಗುತ್ತವೆ? ಹಾಗೂ ಪ್ರವಾಹ, ಮಳೆ, ಬಿರುಗಾಳಿ, ಹಿಮ, ಬೇಸಿಗೆ ಇತ್ಯಾದಿಗಳನ್ನು ಎಂದು ಎದುರಿಸಬೇಕಾಗಬಹುದು? ಎಂಬ ಸಂಗತಿಗಳನ್ನು ತಿಳಿಯದಿದ್ದರೆ ಕೃಷಿಕರು ಕಷ್ಟಗಳನ್ನು ಅನುಭವಿಸಬೇಕಾಗ ಬಹುದು. ಬೆಳೆ ಬೆಳೆಯಲು ಸಾಧ್ಯವಾಗದೆ ಜನರೆಲ್ಲ ಕಷ್ಟಗಳನ್ನು ಸಹಿಸ ಬೇಕಾಗಬಹುದು, ಉಪವಾಸವಿರಬೇಕಾಗಬಹುದು. ಆದರೆ ದೂರದರ್ಶಕದಂಥ ಅಥವಾ ಬೇರಾವುದೇ ಆಧುನಿಕ ಕೋನ ಯಂತ್ರಗಳ ಸಹಾಯವಿಲ್ಲದೇ ಪ್ರಾಚೀನ ಮಾನವರು ಖಗೋಲ ವಿಜ್ಞಾನದ ಸೂಕ್ಷ್ಮ ಜ್ಞಾನವನ್ನು ಹೇಗೆ ಪಡೆದರು ? ಎಂಬುದು ದೀರ್ಘ ಕಾಲದವರೆಗೂ ರಹಸ್ಯವಾಗಿತ್ತು. ಹಿಂದಿನ ೨೫ ವರ್ಷಗಳಲ್ಲಿ ಗಣಕ ಯಂತ್ರಗಳ ಸಹಾಯದಿಂದ ನಾವಿಂದು ಇವುಗಳಲ್ಲಿ ಕೆಲವು ವಿಸ್ಮಯಕಾರೀ ಕಾಲಸೂಚಿಪತ್ರಗಳ ರಹಸ್ಯವನ್ನು ಬಯಲು ಮಾಡಲು ಪ್ರಾರಂಭಿಸಿದ್ದೇವೆ.

ನಮ್ಮ ಪಂಚಾಂಗಗಳ ನಿರ್ಮಾಣವೂ ಚಂದ್ರನಕಲೆ ಹಾಗೂ ಸೂರ್ಯನ ಪರಿಭ್ರಮಣದ ಅಧ್ಯಯನದಿಂದ ಆಗುತ್ತಿತ್ತು. ಸೂರ್ಯನ ಅತ್ಯಂತ ಮಹತ್ವ ಪೂರ್ಣ ಸ್ಥಿತಿಯನ್ನು ' ಅಯನಾಂತ ' ವೆಂದು ಕರೆಯಲಾಗುತ್ತದೆ. ಆಕಾಶದಲ್ಲಿ ಸೂರ್ಯನು ಮೂಲ ಉತ್ತರ ತುದಿ (ಉತ್ತರಾಯಣ) ಯನ್ನು ಅಥವಾ

೧೯೮೨ರ ಮಾರ್ಚಿ ತಿಂಗಳ ಸರ್ವೋತ್ತಮ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ' ರೋನಾಲ್ಡ್ ಶಿಲರ್ ' ರವರ ' ಪ್ರಾಚೀನ ಪಂಚಾಂಗೋಕಾ ರಹಸ್ಯ ' ಲೇಖನದ ಭಾವಾನುವಾದ.

ಮೂಲ ದಕ್ಷಿಣ ತುದಿ (ದಕ್ಷಿಣಾಯನ) ಯನ್ನು ಮುಟ್ಟುತ್ತಾನೆ. (ನಮಗೆ ಇವು ೨೧ ಜೂನ್ ಹಾಗೂ ೨೧ ಡಿಸೆಂಬರ್) ಇದು ಗ್ರೀಷ್ಮ ಹಾಗೂ ಶರದ್ ಋತುಗಳ ಪ್ರಾರಂಭದ ಸಂಕೇತ ಹೀಗೆಯೇ ಅಯನಾಂತಗಳ ಮಧ್ಯ ಸೂರ್ಯನು ಭೂಮಧ್ಯ ರೇಖೆಯನ್ನು ದಾಟುವ ಕಾಲ (೨೧ ಮಾರ್ಚ್ ಹಾಗೂ ೨೧ ಸೆಪ್ಟೆಂಬರ್) ವಸಂತ ಹಾಗೂ ಶಿಶಿರ ಋತುಗಳ ಪ್ರಾರಂಭ ಕಾಲವಾಗಿದೆ.

ಆದರೆ ಖಗೋಲಜ್ಞರ ಅಭಿಪ್ರಾಯದಂತೆ ಸೂರ್ಯ ಹಾಗೂ ಚಂದ್ರರನ್ನು ಪೂರ್ಣ ಅವಲಂಬಿಸಿರುವುದು ಸಾಧ್ಯವಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ— ಉದಾಹರಣೆಗೆ ಒಂದು ಕಡೆ ಅವು ಮೋಡದಿಂದ ಮುಚ್ಚಲ್ಪಡುತ್ತವೆ ಅಥವಾ ಗ್ರಹಗಳಿಂದ ಮರೆಯಾಗುತ್ತವೆ. ಚಂದ್ರನು ವರ್ಷವಿಡೀ ನಿರಂತರವಾಗಿ ಒಂದೇ ಕಕ್ಷೆಯಲ್ಲಿ ಸುತ್ತುವುದಿಲ್ಲ. ಇದರಿಂದ ಪ್ರಾಚೀನ ಖಗೋಲಜ್ಞರು ಹೆಚ್ಚು ಹೊಳೆಯುವ ನಕ್ಷತ್ರಗಳು ಹಾಗೂ ಯಾವುದೇ ಉಪಕರಣಗಳ ಸಹಾಯವಿಲ್ಲದೆ ಬರಿಗಣ್ಣಿಗೆ ಕಾಣಿಸುವ ಐದು ಗ್ರಹಗಳ ಚಲನೆಯನ್ನು ಅಳೆಯಲು ಸಹಾಯಕವಾದ ಪ್ರಣಾಲಿಯೊಂದನ್ನು ಉಪಯೋಗಿಸಿದರು. ನಿತ್ಯ ಪರಿವರ್ತನಶೀಲತೆಯನ್ನು ಪತ್ತೆಹಚ್ಚಿ ಆಶ್ಚರ್ಯಜನಕ ರೀತಿಯಲ್ಲಿ ನಿಜವಾದ ಭವಿಷ್ಯವನ್ನು ಅವರು ಹೇಗೆ ನಿರ್ಣಯಿಸುತ್ತಿದ್ದರೆಂಬುದನ್ನು, ವಿಜ್ಞಾನಿಗಳು ಪ್ರಾಚೀನ ಸಂಸ್ಕೃತಿಗಳ ಕೆಲವು ಸ್ಮಾರಕಗಳನ್ನು ಹತ್ತಿರದಿಂದ ನೋಡುವ ಅವಕಾಶಗಳು ದೊರೆತ ಮೇಲೆ ಶೋಧಕ್ಕೆ ತೊಡಗಿದರು.

ಪ್ರಾಚೀನ ಲೇಖಾಚಿತ್ರಗಳು : ಪ್ರಾಚೀನ ಕಾಲದ ನಿರ್ಮಾಣಗಳಲ್ಲಿ ಎಲ್ಲಕ್ಕಿಂತಲೂ ವಿಲಕ್ಷಣವಾದುವುಗಳೆಂದರೆ ಪಶ್ಚಿಮ ಯೂರೋಪಿನಲ್ಲಿ ಪೋರ್ಚುಗಲ್ ಹಾಗೂ ಸ್ಪೇನ್‌ನಿಂದ ಹಿಡಿದು ಸ್ವೀಡನ್‌ವರೆಗೆ ಹಬ್ಬಿರುವ ಸ್ತಂಭದಂತಹ ತುಂಡುಗಲ್ಲುಗಳು. ಕ್ರಿ. ಪೂ. ೬೦೦೦ ದಿಂದ ೪೦೦೦ ವರ್ಷಗಳಷ್ಟು ಪ್ರಾಚೀನದಲ್ಲಿ ನಿರ್ಮಾಣವಾದ ಈ ಪಾಷಾಣ ಸ್ತಂಭಗಳು ಒಂಟಿಯಾಗಿ ನಿಲ್ಲಿಸಿದ ಕಲ್ಲುಗಳಿಂದ ಹಿಡಿದು ರಾಶಿ ಹಾಕಿದ ರೂಪದಲ್ಲಿಯುವರೆಗೆ ಕಾಣಸಿಗುತ್ತವೆ. ಅತಿ ಹೆಚ್ಚು ಪಾಷಾಣ ಸ್ತಂಭಗಳು ಫ್ರಾನ್ಸ್‌ನಲ್ಲಿ 'ಕಾರನಾಕ್'ದ ಹತ್ತಿರ 'ಬ್ರಿಟಾನಿ' ಯಲ್ಲಿ ಕಾಣಸಿಗುತ್ತವೆ. ಅಲ್ಲಿಯ ವಿಸ್ತಾರವಾದ ಮೈದಾನದಲ್ಲಿ ೩೦೦೦ಕ್ಕಿಂತ ಹೆಚ್ಚಿನ ೧೧ ಅಥವಾ ೧೨ರ ಸಂಖ್ಯೆಯಲ್ಲಿ ನಿಲ್ಲಿಸಿದ ತುಂಡುಗಲ್ಲಿನ ಕಂಬಗಳ ಸಾಲುಗಳು ನಾಲ್ಕು ಕಿಲೋಮೀಟರುಗಳವರೆಗೆ ಹಬ್ಬಿವೆ. ಇದರ ಸಮೀಪದಲ್ಲಿಯೇ 'ಕೆರ್ಲೋಅಸ್' ನಲ್ಲಿ ೧೨ ಮೀಟರುಗಳ ಎಲ್ಲಕ್ಕಿಂತ ಎತ್ತರವಾದ ಕಲ್ಲಿದೆ. ಮತ್ತು 'ಲೋಕ್‌ಮಾರಿ ಅಕ್ವೇರ್' ನಲ್ಲಿ ಪೃಥ್ವಿಯ ಮೇಲೆ

ಸ್ಥಾಪಿಸಬೇಕೆಂದಿದ್ದ ಅತಿ ದೊಡ್ಡದಾದ ಕಲ್ಲು ೩೭೦ ಟನ್ ತೂಕದ 'ಗ್ರೈಂಡ್ ಮೆನ್‌ಹಿರ್ ಬ್ರಿಸೆ' ಎಂಬುದಿದೆ. ಇದೀಗ ೪ ಭಾಗಗಳಾಗಿ ಒಡೆದುಹೋಗಿದೆ. ಮೂಲತಃ ಇದು ೨೧ ಮೀಟರ್ ಉದ್ದವಾಗಿತ್ತು.

ಇತಿಹಾಸಕಾರರು ಈ ಕಲ್ಲುಗಳನ್ನು ಲಿಂಗಪ್ರತೀಕದಿಂದ ಹಿಡಿದು ಮೃತ ಯೋಧರ ಸ್ಮಾರಕಗಳವರೆಗೆ ಯಾವುದಾದರೊಂದಾಗಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಪ್ರೊಫೆಸರ್ ಅಲೆಗ್ಸಾಂಡರ್ ಟಾಮ್‌ರು ೨೫ ವರ್ಷಗಳ ಹಿಂದೆ ಇದರ ರಹಸ್ಯಗಳ ಬಗ್ಗೆ ಒಂದು ಸಮಾಧಾನವನ್ನು ಪ್ರಸ್ತುತಪಡಿಸಿದರು. ೧೬ ಕಿ. ಮೀ.ಗಳ ವೃತ್ತದೊಳಗಡೆ ಇರುವ ಇತರೆ ಕಲ್ಲುಬಂಡೆಗಳಿಂದ 'ಗ್ರೈಂಡ್ ಮೆನಹೀರ್ ಬ್ರಿಸೆ'ಯ ದಿಕ್ಕಿನಲ್ಲಿ ಕ್ಷಿತಿಜದ ಅಧ್ಯಯನವನ್ನು ಮಾಡಿ—"ಇದರ ಸಹಾಯದಿಂದ ಖಗೋಲಜ್ಞರು ಚಂದ್ರನು ಮೂಲ ಉತ್ತರದಲ್ಲಿ ಅಥವಾ ಮೂಲ ದಕ್ಷಿಣದಲ್ಲಿರುವ ಸ್ಥಿತಿಯನ್ನು ತಿಳಿದುಕೊಳ್ಳುತ್ತಿದ್ದರು" ಎಂದು ಟಾಮ್ ಹೇಳಿದರು.

'ಕಾರನಾಕ್'ದ ತುಂಡುಗಲ್ಲೊಂದು ಇನ್ನೂ ವಿಚಿತ್ರವೆನಿಸಿದೆ. ಅದೊಂದು ಶ್ರೇಷ್ಠ ಕಲ್ಲಿನಲ್ಲಿ ಕೆತ್ತಿದ ರೇಖಾಚಿತ್ರವನ್ನು ಹೊಂದಿದೆ. ಇದರಿಂದ ಬ್ರಿಟನ್ನಿನ ಜನರಿಗೆ ಇಡೀ ವರ್ಷ ಸೂರ್ಯ ಚಂದ್ರರ ಉದಯ ಅಸ್ತಗಳ ಕಾಲಗಳ ತಿಳುವಳಿಕೆ ಸಿಗುತ್ತಿತ್ತು. 'ಟಾಮ್'ರ ಅಭಿಪ್ರಾಯವೆಂದರೆ ಈ ಆವಲೋಕನ ದುರ್ಬೀನಿನ ಸೃಷ್ಟಿಯವರೆಗೆ ಬೇರೊಂದು ಸಾಧನವಿಲ್ಲದೆ ನಡೆಯುತ್ತಿದ್ದ ಕರಾರುವಾಕ್ ಅಧ್ಯಯನವಾಗಿತ್ತು.

ಶಿಲಾಯುಗದ ಗಣಕಯಂತ್ರ : ಬ್ರಿಟಿಷ್ ದ್ವೀಪಗಳಲ್ಲಿ ಹರಡಿರುವ ಸುಮಾರು ೯೦೦ ಜಾದೂ ಚಕ್ರಗಳಲ್ಲಿ ಪಶ್ಚಿಮ ಬ್ರಿಟನ್‌ನಲ್ಲಿರುವ 'ಸ್ಟೋನ್ ಹೆಂಜ್' ಕೂಡ ಒಂದು. ಇದನ್ನು (ಕ್ರಿ. ಪೂ. ೨೭೦೦ ರಿಂದ ೧೯೦೦) ಮಧ್ಯ ಭಾಗದಲ್ಲಿ ಆ ಕಾಲದಲ್ಲಿ ಜನರು ನಿಧಾನವಾಗಿ ಬೇರೆ ಬೇರೆ ಭಾಗಗಳಿಂದ ಜೋಡಿಸಲ್ಪಟ್ಟದ್ದಾಗಿದೆ. ಚಕ್ರಗಳ ಗಾಡಿ, ತರಬೇತಾದ ಎತ್ತು, ಪ್ರಾಣಿಗಳು, ರಾಟೆಗಳು ಹಾಗೂ ಲೋಹದ ಉಪಯೋಗವೇ ಗೊತ್ತಿಲ್ಲದ ಕಾಲದಲ್ಲಿ ನಿರ್ಮಾಣವಾದ, ೨೦ ವರ್ಷಗಳ ಹಿಂದಿನವರೆಗೂ ಬ್ರಿಟಿಷ್ ದ್ವೀಪಗಳಲ್ಲಿ ಎಲ್ಲೆಂದರಲ್ಲಿ ಕಾಣಸಿಗುತ್ತಿದ್ದ 'ಹೆಂಜ್' (ವಿಶೇಷ ಆಕಾರದ ಕಲ್ಲಿನ ಕಟ್ಟಡಗಳು) ಗಳನ್ನು ಇತಿಹಾಸಜ್ಞರು ಪಶುಶಾಲೆಗಳೆಂದೂ ಅಥವಾ ಪ್ರಾಚೀನ ಕಾಲದ ಉಪಾಸನಾಗೃಹಗಳಿರಬೇಕೆಂದೂ ಅಭಿಪ್ರಾಯಪಟ್ಟಿದ್ದಾರೆ. ಆದರೆ ೬೦ರ ದಶಕದ ಖಗೋಲಜ್ಞನಾದ 'ಜೆರಾಲ್ಡ ಹಾಕಿನ್ಸ'ನು ಈ ಕಟ್ಟಡಗಳು ವಾಸ್ತವ

ವಾಗಿ ಖಗೋಲ ವೀಕ್ಷಣಾಲಯಗಳೆಂದು ಅಭಿಪ್ರಾಯ ಪಟ್ಟಿದ್ದಾನೆ.

ಹಾಕಿನ್ಸನು ಗಣಕ ಯಂತ್ರಗಳ ಸಹಾಯದಿಂದ ಲೆಕ್ಕ ಹಾಕಿದಂತೆ ಮಧ್ಯ ಗ್ರೀಷ್ಮದ ದಿನ 'ಸ್ಟೋನ್‌ಹೆಂಜ್' ಚಕ್ರದ ಕೇಂದ್ರದಿಂದ ಅವಲೋಕಿಸಿದಾಗ ಉತ್ತರಾಯಣದಲ್ಲಿ ಉದಯವಾಗುತ್ತಿರುವ ಸೂರ್ಯನ ಕಿರಣಗಳು ಹೊರವ್ಯೆ ಮೇಲೆ ವಿಶೇಷ ರೂಪದಲ್ಲಿ ಹಿಮ್ಮೊಗವಾಗಿ ಕಲ್ಲಿನಿಂದ ತೂರಿಬರುತ್ತಿತ್ತು. ಮುಂದುವರಿದಾಗ ಇತರ ಮಹತ್ವಪೂರ್ಣ ತಿಥಿಗಳಲ್ಲಿ ಸೂರ್ಯ, ಚಂದ್ರರ ಉದಯ ಹಾಗೂ ಅಸ್ತಗಳ ಸಮಯವೂ ಬರೆಯಲ್ಪಟ್ಟಿತ್ತು. ಹಾಕಿನ್ಸ್ ಇನ್ನೂ ವಿಸ್ಮಯಕಾರಿ ಅಂಶಗಳನ್ನು ಹೊರಗೆಡಹಿದ್ದನು. ಅದೇನೆಂದರೆ 'ಸ್ಟೋನ್‌ಹೆಂಜ್'ಗಳ ಪರಿಧಿಗೆ ಸಮಾನ ದೂರದಲ್ಲಿ ಇರುವ ೫೬ ಛಿದ್ರಗಳ 'ಓಬ್ರಿಚಕ್ರ' ವೆಂದು ಕರೆಯಲ್ಪಡುವ ಪರಿಮಿತ ವೃತ್ತ ಚಂದ್ರನ ಪರಿಭ್ರಮಣಕ್ಕೆ ಸಂಬಂಧಿಸಿದ ಪೂರ್ವ ಸೂಚನೆಗಳನ್ನು ಪಡೆಯಲು ಬೇಕಾದ ಗಣನೆಯ ಉಪಕರಣವೂ ಇತ್ತು.

ದೈವೀ ಜಿಜ್ಞಾಸೆ: ಬ್ಯಾಬಿಲೋನ್ ನಾಗರಿಕತೆಯ ಕಾಲದಲ್ಲಿ ಮಣ್ಣಿನ ಮುಂದಾದ ಚೂರುಗಳ ಮೇಲೆ ಅಂಕಿತವಾದ ವಿಲಕ್ಷಣ ರೂಪದ ಶುದ್ಧ ಖಗೋಲ ವಿಷಯವನ್ನೊಳಗೊಂಡ ವಿವರಣೆ ಇಂದಿಗೂ ಸುರಕ್ಷಿತವಾಗಿದೆ. ಖಗೋಲ ವಿಜ್ಞಾನಿಗಳಾದ ಪೂಜಾರಿಗಳು ಒಂದು ವಿಶೇಷ ಗಣಕ ಪ್ರಣಾಲಿಯನ್ನು ಹೊಂದಿದ್ದರು. ಅದರ ಪ್ರಕಾರ ಆಕಾಶ ಗೋಲವನ್ನು ೩೬೦ ಅಂಶಗಳಲ್ಲಿ ಹಂಚಲಾಗಿತ್ತು ಹಾಗೂ ಘಂಟೆಗಳನ್ನು ೬೦ ಮಿನಿಟುಗಳಾಗಿ ವಿಂಗಡಿಸಲಾಗಿತ್ತು. ಈ ಸೂತ್ರದಿಂದ ಅವರು ಸೌರವರ್ಷ ಹಾಗೂ ಚಾಂದ್ರವರ್ಷಗಳಲ್ಲಿ ೧೦ ಸೆಕೆಂಡುಗಳಷ್ಟು ವ್ಯತ್ಯಾಸವಾಗದಂತೆ ಕಾಲಗಣನೆಯನ್ನು ಮಾಡುತ್ತಿದ್ದರು. ಅವರು ಕಣ್ಣಿಗೆ ಗೋಚರಿಸುವ ಎಲ್ಲ ಗ್ರಹಗಳ ಕಕ್ಷಾಪಥಗಳು, ಬುಧ ಗ್ರಹದ ೮೮ ದಿನಗಳ ಪ್ರದಕ್ಷಿಣೆಯಿಂದ ಹಿಡಿದು ಶನಿಗ್ರಹದ ೨೯ ವರ್ಷಗಳ ದೀರ್ಘ ಪರಿಕ್ರಮಣಗಳವರೆಗೆ ಗಣನೆ ಮಾಡಲು ಸಮರ್ಥರಾಗಿದ್ದರು. ಪ್ರಾಚೀನ ಬ್ಯಾಬಿಲೋನಿನ ಖಗೋಲಜ್ಞರು ಈ ಗ್ರಹಗಳು ತಮ್ಮ ಕಕ್ಷೆಯಲ್ಲಿ ಬೇರೆ ಬೇರೆ ಗತಿಯಲ್ಲಿ ತಿರುಗುತ್ತಿದ್ದವೆಂಬುದನ್ನು ತಿಳಿದಿದ್ದರೆಂಬ ವಿಚಾರ ಕೇಳಿದ ಆಧುನಿಕ ವಿಜ್ಞಾನಿಗಳು ಚಕಿತರಾಗುತ್ತಾರೆ.

ಚಂದ್ರನು ಇಪ್ಪತ್ತೊಂಬತ್ತುವರೆ ದಿನದಲ್ಲಿ ಪೃಥ್ವಿಯ ಪರಿಕ್ರಮಣವನ್ನು ಪೂರೈಸುತ್ತಾನೆ. ಈ ಆಧಾರದ ಮೇಲೆ ಬ್ಯಾಬಿಲೋನ್ ವಾಸಿಗಳು ವರ್ಷವನ್ನು ೨೯ ಹಾಗೂ ೩೦ ದಿನಗಳ ೧೨ ತಿಂಗಳುಗಳನ್ನಾಗಿ ವಿಂಗಡಿಸಿದರು. ಪ್ರತಿ ಎರಡನೇ ಅಥವಾ ಮೂರನೇ ವರ್ಷದಲ್ಲಿ ಹೆಚ್ಚಾದ ತಿಂಗಳನ್ನು (ಅಧಿಕಮಾಸ)

ಸೇರಿಸುತ್ತಿದ್ದರು. ಇವರಿಂದ ೧೯ ವರ್ಷಗಳಲ್ಲಿ ವರ್ಷದ ಮುನ್ನೂರ ಅರವತ್ತೈದು ಕಾಲು ದಿನದ ಸರಾಸರಿ ಸರಿಹೋಗುತ್ತಿತ್ತು. ಇಂದೂ ಕೂಡ ಯಹೂದಿಗಳ ಧಾರ್ಮಿಕ ಪಂಚಾಂಗಗಳಲ್ಲಿ ಹಾಗೂ ಕ್ರಿಶ್ಚಿಯನ್ನರ ಈಸ್ಟರ್ ತಿಥಿಗಳನ್ನು ನಿರ್ಧರಿಸಲು ಇದೇ ಪ್ರಕಾರದ ಗಣನಾಸೂತ್ರವನ್ನು ಅನುಸರಿಸಲಾಗುತ್ತದೆ.

ಖಗೋಲ ದೇವತೆಗಳ ಸ್ಮಾರಕವಾಗಿ ಕಟ್ಟಿದ ಮಂದಿರಗಳು ಖಗೋಲ ವಿಜ್ಞಾನದ ಅಧ್ಯಯನ ಸಾಧನಗಳೂ ಆಗಿದ್ದವೆಂಬುದು ಸ್ಪಷ್ಟ. ೧೯೬೩ರಲ್ಲಿ 'ಸ್ಟೋನ್‌ಹೆಂಜ್' ರಹಸ್ಯವನ್ನು ಬಯಲು ಮಾಡಿದ ಖಗೋಲಜ್ಞ ಹಾಕಿನ್ಸನೂ ಹೀಗೇ ಇರಬೇಕೆಂದು ಅಭಿಪ್ರಾಯಪಟ್ಟಿದ್ದಾನೆ. ಆತನ ಗಣಕ ಯಂತ್ರದ ಮೂಲಕ ಹಾಕಿದ ಲೆಕ್ಕಾಚಾರದಿಂದ 'ಕಾರನಾಕ್'ನ 'ಆಮನಾರ್' (ಸೂರ್ಯ ದೇವತೆ)ಯ ಸುವಿಶಾಲ ಮಂದಿರದ ರಚನೆ. ದಕ್ಷಿಣಾಯನದಲ್ಲಿ ಸೂರ್ಯನ ಕಿರಣಗಳು ವರ್ಷದಲ್ಲೊಮ್ಮೆ ಮಧ್ಯದ ೪೦೦ ಮೀಟರ್ ಎತ್ತರದ ಉಪ್ಪರಿಗೆಯ ಮೇಲೆ ಪಶ್ಚಿಮ ತುದಿಯಲ್ಲಿರುವ ವೇದಿಕೆ ಕಾಣುವಂತೆ ಪ್ರವೇಶಿಸುತ್ತಿತ್ತು. ಕೆಲವು ಮಹತ್ವಪೂರ್ಣ ದಿನಗಳಲ್ಲಿ ಚಂದ್ರನ ಬೆಳಕು ಎದುರಾಗಿ ಬೀಳುವಂತೆ ಕೆಲವು ಮಂದಿರಗಳ ನಿರ್ಮಾಣವಿದ್ದುದನ್ನು ಹಾಕಿನ್ಸ್ ಪತ್ತೆ ಹಚ್ಚಿದ್ದಾನೆ.

ಶುಕ್ರಗ್ರಹದ ನಿರೀಕ್ಷಣೆ: ಅಮೇರಿಕಾದ ಖಗೋಲ ವಿಜ್ಞಾನಿಗಳು ಆಕಾಶದ ಸ್ಪಷ್ಟ ವೀಕ್ಷಣೆಗೆ ಸಮತಲವಾದ ಮೇಲ್ಭಾವಣಿಯ ಪಿರಮಿಡ್ಡುಗಳನ್ನು ವೇಧಶಾಲೆಯ ರೂಪದಲ್ಲಿ ಉಪಯೋಗಿಸುತ್ತಿದ್ದರು. ಇವುಗಳಲ್ಲಿ ಈಗ ಉಳಿದಿರುವವೆಂದರೆ 'ಯುಕಾತಾನ್'ನ 'ಚಿಚೆನ್ ಇಟ್ಜಾ'ದ ಗೋಲಾಕಾರ (ಕಾರಾಕೋಲ)ದ ಹಾಗೂ 'ಓ ಆಕ್ಸಾ' (ಮೆಕ್ಸಿಕೋ)ದಲ್ಲಿರುವ ಬಾಣದ ಆಕಾರದ ಕಟ್ಟಡಗಳು ಮಹತ್ವಪೂರ್ಣದವುಗಳಾಗಿವೆ. ಈ ಕಾರಕೋಲದ ಕಿಂಡಿಗಳು ಅಲ್ಲೊಂದು ಇಲ್ಲೊಂದು ಇರುವಂತೆ ಕಂಡರೂ ವಸ್ತುತಃ ಅವು ಹೇಗೆ ವ್ಯವಸ್ಥಿತವಾಗಿರುವವೆಂದರೆ ಒಳಗಡೆಯ ಬಾಗಿಲುಗಳ ಮೂಲಕ ನೋಡಿದರೆ ಅಯನಾಂತ ಹಾಗೂ ಅಯನ ಕಾಲದಲ್ಲಿ ಉದಯಿಸುವ ಹಾಗೂ ಅಸ್ತಮಿಸುವ ಸೂರ್ಯ ಹಾಗೂ ಕ್ಷಿತಿಜದ ಮೇಲೆ ಶುಕ್ರಗ್ರಹದ ದೂರದ ಸ್ಥಿತಿಯನ್ನು ನಿರ್ಧರಿಸಬಹುದಾಗಿದೆ (ನಿರ್ಧರಿಸಲು ಸಾಧ್ಯವಾಗುವಂತೆ ಅವುಗಳ ರಚನೆಯಿದೆ). ವೀಕ್ಷಕರು ಸೌರವರ್ಷದ ದೀರ್ಘ ಅವಧಿಯನ್ನು ೧೨ ಸೆಕೆಂಡುಗಳಷ್ಟು ವ್ಯತ್ಯಾಸವಾಗದಂತೆ ಗಣನೆ ಮಾಡುತ್ತಿದ್ದರು. ಹಾಗೂ ಶುಕ್ರ ಗ್ರಹದ ಪರಿಕ್ರಮಣದ ಗಣನೆಯಲ್ಲಿ ೫೦ ವರ್ಷಗಳಲ್ಲಿ ಕೇವಲ ೭ ಸೆಕೆಂಡುಗಳಷ್ಟು ಮಾತ್ರ ವ್ಯತ್ಯಾಸ

ಕಂಡುಬರುತ್ತಿತ್ತು. ಈ ವಿಚಾರ ಕುರಿತು ಆಧುನಿಕ ಯುಗದವರೆಗೂ ಯಾವ ಸುಧಾರಣೆ ಮಾಡಲಾಗಿಲ್ಲ. ಜರ್ಮನಿಯ ಡ್ರೆಸ್‌ಡೆನ್ ಸಂಗ್ರಹಾಲಯದಲ್ಲಿರುವ ಮಯ ನಾಗರೀಕತೆಯ ಪಂಚಾಂಗವೊಂದರಲ್ಲಿ ಚಿತ್ರಲಿಪಿಯಲ್ಲಿ ಅನೇಕ ಶತಮಾನಗಳವರೆಗೆ ಉಂಟಾಗಬಹುದಾದ ಸೂರ್ಯಗ್ರಹಣಗಳ ಬಗ್ಗೆ ಭವಿಷ್ಯವನ್ನು ಬರೆದಿಡಲಾಗಿದೆಯಂತೆ. ಖಗೋಲಜ್ಞಾನವು ಮಧ್ಯ ಅಮೇರಿಕಾದಿಂದ ಉತ್ತರದ ಕಡೆಗೆ ಹಾಗೂ ಅಮೇರಿಕೆಯ ದಕ್ಷಿಣ ಪಶ್ಚಿಮ ಭಾಗದ ನಗರಗಳ ನಿರ್ಮಾತೃಗಳವರೆಗೆ ತಲುಪಿತು. ಅದರ ಅಸ್ತಿತ್ವ ಈಗ ಲುಪ್ತವಾಗಿದೆ. ಇವರು ನಿರ್ಮಿಸಿದ ವೇಧಶಾಲೆಗಳು ಮಯ ನಾಗರೀಕತೆಯ ವೇಧಶಾಲೆಗಳಂತೆ ಇವೆ. ಅವರು ಉತ್ತರದ ಧೂಮಂತೂ ಜಾತಿಯವರು. ತಿಥಿಗಳ ಗಣನೆಯ ಬಗ್ಗೆ ತಮ್ಮದೇ ಆದ ಪ್ರಣಾಲಿಯೊಂದನ್ನು ವಿಕಾಸಗೊಳಿಸಿದ್ದರು. ಇದರ ಬಗ್ಗೆ ವಿವರ ಪಶ್ಚಿಮ ಅಮೇರಿಕ ಹಾಗೂ ಕೆನಡಾದಲ್ಲಿ ದೊರಕುವ ಶಿಲೆಗಳ ಚಕ್ರಗಳಿಂದ ದೊರಕುತ್ತದೆ. ನಂತರ ಅಲ್ಲಿ ಬಂದು ವಾಸಿಸತೊಡಗಿದ ಬಿಳಿಯರು ಇವುಗಳನ್ನು 'ಚಿಕಿತ್ಸಾ ಚಕ್ರಗಳು' ಎಂದು ಕರೆಯುತ್ತಿದ್ದರು. ಇವುಗಳನ್ನು ಮಾಟಮಂತ್ರಗಳಿಗೆ, ಚಿಕಿತ್ಸೆಗಾಗಿ ಉಪಯೋಗಿಸುತ್ತಿದ್ದರೆಂಬ ಸಂಶಯ ಅವರಲ್ಲಿತ್ತು. ಆದರೆ ಅವುಗಳ ವಾಸ್ತವಿಕ ಉಪಯೋಗವೇನೆಂಬುದರ ಬಗ್ಗೆ ತಿಳಿದದ್ದು ೧೯೭೬ರಲ್ಲಿ ಕೊಲರೆಡೋದ ಖಗೋಲಜ್ಞ 'ಜಾನ್ ಎಡಿ' ಎಂಬುವವರು 'ವ್ಯೋಮಿಂಗ್'ನ 'ಬಿಗ್‌ಹಾರ್ನ್' ಪರ್ವತಗಳ ಮೇಲಿದ್ದ ಚಿಕಿತ್ಸಾ ಚಕ್ರದ ಶೋಧ ನಡೆಸಿದಾಗ. ಈ ವಿಶಾಲ ಚಕ್ರದ ವಿಷಮ ವೃತ್ತದ ವ್ಯಾಸ ೨೫ ಮೀಟರ್ ಅದರ ಮಧ್ಯದಲ್ಲಿ ಕಲ್ಲಿನ ದೊಡ್ಡ ಸ್ತೂಪವಿದೆ. ಅದರ ಪರಿಧಿಯಲ್ಲಿ ೬ ಸಣ್ಣ ಸ್ತೂಪಗಳು ಹಾಗೂ ೨೮ ವಿಷಮ ಪರಿಧಿಯವರೆಗೆ ಹಬ್ಬಿದಂತ ಅರೆಗಳಿದ್ದವು.

ಇಂದು ನಾವು ಕಾಲಗಣನೆಗಾಗಿ ಉಪಯೋಗಿಸುವಂಥ ಅನೇಕ ಪದ್ಧತಿಗಳು ವಿಭಿನ್ನ ಶಾಖೆಗಳಿಂದ ತೆಗೆದುಕೊಂಡ ಅನೇಕ ವಿಧಿಗಳ ಮಿಶ್ರಣವಾಗಿದೆ. ನಾವು ೬೦ ನಿಮಿಷಗಳ ಘಂಟೆಯನ್ನು ಬ್ಯಾಬಿಲೋನಿನಿಂದಲೂ ೨೪ ಘಂಟೆಗಳ ದಿನವನ್ನು ಇರಾನ್‌ನಿಂದಲೂ ಹಾಗೂ ೭ ದಿನಗಳ ವಾರವನ್ನು ಹಿಬ್ರೂ ನಾಗರಿಕತೆಯಿಂದಲೂ ಅನುಸರಿಸುತ್ತಿದ್ದೇವೆ. ತಿಂಗಳುಗಳನ್ನು ಪ್ರಾಚೀನ ಗ್ರೀಸ್ ದೇಶದಿಂದ ರೋಮನ್ ನಾಗರಿಕತೆಯಿಂದ ಅನುಸರಿಸಿದ್ದಾಗಿದೆ. ರೋಮನ್ನರು ಇದರಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದರು. ಜ್ಯೂಲಿಯಸ್ ಸೀಸರ್ ಹಾಗೂ ಆತನ ಉತ್ತರಾಧಿಕಾರಿ ಆಗಸ್ಟಸ್ ಸೀಸರ್ ಇಬ್ಬರೂ ತಮ್ಮನ್ನು ಗೌರವಿಸಿಕೊಳ್ಳಲು ವರ್ಷದಲ್ಲಿ ಜುಲೈ ಹಾಗೂ ಆಗಸ್ಟ್ ತಿಂಗಳುಗಳಲ್ಲಿ ಒಂದೊಂದು

ಅತಿರಿಕ್ತ ದಿನವನ್ನು ಸೇರಿಸಿದ್ದರು. ಇಬ್ಬರೂ ಪ್ರತಿಷ್ಠೆಗಾಗಿ ತಮ್ಮ ಹೆಸರಿನ ತಿಂಗಳಲ್ಲಿ ೩೧ ದಿನಗಳನ್ನು ಮಾಡಲು ಫೆಬ್ರುವರಿ ತಿಂಗಳ ಒಂದೊಂದು ದಿನವನ್ನು ತೆಗೆದುಕೊಂಡಿದ್ದರು. ಸೌರ ವರ್ಷದ ಕಾಲುದಿನದ ಹೆಚ್ಚುವರಿಯನ್ನು ಸರಿದೂಗಿಸಲು ಪ್ರತಿ ನಾಲ್ಕು ವರ್ಷದಲ್ಲಿ ಫೆಬ್ರುವರಿ ತಿಂಗಳಲ್ಲಿ ಒಂದು ಹೆಚ್ಚಿನ ದಿನವನ್ನು ಸೇರಿಸಿದ್ದರು.

ಜ್ಯೂಲಿಯಸ್ ಸೀಸರ್‌ನಿಂದ ನಿರ್ಧರಿಸಲ್ಪಟ್ಟ ಪಂಚಾಂಗ (ಕ್ಯಾಲೆಂಡರ್) ಯೂರೋಪ್‌ನಲ್ಲಿ ಕ್ರಿ.ಶ. ೧೬೦೦ ರವರೆಗೂ ಪ್ರಚಲಿತವಿತ್ತು. ಆದರೆ ಅದರಲ್ಲಿ ಒಂದು ದೋಷವಿತ್ತು. ಸೌರ ವರ್ಷದ ವಾಸ್ತವಿಕ ಅವಧಿ ಮುನ್ನೂರ ಅರವತ್ತೈದುವರೆ ದಿನಗಳಲ್ಲಿ ೧೧ ಮಿನಿಟು ೧೪ ಸೆಕೆಂಡುಗಳಷ್ಟು ಕಡಿಮೆಯಿತ್ತು. ಆದ್ದರಿಂದ ಋತುಗಳ ಜೊತೆ ಕ್ಯಾಲೆಂಡರ್‌ನ ಅಸಮಾನತೆ ಹೆಚ್ಚುತ್ತ ಹೋಯಿತು. ೧೫೮೨ ರಲ್ಲಿ XIII ನೇ ಪೋಪ್ ಗ್ರೆಗರಿಯು ದೋಷವನ್ನು ಸರಿಪಡಿಸಲು ೫ ನೇ ಅಕ್ಟೋಬರನ್ನು ೧೫ ನೇ ಅಕ್ಟೋಬರ್ ಎಂದು ಗಣಿಸಿ ೧೦ ದಿನಗಳನ್ನು ಬಿಟ್ಟುಬಿಡಬೇಕೆಂದು ಘೋಷಿಸಿದನು. ವರ್ಷದ ಸರಾಸರಿಯನ್ನು ಸರಿದೂಗಿಸಲು ನಾಲ್ಕರಿಂದ ಭಾಗ ಹೋಗುವ ವರ್ಷಗಳ ಫೆಬ್ರುವರಿ ತಿಂಗಳಲ್ಲಿ ಒಂದು ಹೆಚ್ಚಿನ ದಿನವನ್ನು ಸೇರಿಸಿದನು.

ರೋಮನ್ ಕ್ಯಾಥೊಲಿಕ್‌ರು ತತ್ಕಾಲದಲ್ಲಿ ಗ್ರೆಗರಿಯ ಪಂಚಾಂಗವನ್ನು ಅಂಗೀಕರಿಸಿದರು. ಆದರೆ ಪ್ರಾಟೆಸ್ಟೆಂಟ್ ರಾಷ್ಟ್ರಗಳು ಇದನ್ನು ಅಂಗೀಕರಿಸಲಿಲ್ಲ. ಪೂರ್ವ ಯೂರೋಪ್ ದೇಶಗಳು ಹಾಗೂ ಸಂಪ್ರದಾಯಬದ್ಧ ಕ್ರಿಶ್ಚಿಯನ್ನರು ಹಾಗೂ ಗ್ರೀಕರು ಇದನ್ನು ಅಂಗೀಕರಿಸಲಿಲ್ಲ. ೧೭೦ ವರ್ಷಗಳ ನಂತರ ಬ್ರಿಟನ್ ಹಾಗೂ ಅಮೇರಿಕನ್ ವಲಸೆಗಾರರು ಪುನಃ ಈ ಪಂಚಾಂಗದಲ್ಲಿ ಪರಿವರ್ತನೆ ಮಾಡಿದರು. ಅದುವರೆಗೆ ೧೧ ದಿನಗಳ ದೋಷ ಕಾಣುತ್ತಿತ್ತು. ಆಗ ೩ನೇ ಸೆಪ್ಟೆಂಬರ್ ಹಾಗೂ ೧೩ನೇ ಸೆಪ್ಟೆಂಬರ್ ನಡುವಿನ ಎಲ್ಲ ತಾರೀಖುಗಳನ್ನು ರದ್ದುಗೊಳಿಸಿ ದೋಷವನ್ನು ಸರಿಪಡಿಸಿದರು. (ಅಮೇರಿಕಾ ಹಾಗೂ ಬ್ರಿಟನ್‌ಗಳ ಇತಿಹಾಸ ಪುಸ್ತಕಗಳಲ್ಲಿ ಈ ತಾರೀಖುಗಳ ಉಲ್ಲೇಖ ದೊರೆಯುವುದಿಲ್ಲ) ೧೯೧೮ ರಲ್ಲಿ ರಶಿಯಾ ಕೂಡ ಹೀಗೇ ಮಾಡಿತು. ಪಂಚಾಂಗದ ೧೩ ತಾರೀಖುಗಳನ್ನು ರದ್ದುಗೊಳಿಸಿತು. ಅಂದಿನಿಂದ ಅಕ್ಟೋಬರ್ ಕ್ರಾಂತಿಯ ದಿನವನ್ನು ೧೫ನೇ ಅಕ್ಟೋಬರ್ ಬದಲಾಗಿ ೭ನೇ ನವಂಬರ್‌ದಂದು ಆಚರಿಸತೊಡಗಿದರು. ಕಾಲದ ಶೋಧ ಹಾಗೂ ಅದರ ಮೇಲೆ ವಿಜಯ ಪ್ರಾಪ್ತಮಾಡುವ ಆಕಾಂಕ್ಷೆ ಮನುಷ್ಯನ ಹೊಸತರದ ಸಾಹಸವಾಗಿದೆ.

ವೆಂಕಟೇಶ ಶೇಟ್

ನನ್ನ ಕನಸು

ರಾತ್ರಿ ಕಂಡ ಆ ಕನಸೇ ಈಗಲೂ ನನ್ನ ಕಣ್ಣಲ್ಲಿ ಕುಣಿಯುತ್ತಿದೆ. ಅಂಥ ಒಳ್ಳೆ ಕನಸನ್ನು ಎಂದೂ ಕಂಡ ನೆನಪಿಲ್ಲ. ಒಂದು ಸೋಜಿಗದ ಮಾತೆಂದರೆ, ಹಗಲಲ್ಲಿ ಉದ್ಭವಿಸಿದ ಪ್ರಶ್ನೆಯೊಂದಕ್ಕೆ ಕನಸಿನಲ್ಲಿ ಉತ್ತರ ದೊರಕಿತ್ತು. ನನ್ನಲ್ಲಿ ಆ ಪ್ರಶ್ನೆ ಉದ್ಭವಿಸಿದ್ದು ಅರಬರೆಯಾದ ಕತೆಯೊಂದನ್ನು ಕೇಳಿದ್ದರಿಂದ. ಆ ಕತೆಯನ್ನು ನಿಮಗೆ ಹೇಳೋಕೆ ಮೊದಲು ಕತೆ ಬಗ್ಗೆ ನನಗಿರೋ ಖಯಾಲಿಯನ್ನು ತಿಳಿಸುತ್ತೇನೆ. ನಮ್ಮ ಯಜಮಾನನ ಸಂಬಂಧಿಯೊಬ್ಬ ಚೆನ್ನಾಗಿ ಕತೆ ಹೇಳುತ್ತಿದ್ದರಿಂದ ನಾನು ಬಹಳ ರಾತ್ರಿವರೆಗೂ ಅವರ ಮನೆ ಮುಂದೆ ಕಾದಿರುತ್ತಿದ್ದೆ. ಹೀಗೇ ಒಂದಿನ ನಾನು ಅಲ್ಲಿಗೆ ಹೋದಾಗ ಭ್ರಷ್ಟಾಚಾರದ ಬಗ್ಗೆ ಅವನು ಹೇಳುತ್ತಿದ್ದ :— 'ಮಂತ್ರಿಗಳು, ಉಪಮಂತ್ರಿಗಳು, ಸದಸ್ಯರು, ಶಾಸಕರು, ಅಧಿಕಾರಿಗಳು, ನ್ಯಾಯವಾದಿಗಳು—ಇವರೆಲ್ಲರ ಭಾರದಿಂದ ಜನಸಾಮಾನ್ಯರ ಬೆನ್ನು ಮುರಿಯುತ್ತಿದೆ ಅಂತ ಜನನಿರ್ಣಯಕ್ಕೆ ಬಂದಿದ್ದಾರೆ. ಜನ ಸೇವೆ ಅನ್ನೋದು ಕೇವಲ ಒಂದು ನೆಪ. ಅವರು ಮಾಡುತ್ತಿರೋದು ತಮ್ಮ ಸಂರಕ್ಷಣೆ ಮತ್ತು ಸಮೃದ್ಧಿ. ಈ ರಾಜಕೀಯದವರೆಲ್ಲ ಗಾಳಿ ಬಂದಾಗ ತೂರಿಕೊಂಡು ತಮ್ಮ ಸ್ಥಾನ ಭದ್ರಮಾಡಿಕೊಳ್ಳುವವರು....'

"ನಾನು ಇಂದಿರಾ ಗಾಂಧಿಗೆ ಒಂದು ಕಾಗದ ಬರೀತೀನಿ" ಎಂದು ಇದ್ದಕ್ಕಿದ್ದಂತೆ ನುಡಿದ ಸಹದೇವ ಉಪಾಧ್ಯಾಯ ಮುಂದುವರಿದು,

"ಸ್ವಾತಂತ್ರ್ಯ ಯೋಧರಿಗೆ ಬೇಕಷ್ಟು ಗೌರವವನ್ನು, ಪ್ರಶಸ್ತಿ ಬಹುಮಾನಗಳನ್ನು ಕೊಟ್ಟಾಗಿದೆ. ಇನ್ನು ಅದನ್ನು ಸಾಕು ಮಾಡಿ. ಜವಾನನಿಂದ ದಿವಾನನವರೆಗೆ ಎಲ್ಲರಿಗೂ ಬೇಕಷ್ಟು ತೃಪ್ತಿಯಾಗಿದೆ. ಇನ್ನು ಸ್ವಲ್ಪ ಹಳ್ಳಿ ಕಡೆ ಮತ್ತು ಬಡವರ ಬಗ್ಗೆ ನಿಮ್ಮ ದೃಷ್ಟಿ ಹರಿಸಿ ಎಂದು ಬರೆಯುತ್ತೇನೆ" ಎಂದ.

"ನಿಸ್ಸಂದೇಹವಾಗಿ" ಎನ್ನುತ್ತ ಎದ್ದು ಕುಳಿತ ಆ ಸಂಬಂಧಿ,

"ಈಗ ಆಳುವ ಸೂತ್ರ ಹಿಡಿದವರ ವೈಯಕ್ತಿಕ ಬದುಕಿನ ಬಗ್ಗೆ ಆಲೋಚನೆ ಮಾಡುವ ಕಾಲ ಬಂದಿದೆ. ಜನ ದಾರಿದ್ರ್ಯ, ಅಜ್ಞಾನಗಳ ಅಂಧಕಾರದಲ್ಲಿ ಇರೋವರ್ಗೂ ಅವರು ವೈಭವದ ಲೋಕದಲ್ಲಿ ಮೆರೀತಿರ್ತಾರೆ. ಒಂದು ಕಾಲಕ್ಕೆ ತಮ್ಮ ತ್ಯಾಗ-ಸೇವೆಗಳಿಂದ 'ದೇವತಾಸ್ವರೂಪರಾದವರು, ಇವತ್ತು ಸ್ವಾರ್ಥ

೧೯೮೦ ನೆಯ ಜುಲೈ ತಿಂಗಳ ನವನೀತದ ವಿವೇಕಿರಾಯ ಅವರ 'ಅಪನಾಸಪನಾ' *ಕಥೆಯ ಭಾವಾನುವಾದ.

ಪರತೆಯಿಂದಾಗಿ ಯಾರು ಒಳ್ಳೆ ವ್ಯಕ್ತಿಗಳು ಅನ್ನೋದನ್ನೂ ಕೂಡ ಗುರುತಿಸೋ ಕಾಗದಂತಾಗಿದೆ.”

ಎಂದು ನಿಲ್ಲಿಸಿ, “ಬಹಳ ಹಿಂದಿನ ಮಾತು....” ಎನ್ನುತ್ತ ಅವನು ಹೇಳಿದ ಕತೆಯ ಸಾರಾಂಶ :

ಒಂದೂರಲ್ಲಿ ಒಬ್ಬ ಮುದುಕಿ ಇದ್ದಳು. ಅದೊಂದು ಚಿಕ್ಕ ಊರಾಗಿದ್ದು, ಅಲ್ಲಿರುವ ರೈತರೆಲ್ಲ ಬಹಳ ಪರಿಶ್ರಮಿಗಳಾಗಿದ್ದರು. ಅವರೆಲ್ಲ ಆ ಮುದುಕಿಯನ್ನು ತಾಯಿಯಂತೆ ಕಾಣುತ್ತಿದ್ದರು. ಎಷ್ಟೇ ಕಷ್ಟಪಟ್ಟರೂ ಅವರಿಗೆ ಸರಿಯಾಗಿ ಹೊಟ್ಟೆಗೆ–ಬಟ್ಟೆಗೂ ಸಾಕಾಗುವುದಿಲ್ಲವಲ್ಲ ಎನ್ನುವುದು ಮುದುಕಿಗೆ ಬೇಸರದ ಸಂಗತಿಯಾಗಿತ್ತು. ಅವಳು ತಿಳಿದವರೊಬ್ಬರ ಸಲಹೆಯನ್ನು ಕೇಳಿದಾಗ, ಆ ಗ್ರಾಮದೇವತೆಯನ್ನು ಬೇರೆ ಊರಿನವರು ಕದ್ದುಕೊಂಡು ಹೋಗಿರುವುದಾಗಿ ತಿಳಿದು ಬಂತು. ಈಗ ಏನು ಮಾಡುವುದು? ಗ್ರಾಮದೇವತೆಯನ್ನು ವಾಪಸ್ಸು ತರಬೇಕೆನ್ನುವ ವಿಷಯದ ಬಗ್ಗೆ ಭಯಂಕರ ಚರ್ಚೆ ನಡೆದು, ಅದು ಅಪಾಯಕಾರಿ ಮಾರ್ಗ ಹಿಡಿದಾಗ ‘ಮೊದಲು ಮಂದಿರ ನಿರ್ಮಾಣವಾಗಲಿ’ ಎಂದು ರಾತ್ರಿಯಲ್ಲಿ ಮುದುಕಿಗೆ ಪ್ರೇರಣೆಯಾಯಿತು.

ಮಾರನೆಯ ದಿನ ಮುದುಕಿ ಊರವರನ್ನೆಲ್ಲ ಸೇರಿಸಿ ಈ ವಿಷಯವನ್ನು ಪ್ರಸ್ತಾಪಿಸಿದಾಗ ಕೆಲವರು ಇದನ್ನು ಉಡಾಫೆ ಮಾಡಿದರು; ಇನ್ನು ಕೆಲವರಿಗೆ ಒಪ್ಪಿಗೆಯಾದರೂ ತಮ್ಮ ಅಸಮರ್ಥತೆಯ ನೆವದಿಂದ ಪಲಾಯನ ಮಾಡಿದರು; ಯಾವುದಕ್ಕೂ ಗತಿಯಿಲ್ಲದ ಹಿಡಿಮಂದಿ ಮಾತ್ರ ಉಳಿದರು. ಮುದುಕಿ ನಿರಾಶಳಾಗದೆ ಆ ಹಿಡಿಮುಷ್ಟಿ ಜನರೊಂದಿಗೆ ಮಂದಿರ ನಿರ್ಮಾಣಕ್ಕೆ ಟೊಂಕ ಕಟ್ಟಿದಳು. ಮನೆಮನೆಗೆ ತಿರುಗಿ ಕಾಣಿಕೆ ಸಂಗ್ರಹಿಸಿದಳು. ಗ್ರಾಮ ದೇವತೆಯ ಮಂದಿರ ನಿರ್ಮಾಣಕ್ಕಾಗಿ ಎಷ್ಟೋ ವರ್ಷಗಳವರೆಗೆ ಬೆವರು, ರಕ್ತ ಹರಿಸಿ ಐವತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದಳು. ಆಗ ಎಲ್ಲರೂ ಅವಳನ್ನು ಹೊಗಳುವವರೇ. ಶಂಕುಸ್ಥಾಪನೆಯ ದಿನವೂ ನಿಗದಿಯಾಯಿತು. ಆದರೆ ಅದರ ಹಿಂದಿನ ರಾತ್ರಿ ಕಳ್ಳ ಕನ್ನಹಿಕ್ಕಿ ಎಲ್ಲ ಹಣವನ್ನೂ ದೋಚಿಕೊಂಡು ಹೋದ.

ಮಾರನೆಯ ಬೆಳಗ್ಗೆ ಈ ವಿಷಯ ತಿಳಿದಾಗಿನಿಂದ ತೀರ ಕಂಗೆಟ್ಟು, ಊಟ ತಿಂಡಿಗಳನ್ನು ತೊರೆದ ಮುದುಕಿ ಸಾಯುವ ಸ್ಥಿತಿಗೆ ಬಂದಳು. ಆಗ ಊರವರ ಕಣ್ಣು ತೆರೆಯಿತು. ಮುದುಕಿ ಏನಾದರೂ ಸತ್ತುಹೋದರೆ ಊರಿನ ಮರ್ಯಾದೆ ಉಳಿಯಲಿಕ್ಕಿಲ್ಲ; ಊರವರು ಯಾರಿಗೂ ಮುಖ ತೋರಿಸುವಂತೆಯೂ ಇಲ್ಲವೆಂದು ಊರಲ್ಲಿ ಗುಸುಗುಸು ಹಬ್ಬಿತು. ಅಲ್ಲದೆ, ಅವರಿಗಾಗಿಯೇ ಆ ಮುದುಕಿ

ಅಂತಹ ಭಾರೀ ಕೆಲಸಕ್ಕೆ ಕೈಹಾಕಿದ್ದು. ಅಷ್ಟರಲ್ಲಿ ಒಬ್ಬ ಪುಢಾರಿ, ಗ್ರಾಮ ದೇವತೆಯ ಮಂದಿರ ನಿರ್ಮಾಣದ ಜೊತೆಗೆ ಮುದುಕಿಯ ಜೀವವನ್ನೂ ಉಳಿಸಲು ಮುಂದಾದ.

ಜನರೆಲ್ಲ ತಾವು ಉಪವಾಸವಿದ್ದು, ಹಣವನ್ನು ದಾನ ಮಾಡಿದರು. ಇದರಿಂದ ಭರವಸೆ ತಾಳಿದ ಮುದುಕಿ ಅನ್ನ ಪಾನಾದಿಗಳನ್ನು ಮಾಡಲು ಪ್ರಾರಂಭಿಸಿದಳು. ಕೆಲವೇ ದಿನಗಳಲ್ಲಿ ಎಲ್ಲ ಹಣವೂ ಒಟ್ಟಾಯಿತು. ವರ್ಷ ತುಂಬುವುದರೊಳಗೇ ಗ್ರಾಮದೇವತೆಯ ಭವ್ಯ ಮಂದಿರದ ನಿರ್ಮಾಣ ಆಗಿ, ಮೂರ್ತಿಯ ಪ್ರತಿಷ್ಠಾಪನೆಯೂ ಆಯಿತು. ಮುದುಕಿಗೆ ಊರವರ ಬದುಕಿನಲ್ಲಿ ಹೊಸತನ ಬಂದಂತೆನಿಸಿ ಸಮಾಧಾನವಾಯಿತು.

ದೇವಿಯ ಭಕ್ತರಲ್ಲಿ ಆ ಪುಢಾರಿ ಪ್ರಮುಖನಾದ. ಅವಳ ಕೃಪೆಯಿಂದ ಅವನ ದುಃಖಗಳೆಲ್ಲ ದೂರವಾಗಿ ಮುಖದಲ್ಲಿ ಗೆಲುವು ಮೂಡಿತು. ಒಂದು ದಿನ ಸಸುಕಿನಲ್ಲೇ ದೇವಿಯ ದರ್ಶನಕ್ಕಾಗಿ ಬಂದಾಗ ಮೆಟ್ಟಿಲ ಮೇಲೆ ಒಂದು ಕಲಶ ಇರುವುದನ್ನು ಕಂಡ. ದಾರದಿಂದ ಕಟ್ಟಿದ ಒಂದು ಕಾಗದವನ್ನು ಅದಕ್ಕೆ ಸಿಕ್ಕಿಸಲಾಗಿತ್ತು. ಅವನು ಆ ಕಾಗದವನ್ನು ತೆರೆದಾಗ, 'ಇದು ಮುದುಕಿಯ ಹಣ. ನಾನು ಇದನ್ನು ಕದ್ದೆ. ಅಂದಿನಿಂದಲೇ ನನ್ನ ಸರ್ವನಾಶವಾಯಿತು. ನನ್ನ ವಂಶ ನಿರ್ವಂಶವಾಯಿತು. ಈಗ ನಾನು ಈ ಹಣವನ್ನು ಇಟ್ಟುಕೊಳ್ಳಲಾರದೆ ಹಿಂತಿರುಗಿಸುತ್ತಿದ್ದೇನೆ' ಎಂಬ ಒಕ್ಕಣಿಕೆ ಕಂಡಿತು. ಅದನ್ನು ಓದುತ್ತಿರುವಷ್ಟರಲ್ಲಿ ಪೂಜಾರಿ ಹಾಗೂ ಅವನ ಹಿಂದೆಯೇ ಪೂಜಾಸಾಮಗ್ರಿಗಳನ್ನು ಹಿಡಿದ ಇಬ್ಬರು ಶ್ರೀಮಂತರ ಆಗಮನವಾಯಿತು. ಎಲ್ಲರೂ ಕಾಗದವನ್ನು ಓದಿದರು. ಕಲಶದ ಸುತ್ತಮುತ್ತ ನಿಂತು ಅವರು ಮೌನವಾಗಿ ಒಬ್ಬರನ್ನೊಬ್ಬರು ನೋಡುತ್ತಿದ್ದರು; ಆಗಾಗ್ಗೆ ಅವರ ದೃಷ್ಟಿ ಕಲಶದ ಕಡೆ ಓಡುತ್ತಿತ್ತು.

ಯಜಮಾನನ ಸಂಬಂಧಿ ಇಷ್ಟು ಹೇಳುವಷ್ಟರಲ್ಲಿ ಸೇವಕ ಬಂದು ಒಳಗೆ ಊಟಕ್ಕೆ ತಟ್ಟೆ ಇಟ್ಟಿರುವುದಾಗಿ ಹೇಳಿದ. ಕತೆ ಅರ್ಧಕ್ಕೇ ನಿಂತು ಹೋಯಿತು. ಒಲ್ಲದ ಮನಸ್ಸಿನಿಂದ ನಾನೂ ಎದ್ದು ಹೋದೆ. ಊಟವಾದ ನಂತರ ಹಾಸಿಗೆಯಲ್ಲಿ ಒರಗುತ್ತಿದ್ದಂತೆ ಕತೆಯ ಮುಕ್ತಾಯದ ಬಗ್ಗೆ ಜಗ್ಗಾಟ ಶುರುವಾಯಿತು. ನಾಲ್ಕು ಜನರಿಗೂ ಆ ಹಣದ ಬಗ್ಗೆ ಆಸೆ ಹುಟ್ಟಿರಬಹುದೆ? ಇದನ್ನು ಮೊದಲು ಕಂಡವನು ನಾನು, ಮಂದಿರ ಕಟ್ಟಿಸಿದವನೂ ನಾನೇ. ಅಂದಮೇಲೆ ಕಳ್ಳ ಕದ್ದು ಹಿಂತಿರುಗಿಸಿದ ಈ ಹಣ ಇನ್ಯಾರಿಗೆ ಸೇರಬೇಕಾದ್ದು ಎಂದು ಪುಢಾರಿ ಯೋಚಿಸಿರಬಹುದೆ? ಪೂಜಾರಿಯ ಬಾಯಲ್ಲೂ ನೀರೂರಿತೆ? ಆ ಶ್ರೀಮಂತರೂ ಯಾಕೆ

ತಗುಲಿದರು? ಹಣಕ್ಕಾಗಿ ಅವರೊಳಗೆ ಜಗಳವಾಗಿರಬಹುದೆ? ಆ ಭ್ರಷ್ಟಾಚಾರದ ಸುದ್ದಿಗೂ ಈ ಕತೆಗೂ ಏನು ಸಂಬಂಧ? ಇವೇ ಮೊದಲಾದ ಯೋಚನೆಗಳು, ಹೀಗೇ ಏನೇನೋ ಯೋಚನೆಗಳು ಮುತ್ತಿದವು. ನಾನು ನಿದ್ದೆಹೋದೆ. ನಿದ್ದೆಯಲ್ಲಿ ಆ ಕನಸು ಬಿತ್ತು. ಅದೇನೆಂದರೆ,—

ಸಂಗಮುವರಿ ಕಲ್ಲಿನ ಒಂದು ವಿಶಾಲ ದೇವಸ್ಥಾನ. ಅಂಗಳದಲ್ಲಿ ಬಣ್ಣಬಣ್ಣದ ಹೂಗಳು ಅರಳಿ ನಿಂತಿವೆ. ದೇವಸ್ಥಾನದ ಗೋಪುರದ ಮೇಲೆ ತ್ರಿವರ್ಣ ಧ್ವಜ ಹಾರಾಡುತ್ತಿದೆ. ಎದುರಿಗೆ 'ಸ್ವರಾಜ್ಯ ಮಂದಿರ' ಎಂದು ಹೊಳೆಯುವ ಅಕ್ಷರಗಳಲ್ಲಿ ಕೆತ್ತಲಾಗಿದೆ. ಗಂಟೆ ಮೊಳಗುತ್ತಿದೆ. ನಾಲ್ಕು ಜನ ಒಂದು ಚೀಲವನ್ನು ನೇತಾಡಿಸುತ್ತ ಒಳಗಿನಿಂದ ಬಂದು ಅಂಗಳದ ಕಟ್ಟೆಮೇಲೆ ಅದನ್ನು ಇಡುತ್ತಾರೆ.

"ನೋಡಿ ಸ್ವಾಮಿ! ಈ ಹಣ ಸಾರ್ವಜನಿಕರದ್ದು" ಎಂದು ಒಬ್ಬ ನುಡಿಯುತ್ತಾನೆ.

ಹಾಗೆನ್ನುತ್ತಿದ್ದಂತೆಯೇ ಖಾದಿ ಧರಿಸಿದ ಆ ಪುಢಾರಿ ತನ್ನ ಅಂಗಿಯನ್ನು ಕೊಡವುತ್ತ,

"ಇದನ್ನು ಮುಟ್ಟೋಕೆ ಯಾರಿಗೆ ಅಧಿಕಾರ ಇದೆ ನೋಡೋಣ! ಇದು ನನಗೆ ಸೇರಬೇಕಾದ್ದು"
ಎಂದ ಮಾತು ಗಾಳಿಯಲ್ಲಿ ತೇಲಿ ಬಂತು.

ಮೂರನೆಯ ವ್ಯಕ್ತಿ ಮತ್ತೂ ಮುಂದುವರಿಯುತ್ತಾನೆ. ಅವನು ತೀರ ಬಡಕಲು. ಕೈಕೈ ಮಿಲಾಯಿಸುತ್ತಾರೆ. ಬೈದಾಟ–ಕಾದಾಟಗಳ ಕೋಲಾಹಲವೇ ನಡೆಯುತ್ತದೆ. ಅಷ್ಟರಲ್ಲಿ ಒಬ್ಬ ಸೌಮ್ಯಾಕಾರದ ಮುದುಕಿ ಎಲ್ಲಿಂದಲೊ ಬರುತ್ತಾಳೆ. ಅವರ ಕಚ್ಚಾಟವನ್ನು ಕಂಡ ಆಕೆ ಬೆರಗಾಗಿ ನಿಲ್ಲುತ್ತಾಳೆ. "ಅಯ್ಯೆ, ಇವರೆಲ್ಲ ತಮ್ಮ ತಮ್ಮ ಸ್ವಾರ್ಥಕ್ಕಾಗಿ ಹೊಡೆದಾಡುತ್ತಿದ್ದಾರೆ" ಎನ್ನುವ ಮಾತು ಅವಳ ಬಾಯಿಂದ ಹೊರಡುತ್ತದೆ.

ಇಬ್ಬರನ್ನೂ ನೆಲಕ್ಕೆ ಕೆಡವಿದ ಪುಢಾರಿ ಹಣದ ಚೀಲವನ್ನು ಎತ್ತಿಕೊಂಡು ಹೊರಡುತ್ತಾನೆ. ಆಗ ನಾಲ್ಕನೆಯ ವ್ಯಕ್ತಿ ಅವನ ಪಂಚೆಯನ್ನು ಹಿಡಿದೆಳೆದು ನಿಲ್ಲಿಸಿ;

"ಪಾಪಕ್ಕಾದರೂ ಅಂಜು. ಅದು ಪ್ರಾಯಶ್ಚಿತ್ತದ ಹಣ" ಅನ್ನುತ್ತಾನೆ.

"ಆದ್ರೇನಂತೆ. ನಾನು ಅದ್ನೆಲ್ಲ ನೋಡೋನಲ್ಲ" ಪುಢಾರಿಯ ಮಾತು.


"ಯಾಕೆ?"

"ಯಾಕಂದ್ರೆ, ನಾನು ರಾಜಕೀಯ ವ್ಯಕ್ತಿ."

"ನಾನು ಪೂಜಾರಿ. ನನ್ನ ಮಾತು ಕೇಳು."

"ನೀನು ಈ ಸ್ವರಾಜ್ಯ ಮಂದಿರದ ಪೂಜಾರಿಯಾದರೆ ನಾನು ಭಾರತ ಮಾತೆಯ ಆ ವಿಶಾಲ ಮಂದಿರದ ಘಂಡ....ನೀನು ಕೇಳೋದಿಲ್ಲ ಅಂದ್ರೆ ಹಿಡಿ, ತಗೊ" ಎನ್ನುತ ಪ್ರಘಾರಿ ಪೂಜಾರಿಯು ಕೆನ್ನೆಗೊಂದು ಬಾರಿಸುತ್ತಾನೆ. ನಿದ್ದೆಯಲ್ಲಿ ಆ ಏಟು ನನಗೇ ಬಿದ್ದಂತೆನಿಸಿ ಹಾಸಿಗೆಯಲ್ಲಿ ಎದ್ದು ಕುಳಿತಿದ್ದೆ. ಸ್ವಾರಸ್ಯವಾದ ಕನಸಲ್ಲವೆ?

ಚಂದ್ರಮತಿ



ನಾನು, ನನ್ನದು ಎಂಬ ಅಭಿಮಾನ ಬಿಡಿರಿ. ಮಾಡಬೇಕಾದುದನ್ನು ಕರ್ತವ್ಯ ದೃಷ್ಟಿಯಿಂದಲೂ ಶ್ರದ್ಧೆಯಿಂದಲೂ ಮಾಡಿ ಮುಗಿಸಿರಿ. ಅದರ ಫಲಾಫಲಗಳ ಕಡೆಗೆ ಗಮನ ಬೇಡ.

—ಪರಮಹಂಸ

ಸ್ವರಾಜ್ಯವೆಂದರೆ ಸ್ವೈರ್ಯವಲ್ಲ. ಸ್ವಾತಂತ್ರ್ಯದ ನಿಜವಾದ ಅರ್ಥ ಸ್ವಸಂಯಮ, ಸ್ವನಿಯಮನಗಳಲ್ಲಿ ಅಡಗಿದೆ.

—ಗಾಂಧೀಜಿ

"ಯೋಗಃ ಚಿತ್ತವೃತ್ತಿ ನಿರೋಧಃ" ಚಿತ್ತವೃತ್ತಿಯ ನಿರೋಧವೇ ಯೋಗ. ಚಂಚಲವಾದ ಮನಸ್ಸನ್ನು ನಿಗ್ರಹಿಸಿ ನಿಶ್ಚಿತ ಜೀವನವನ್ನು ಪಡೆಯಿರಿ.

—ಪಾತಂಜಲಿ

ಗ್ರಾಮೀಣ ಮಹಿಳೆ ಮತ್ತು ಸಮುದಾಯ ಯೋಜನೆಗಳು

ಮಹಿಳೆ ಕುಟುಂಬದ ಕೇಂದ್ರ ವ್ಯಕ್ತಿ. ಕುಟುಂಬದ ಕಲ್ಯಾಣ ಮುಖ್ಯವಾಗಿ ಆಕೆಗೆ ಸೇರಿದ್ದು. ಕುಟುಂಬದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವಲ್ಲಿ ಆಕೆಯ ಪಾತ್ರ ಹಿರಿದು. ಹೊಲಗದ್ದೆಗಳಲ್ಲಿ ದುಡಿಯುವ ಗಂಡನಿಗೆ ಸಹಾಯ ಮಾಡುವಳಲ್ಲದೆ, ಆತನ ಇನ್ನಿತರ ಕೆಲಸ ಕಾರ್ಯಗಳಲ್ಲೂ ಆಕೆ ಭಾಗ ವಹಿಸುತ್ತಾಳೆ. ನಮ್ಮ ಸಮಾಜದಲ್ಲಿ ಗ್ರಾಮೀಣ ಮಹಿಳೆ ನಿರ್ವಹಿಸುವ ಪ್ರಮುಖ ಪಾತ್ರವನ್ನು ಭಾರತೀಯ ಸಮಾಜ ಪೂರ್ಣವಾಗಿ ಅರಿತುಕೊಂಡಿಲ್ಲ. ತನ್ನ ನೋವು ನಲಿವುಗಳು ಬಾಹ್ಯ ಪ್ರಪಂಚಕ್ಕೆ ಅರಿವಾಗುತ್ತಿಲ್ಲವೆಂಬ ಭಾವನೆ ಆಕೆಯ ಮನವನ್ನು ತೀವ್ರವಾಗಿ ನೋಯಿಸುತ್ತಿದೆಯಾದ್ದರಿಂದ ಸಾಮಾಜಿಕ ಏಳಿಗೆಗೆ ತನ್ನ ಕೊಡುಗೆಯನ್ನು ಸಲ್ಲಿಸಲು ಆಕೆಗೆ ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಮಹಿಳೆಯರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವ ಮೊದಲು, ಸಮಾಜ ದಲ್ಲಿ ಆಕೆಯ ಮುಖ್ಯ ಪಾತ್ರಗಳನ್ನು ಕುರಿತು ಆಕೆಗೆ ಮನದಟ್ಟು ಮಾಡಿ ಕೊಡುವ ಕೆಲಸ ಆಗಬೇಕಾಗಿದೆ.

ಗ್ರಾಮೀಣ ಮಹಿಳೆ ತುಂಬು ಆರೋಗ್ಯದಿಂದಿದ್ದು ಉತ್ಸಾಹದ ಚಿಲುಮೆ ಯಾಗಿದ್ದಲ್ಲಿ ಮಾತ್ರ ತನ್ನ ಗಂಡನಿಗೆ ಸಮರ್ಥ ಹೆಣ್ಣಾಗಿ, ಮಕ್ಕಳಿಗೆ ಆದರ್ಶ ತಾಯಿಯಾಗಿ ಬಾಳಲು ಸಾಧ್ಯವಾಗುವುದು. ಮನೆಯನ್ನು ಶುಚಿಯಾಗಿಡುವ ಕಲೆ ಮತ್ತು ಮಕ್ಕಳನ್ನು ಯಾವ ರೀತಿ ಬೆಳೆಸಬೇಕೆಂಬ ಅರಿವು ಆಕೆಗೆ ಇರಬೇಕು. ಆದ್ದರಿಂದ ಆರೋಗ್ಯ, ಆಹಾರ, ಶುಚಿ ಮತ್ತಿತರ ವಿಷಯಗಳನ್ನು ಆಕೆ ಅರಿತಿರ ಬೇಕಾಗುತ್ತದೆ.

ಗಂಡನ ಸುಖ ಸಂತೋಷಗಳಲ್ಲಿ ಪಾಲುಗೊಳ್ಳುವ ಆಕೆ, ವ್ಯವಸಾಯ ಮತ್ತು ಪಶುಸಂಗೋಪನೆಯನ್ನು ಕುರಿತಾದ ಸುಧಾರಿತ ಕ್ರಮಗಳನ್ನು ತಿಳಿದಿರಬೇಕು. ಉದಾಹರಣೆಗೆ ಸಗಣಿಯನ್ನು ಬೆರಣಿಯನ್ನಾಗಿ ತಟ್ಟಿ ಉರುವಲಾಗಿ ಉಪ ಯೋಗಿಸುವ ಬದಲು, ಸಗಣಿಯನ್ನೇ ಉತ್ತಮ ಗೊಬ್ಬರವನ್ನಾಗಿ ಬಳಸಬೇಕು ಎನ್ನುವ ಅರಿವು. ಸಾಮಾನ್ಯವಾಗಿ ಮನೆಯ ದನಕರುಗಳನ್ನು ಆಕೆಯೇ ನೋಡಿ ಕೊಳ್ಳುವುದರಿಂದ, ಅವುಗಳಿಗೆ ಬರುವ ಸಾಮಾನ್ಯ ಕಾಯಿಲೆಗಳನ್ನು ತಡೆಗಟ್ಟುವ

ರಾಜಕುಮಾರಿ ಅಮೃತ್ ಕೌರ್ ಅವರ "ವಿಮೆನ್ ಅಂಡ್ ಕಮ್ಯುನಿಟಿ ಪ್ರಾಜೆಕ್ಟ್ಸ್" ಎನ್ನುವ ಲೇಖನದ ಆಧಾರದಿಂದ.

ಕ್ರಮಗಳನ್ನು ತಿಳಿದಿದ್ದರೆ ಉತ್ತಮ. ಜೊತೆಗೆ ಹೆಚ್ಚು ಹಾಲನ್ನು ಪಡೆಯಲು ದನಕರುಗಳನ್ನು ಪಾಲಿಸಿ ಪೋಷಿಸುವಂಥ ವೈಜ್ಞಾನಿಕ ಕ್ರಮಗಳನ್ನು ಆಕೆ ಅನುಸರಿಸಬೇಕು. ಯಾವುದೇ ದೇಶದಲ್ಲಾಗಲಿ ಕುಟುಂಬವೊಂದರ ರೈತ ಮುಖ್ಯ ವ್ಯವಸಾಯೋತ್ಪಾದಕನಾಗಿರುವನೋ ಅಂಥಲ್ಲಿ ಅವನ ಕುಟುಂಬದ ಸದಸ್ಯರೆಲ್ಲ ವ್ಯವಸಾಯದಲ್ಲಿ ಭಾಗಗಳಾಗಿರುತ್ತಾರೆ. ಪ್ರತಿಯೊಬ್ಬರಿಗೂ ಅವರವರ ಕೆಲಸಗಳು ಪೂರ್ವನಿಯೋಜಿತವಾಗಿರುತ್ತವೆ. ಗಂಡಸರು ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದರೆ ಮನೆಯ ಹೆಂಗಸರು ಮತ್ತು ಮಕ್ಕಳು ಕೋಳಿ ಸಾಕಣೆಯಲ್ಲೊ, ಕೈತೋಟದಲ್ಲೊ, ಕಾರ್ಯ ನಿರ್ವಹಿಸುವರು. ಆದ್ದರಿಂದ ಗ್ರಾಮೀಣ ಮಹಿಳೆ ಕುಟುಂಬದ ಆದಾಯವನ್ನು ಹೆಚ್ಚಿಸುವಲ್ಲಿ ಕಾರಣಳಾಗುವಳಲ್ಲದೆ ಮನೆಮಂದಿಗೆ ಉತ್ತಮ ಪೌಷ್ಟಿಕ ಆಹಾರವನ್ನು ಒದಗಿಸುವುದರಲ್ಲಿ ಸಫಲಳಾಗುವಳು.

ಸಾಮಾನ್ಯವಾಗಿ ಹಳ್ಳಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ತೌರುಮನೆ ಎನಿಸಿರುವುದರಿಂದ ಮನೆಯ ಹೆಣ್ಣುಮಕ್ಕಳು ಬಿಡುವಿನ ವೇಳೆಯಲ್ಲಿ ಯಾವುದಾದರೊಂದು ಬಗೆಯ ಕೈಗಾರಿಕೆಯನ್ನು ಕೈಗೊಳ್ಳಬಹುದು. ಮನೆಯ ಆಯವ್ಯಯಗಳಿಗೆ ಆಕೆ ಕಾರಣಳಾಗುವುದರಿಂದ ಗಂಡ ಸಂಪಾದಿಸಿದ ಹಣವನ್ನು ಬಲು ಜಾಣ್ಮೆಯಿಂದ ಬಳಸಬೇಕಾಗುವುದು. ವ್ಯವಸಾಯಕ್ಕೆ ಸಂಬಂಧಿಸಿದ ಖರ್ಚುಗಳನ್ನು ಕುರಿತು ಲೆಕ್ಕ ಇಡುವಂತೆಯೇ, ಆದಾಯದ ಬಗೆಗೂ ಲೆಕ್ಕ ಇಡಬೇಕಾಗುವುದು. ಭಾರತದ ಬೆನ್ನೆಲುಬಿನಂತಿರುವ ಹಳ್ಳಿಗಳಲ್ಲಿ ಮಹಿಳೆಯರ ಸಂಖ್ಯೆ ಶೇ. ೫೦ಕ್ಕಿಂತಲೂ ಹೆಚ್ಚಾಗಿರುವ ಕಾರಣ, ಅವರ ಸಹಕಾರದ ಬೆಲೆಯನ್ನು ಸಮಾಜ ಖಂಡಿತ ಕಡೆಗಣಿಸಬಾರದು. ಸಮುದಾಯದ ಅಭಿವೃದ್ಧಿಗೆ ನಿಸ್ವಾರ್ಥಭಾವನೆಯಿಂದ ಸೇವೆ ಸಲ್ಲಿಸಲು ಮಹಿಳಾ ಸಂಘವನ್ನು ಅವರು ಮಾಡಿಕೊಳ್ಳಲು ಜನ ಬೆಂಬಲವನ್ನು ನೀಡಬೇಕು.

ಸಾಮಾಜಿಕ ಜೀವನದಲ್ಲಿ ಗಂಡಿನಂತೆಯೆ ಹೆಣ್ಣಿಗೂ ಸಮಾನ ಸ್ಥಾನವಿದೆ. ಬಾಲ್ಯವಿವಾಹ, ವರದಕ್ಷಿಣೆ, ಪರ್ದಾ ಮುಂತಾದ, ಸಮಾಜ ಶ್ರೇಯಸ್ಕರವಲ್ಲದ ಪದ್ಧತಿಗಳನ್ನು ನಿರ್ಮೂಲಮಾಡುವಲ್ಲಿ ಜನ ಸಹಕಾರಿಯಾಗಬೇಕು. ಅಲ್ಲದೆ ಸಾಮಾಜಿಕ ಅಭಿವೃದ್ಧಿಗೆ ತಡೆಯುಂಟುಮಾಡುವಂಥ ಮೂಢನಂಬಿಕೆಗಳನ್ನು ಬುಡಸಮೇತ ತೆಗೆಯಲು ಸಿದ್ಧರಾಗಬೇಕು.

ಹಳ್ಳಿಯ ಜನಜೀವನವನ್ನು ಉತ್ತಮಪಡಿಸಲು ಯೋಜನೆಗಳನ್ನು ಸಿದ್ಧಪಡಿಸುತ್ತಿರುವ ತಜ್ಞರು, ರಾಜಕೀಯ ಮತ್ತು ಪೌರನೀತಿಗಳಲ್ಲಿ ಸ್ತ್ರೀಯ ಸಕ್ರಿಯ ಪಾತ್ರಗಳನ್ನು ಕುರಿತು ಆಲೋಚಿಸಬೇಕು. ಹಳ್ಳಿಯ ಪಂಚಾಯಿತಿ

ಯಲ್ಲಿ ಆಕೆಗೆ ಪ್ರಾತಿನಿಧ್ಯ ಕೊಡುವುದಲ್ಲದೆ ಸಾಮೂಹಿಕ ಕಾರ್ಯಕ್ರಮಗಳಲ್ಲಿ ಮಹಿಳೆ ಭಾಗವಹಿಸಲು ಅವಕಾಶ ಮಾಡಿಕೊಡಬೇಕು. ಇದರಿಂದ ಮಹಿಳೆ ತನ್ನ ಕರ್ತವ್ಯಗಳನ್ನು ಜವಾಬ್ದಾರಿಗಳನ್ನು ಅರಿಯಲು ಸಹಾಯಕವಾಗುವುದು. ಈ ಗುರಿಗಳನ್ನು ಸಾಧಿಸಲು ಹಲವಾರು ಯೋಜನೆಗಳು ಅವಶ್ಯಕ. ಗ್ರಾಮೀಣ ಮಹಿಳೆಯರ ಪ್ರಗತಿಗೆ ರೂಪಿಸಿಕೊಂಡ ಯಾವುದೇ ಕಾರ್ಯಕ್ರಮವಾಗಲಿ, ಮುಂದೆ ಕಾಣಿಸಿರುವ ಏರ್ಪಾಡುಗಳನ್ನು ಹೊಂದಿರಬೇಕು :

೧) ವಯಸ್ಕರ ಶಿಕ್ಷಣ ಸೌಲಭ್ಯ. ೨) ಕುಟುಂಬ ಕಲ್ಯಾಣ ಮತ್ತು ಶಿಶು ಕಲ್ಯಾಣ ಕೇಂದ್ರಗಳ ಸ್ಥಾಪನೆ. ೩) ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗಾಗಿ ನರ್ಸರಿಗಳು ಮತ್ತು ಆಟದ ಮೈದಾನಗಳು. ೪) ಮಹಿಳೆಯರ ದೈನಂದಿನ ಕೆಲಸ ಕಾರ್ಯಗಳಿಗೆ ಸುಲಭ ಯಂತ್ರೋಪಕರಣಗಳನ್ನು ಒದಗಿಸುವುದು. ಉದಾಹರಣೆಗೆ ರಾಟೆಯನ್ನು ಅಳವಡಿಸಿರುವ ಬಾವಿ. ೫) ಮಹಿಳೆಯರಿಗಾಗಿ ಮನರಂಜನಾ ಕಾರ್ಯಕ್ರಮಗಳು. ೬) ಹಳ್ಳಿ ಪಂಚಾಯಿತಿಯಲ್ಲಿ ಮತ್ತು ಸಮುದಾಯ ವ್ಯವಸ್ಥೆಗಳಲ್ಲಿ ಪಾಲುಗೊಳ್ಳಲು ಮಹಿಳಾ ಪ್ರತಿನಿಧಿಗಳನ್ನು ತರಬೇತುಗೊಳಿಸುವುದು. ೭) ಗ್ರಾಮೀಣ ಕೈಗಾರಿಕೆಗಳನ್ನು ಉತ್ತಮಪಡಿಸಲು ಸಹಕಾರ ಸಂಘಗಳ ಸ್ಥಾಪನೆ. ೮) ಹಳ್ಳಿಗಳಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಮುಖ್ಯ ಕೊಡುವುದು—ಈ ಏರ್ಪಾಡುಗಳನ್ನು ಕಾರ್ಯರೂಪಕ್ಕೆ ತರಲು ಹಲವಾರು ನಿಯೋಗಗಳಿಂದ ಸಹಾಯ ಪಡೆಯಬಹುದು.

೧) ಕಾರ್ಯನಿರ್ವಾಹಕ ಯೋಜನಾಧಿಕಾರಿಗಳು ಮತ್ತು ಹಳ್ಳಿಗಳಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಪ್ರತಿನಿಧಿಗಳ ಸಹಕಾರದಿಂದ ಸರ್ಕಾರ ಕಾರ್ಯ ಪ್ರವೃತ್ತವಾಗಬೇಕು.

೨) ಗ್ರಾಮೀಣ ಮಹಿಳೆಯರ ಪ್ರಗತಿಗಾಗಿ ಆಲ್ ಇಂಡಿಯಾ ವುಮೆನ್ಸ್, ಕಾನ್‌ಫರೆನ್ಸ್, ನ್ಯಾಷನಲ್ ಕೌನ್ಸಿಲ್ ಆಫ್ ವುಮೆನ್ ಇನ್ ಇಂಡಿಯ, ಕಸ್ತೂರ್ ಬಾ ನ್ಯಾಷನಲ್ ಮೆಮೋರಿಯಲ್ ಟ್ರಸ್ಟ್ ಮತ್ತಿತರ ನಿಯೋಗ ಗಳು ಶ್ರದ್ಧೆಯಿಂದ ಕೆಲಸ ಮಾಡಬೇಕು. ಮುಖ್ಯವಾಗಿ ರಾಜ್ಯಗಳಲ್ಲಿರುವ ಕಸ್ತೂರ್ ಬಾ ಟ್ರಸ್ಟ್‌ಗಳು ಈ ದೆಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗ ಬೇಕು.

೩) ಗಾಂಧೀಜಿಯ ಅನುಯಾಯಿಗಳು ಗ್ರಾಮೀಣ ಜನತೆಯ ಮೇಲೆ ವಿಶೇಷ ಪ್ರಭಾವವನ್ನು ಬೀರಿರುವುದರಿಂದ ಅವರ ಬೆಂಬಲವನ್ನು ಪಡೆಯುವುದು.

೪) ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಶೀಘ್ರಗೊಳಿಸಲು

ಹಳ್ಳಿಯ ಶಾಲೆಗಳಲ್ಲಿನ ಉಪಾಧ್ಯಾಯರುಗಳನ್ನು ಕಾರ್ಯೋದ್ಯುಕ್ತರನ್ನಾಗಿ ಮಾಡುವುದು.

೫) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಮತ್ತು ವೈದ್ಯಕೀಯ ಪದವೀಧರರ ಸೇವೆಯನ್ನು ಬಳಸಿಕೊಳ್ಳುವುದು. ಭಾರತದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ವಯಂಪ್ರೇರಣೆಯ ಸಮಾಜ ಸೇವೆಯನ್ನು ಮಾಡಲು ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಉಂಟುಮಾಡಿದರೆ ತಮ್ಮ ರಜೆಯ ದಿನಗಳಲ್ಲಿ ಗ್ರಾಮೀಣ ಜನರ ಸೇವೆಯನ್ನು ಮಾಡಲು ಅವರು ಸಿದ್ಧರಾಗುವರು.

ಈಚಿನ ದಿನಗಳಲ್ಲಿ ಎಷ್ಟೋ ಹಳ್ಳಿಗಳಲ್ಲಿ ಶುಚಿತ್ವವನ್ನು ಯುಕ್ತ ರೀತಿಯಲ್ಲಿ ಪಾಲಿಸದೆ ಇರುವುದನ್ನು ಕಾಣಬಹುದು. ಹಳ್ಳಿಯ ಜನರಲ್ಲಿ ಉತ್ಸಾಹ, ಆಸಕ್ತಿ ಬಹಳಷ್ಟು ಕಡಿಮೆಯಾಗಿದೆ. ಹಳ್ಳಿಗಳಲ್ಲಿ ಬೆಳೆವ ಯುವಕ ಯುವತಿಯರು ಸುಖವನ್ನರಸಿ ನಗರ ಪ್ರದೇಶಗಳಿಗೆ ನಡೆಯತೊಡಗಿದ್ದಾರೆ. ಹಳ್ಳಿಗಳಲ್ಲಿ ತೌರು ಮನೆಯನ್ನು ಪಡೆದಿರುವಂಥ ನಗರವಾಸಿ ಜನ ಮಾತ್ರ. ವರ್ಷದಲ್ಲಿನ ಕೆಲವು ದಿನಗಳನ್ನಾದರೂ ಹಳ್ಳಿಗಳಲ್ಲಿ ಕಳೆಯಲು ಆಸಕ್ತರಾಗಿರುವುದು ಸಮಾಧಾನಕರ ಸಂಗತಿ.

ಆರ್. ರಾಮಕೃಷ್ಣ



ಜಗತ್ತನ್ನು ಆಳುವ ದುರಾಸೆಯೆ ಮಾನವನ ದುಃಖಕ್ಕೆ ಹೇತುವಾಗಿದೆ. ಜಗತ್ತನ್ನು ಪ್ರೀತಿಸುವ ಆಸೆ ಉಂಟಾದರೆ, ಮನುಷ್ಯನಿಗೆ ನೆಮ್ಮದಿ ದೊರಕೀತು.

—ಸರದಾರ್ ಪಟೇಲ್

ಹೊಸ ಚಮತ್ಕಾರದ ವಿದ್ಯುತ್ ಚಿಕಿತ್ಸೆ-ಮಾನವ ಕುಲಕ್ಕೆ ಹೊಸ ಆಸೆ

ಒಂದು ಹೊಸ ಚಿಕಿತ್ಸಾವಿಧಾನ ಹುಟ್ಟನ್ನು ಪಡೆಯುತ್ತಿದೆ. ಈ ಹೊಸ ಮತ್ತು ಚಮತ್ಕಾರಿಕ ಚಿಕಿತ್ಸಾ ವಿಧಾನದ ಹೆಸರು ವಿದ್ಯುತ್ ಚಿಕಿತ್ಸಾವಿಧಿ; ಈ ಚಿಕಿತ್ಸಾ ವಿಧಿಯ ಸಹಾಯದಿಂದ ಚಿಕಿತ್ಸಕರು ಭವಿಷ್ಯದಲ್ಲಿ ಭಿನ್ನಾಂಗ ವ್ಯಕ್ತಿಗಳ ಅಂಗಗಳನ್ನು ಜೋಡಿಸಬಲ್ಲರು. ಕ್ಯಾನ್ಸರ್ ರೋಗಿಗಳ ಕೋಶಗಳ ಅನಿಯಂತ್ರಿಕ ವಿಕಾಸವನ್ನು ತಡೆಯಬಲ್ಲರು.

ತಾವು ತಮ್ಮ ಕೋಶಗಳೊಂದಿಗೆ ಮಾತನಾಡುತ್ತಿದ್ದೇವೆ, ಅವುಗಳನ್ನು ಹೆಚ್ಚಲು ಅಥವಾ ಸವೆಯಲು ಹೇಳುತ್ತಿದ್ದೇವೆ. ತಮ್ಮ ಆಕಾರ ಮತ್ತು ಕಾರ್ಯಸಿಧಿಯಲ್ಲಿ ಮನೋನುಕೂಲ ಪರಿವರ್ತನೆಯಾಗಲು ಅವುಗಳೊಂದಿಗೆ ಹೇಳುತ್ತಿದ್ದೇವೆ ಅಥವಾ ನಷ್ಟವಾದ ಕೋಶಗಳ ಸ್ಥಾನದಲ್ಲಿ ಹೊಸ ಕೋಶಗಳನ್ನು ಹಾಕಲು ಹೇಳುತ್ತಿದ್ದೇವೆ ಎಂದು ಕಲ್ಪಿಸಿಕೊಳ್ಳಿ.

ಈ ಕಲ್ಪನೆ ಅಮೆರಿಕೆಯಲ್ಲಿ ಸಾಕಾರಗೊಳ್ಳುತ್ತಿದೆ ಮತ್ತು ಅಲ್ಲಿನ ಚಿಕಿತ್ಸಕರು ರೋಗಿಯ ಶರೀರ ಸ್ಪರ್ಶ ಮಾಡದೆ ಅಥವಾ ಅವನ ಮೇಲೆ ರಸಾಯನಿಕ ಪ್ರಯೋಗವನ್ನು ಮಾಡದೆಯೇ ಮೇಲೆ ಹೇಳಿದ ಚಮತ್ಕಾರವನ್ನು ಮಾಡಿ ತೋರಿಸುತ್ತಿದ್ದಾರೆ. ಅವರು ರೋಗಿಯ ಕೋಶಗಳೊಂದಿಗೆ ಅವುಗಳ ಭಾಷೆಯಲ್ಲಿ 'ಸಂಭಾಷಣೆ, ಮಾಡುವ ಮತ್ತು ಅವುಗಳಿಗೆ ಆವಶ್ಯಕ ನಿರ್ದೇಶನಗಳನ್ನು ಕೊಡುವುದರಲ್ಲಿ ಸಫಲರಾಗಿದ್ದಾರೆ. ಈ ಭಾಷೆಯೇ ವಿದ್ಯುತ್ ಸಿಗ್ನಲ್‌ಗಳ ಭಾಷೆ. ಇದೇ ಸಾರ್ವಭೌಮಿಕ ಭಾಷೆಯ ಮಾಧ್ಯಮಗಳಿಂದಲೇ ಶರೀರದ ಅವಯವ ಸಂಸ್ಥಾನಗಳು ಪರಸ್ಪರ 'ಸಂಭಾಷಣೆ' ಮಾಡುತ್ತವೆ, ತಮ್ಮ ವಿಕಾಸವನ್ನು ನಿಯಮಿತಗೊಳಿಸುತ್ತವೆ ಮತ್ತು ತಮ್ಮ 'ದುರುಸ್ತಿ'ಯನ್ನು ತಾವೇ ಮಾಡಿಕೊಳ್ಳುತ್ತವೆ.

ಮಾನವ ಶರೀರ ವಿದ್ಯುತ್-ಚುಂಬಕೀಯ 'ನಿಲುವಂಗಿ'ಯಿಂದ ಮುಚ್ಚಿಡ

೧೯೮೩ರ ಜುಲೈ ತಿಂಗಳ 'ನವನೀತ್' ಪತ್ರಿಕೆಯಲ್ಲಿ ಪ್ರಕಟವಾದ ಕ್ಯಾಥಲೀನ್ ಮ್ಯೂಕಾಲಿಫ್ ಅವರ "ನಯೀಚಮತ್ಕಾರಿಕ್ ವಿದ್ಯುತ್ ಚಿಕಿತ್ಸಾ ಮಾನವ ಜಾತಿಕೇಲಿಯೆ ನಯೀ ಆಶಾ" ಲೇಖನದ ಅನುವಾದ.

ಲ್ಪಟ್ಟಿರುತ್ತದೆ ಮತ್ತು ಈ 'ನಿಲುವಂಗಿ' ಮುಡಿಯಿಂದ ಅಡಿಯವರೆಗೆ ಅದರ ರಕ್ಷಣೆಯನ್ನು ಮಾಡುತ್ತದೆ. ವಿದ್ಯುತ್ ತರಂಗಗಳು ತಮ್ಮ ಕಾರ್ಯವನ್ನು ಗರ್ಭಾಗಮನದಿಂದಲೇ ಆರಂಭಿಸುತ್ತವೆ ಮತ್ತು ಆ ಎಲ್ಲಾ ತೊಡಕಾದ ಪ್ರಕ್ರಿಯೆಗಳನ್ನು ಸಂಚಾಲನೆ ಮಾಡುತ್ತವೆ. ಇದರಿಂದ ಮಗುವಿನ ಜನ್ಮ ಸಂಭವವಾಗುತ್ತದೆ. ಯಾವುದೇ ಅವಯವದ ರಚನೆ ಪೂರ್ಣಗೊಂಡಾಗ ವಿದ್ಯುತ್ ತರಂಗಗಳ ಕೆಲಸ ಕಡಿಮೆಯಾಗುತ್ತದೆ. ಆದರೆ ನಮ್ಮ ಶರೀರವನ್ನು ಆವರಿಸಿದ ವಿದ್ಯುತ್-ಚುಂಬಕೀಯ ಆವರಣ ಮೃತ್ಯುಂಪರ್ಯಂತ ನಮ್ಮ ಶರೀರದ ಸುತ್ತು ಆವರಿಸಿರುತ್ತದೆ.

ಜೀವವಿದ್ಯುತ್ :

ಕೋಶಗಳ ಕಾರ್ಯ ಅನಿಯಮಿತವಾದಾಗ ಶರೀರಕ್ಕೆ ರೋಗ ತಗಲುತ್ತದೆ. 'ಆಕ್ಯುಪಂಕ್ಚರ್' ಚಿಕಿತ್ಸಾ ವಿಧಾನದ ಮೂಲಕ ಕೋಶಗಳ ಈ ಅನಿಯಮಿತ ಕಾರ್ಯವಿಧಾನವನ್ನು ನಿಯಮಿತಗೊಳಿಸುವ ಪ್ರಯತ್ನ ಮಾಡಲಾಗುತ್ತದೆ. ವಾಸ್ತವವಾಗಿ ಗಾಯಗೊಂಡ ಅಥವಾ ನಿರ್ಜೀವ ಕೋಶಗಳು ವಿದ್ಯುತ್ ತರಂಗಗಳ ಮೂಲಕ ಮಾತ್ರ ಪುನರ್‌ಜನ್ಮ ಪಡೆಯುತ್ತವೆ. ವಿದ್ಯುತ್ ತರಂಗಗಳು ಅಸ್ವಸ್ಥ ಕೋಶಗಳು ಸ್ವಸ್ಥವಾಗುವತನಕ ಅವುಗಳ ಮೇಲೆ ವಿಶೇಷ ರೂಪದಿಂದ ಸಕ್ರಿಯವಾಗುತ್ತದೆ.

ಜೀವ ವಿದ್ಯುತ್ ಅನ್ನು ೧೮ನೇ ಶತಮಾನದಲ್ಲಿ ಲುಇಗೀಗಲ್ವಾನಿ ಎಂಬುವನು ಕಂಡು ಹಿಡಿದ. ಆದರೆ ಕೋಶದ ಕ್ರಿಯೆಗಳಲ್ಲಿ ಜೀವವಿದ್ಯುತ್ತಿನ ಎಷ್ಟೊಂದು ಮಹತ್ವಪೂರ್ಣ ಯೋಗದಾನವಿದೆ ಎಂಬುದರ ಪರಿಚಯ ವಿಜ್ಞಾನಿಗಳಿಗೆ ಉಂಟಾದುದು ಬಹಳ ಇತ್ತೀಚೆಗೆ. ಈಗ ವೈಜ್ಞಾನಿಕ ಚಿಕಿತ್ಸಕರು ಆಂತರಿಕ ವಿದ್ಯುತ್ ತರಂಗಗಳ ಸ್ಥಾನದಲ್ಲಿ ಬಾಹ್ಯ ವಿದ್ಯುತ್‌ತರಂಗಗಳ ಪ್ರಯೋಗ ಮಾಡುವ ವಿಚಾರ ಮಾಡುತ್ತಿದ್ದಾರೆ. ಈ ಚಿಕಿತ್ಸಾ ವಿಧಿಯ ಸಹಾಯದಿಂದ ಭವಿಷ್ಯದಲ್ಲಿ ವಿಜ್ಞಾನಿಗಳು ವ್ಯಕ್ತಿಗಳ ಛಿನ್ನಾಂಗಗಳನ್ನು ಕೂಡಿಸಬಲ್ಲರು ಮತ್ತು ಕ್ಯಾನ್ಸರ್ ರೋಗಿಗಳ ಕೋಶಗಳ ಅನಿಯಂತ್ರಿಕ ವಿಕಾಶವನ್ನು ತಡೆಯಬಲ್ಲರು ಎಂಬ ಆಸೆ ಅವರಿಗಿದೆ. ನ್ಯೂಯಾರ್ಕಿನ ಒಂದು ಪ್ರಮುಖ ಚಿಕಿತ್ಸಾ ಕೇಂದ್ರದ-ಕೊಲಂಬಿಯಾ ಮೆಡಿಕಲ್ ಸೆಂಟರ್-ಡಾ|| ಎಂಡ್ರ್ಯೂಭಾಸೆತ್ ಅವರ ಪ್ರಕಾರ : "ಚಿಕಿತ್ಸಾ ಕ್ಷೇತ್ರದಲ್ಲಿ ಶಲ್ಯಕ್ರಿಯೆ ಅಥವಾ ಔಷಧಿಗಳ ಯಾವ ಸರ್ವವ್ಯಾಪಕವಾದ ಪ್ರಭಾವವಿದೆ, ಅದೇ ಪ್ರಭಾವ ವಿದ್ಯುತ್ ಚಿಕಿತ್ಸೆಗೂ ಉಂಟಾಗಲಿದೆ.

ಡಾ|| ಭಾಸೆತ್ ಅವರು ಮೂಳೆಗಳ ಮುರಿತವನ್ನು ಯಾವುದೇ ರೀತಿಯ ಚಿಕಿತ್ಸಾ ವಿಧಾನದಿಂದ ಸರಿಹೋಗದಿದ್ದ ಅದನ್ನು, ಪ್ರಪ್ರಥಮವಾಗಿ ಈ ವಿದ್ಯುತ್ ಚಿಕಿತ್ಸೆಯಿಂದ ಸರಿಮಾಡಿದರು. ಈ ಚಿಕಿತ್ಸಾ ವಿಧಾನದಲ್ಲಿ ಡಾ|| ಭಾಸೆತ್ ಅವರು ಮುರಿದ ಮೂಳೆಯ ಸುತ್ತಲೂ ವಿದ್ಯುತ್ ಚುಂಬಕೀಯ ತರಂಗಗಳ ಜಾಲವನ್ನು ಹರಡಿ ಪ್ರಭಾವಿತ ಭಾಗವನ್ನು ಪೂರ್ಣರೂಪದಲ್ಲಿ ವಿದ್ಯುನ್ಮಯವನ್ನಾಗಿ ಮಾಡಿದ್ದರು.

ಡಾ|| ಭಾಸೆತ್‌ರವರ ಹೇಳಿಕೆ ಹೀಗಿದೆ: ರೋಗಿಗಳು ವಿದ್ಯುತ್ ಚಿಕಿತ್ಸಾ ವಿಧಾನವನ್ನು ಶಲ್ಯ ಚಿಕಿತ್ಸೆಗಿಂತ ಉತ್ತಮವೆಂದು ಭಾವಿಸುತ್ತಾರೆ. ಏಕೆಂದರೆ ವಿದ್ಯುತ್ ಉಪಚಾರದಲ್ಲಿ ಅವರಿಗೆ ಯಾವ ಕಷ್ಟವೂ ಆಗುವುದಿಲ್ಲ. ಈ ವಿಧಾನದಿಂದ ಆಂತರಿಕ ಮುರಿತವು ಸರಿಹೋಗಲು ಪ್ರಾಯಃ ಆರು ತಿಂಗಳು ಹಿಡಿಯುತ್ತದೆ ಮತ್ತು ರೋಗಿಗಳಿಗೆ ಆಸ್ಪತ್ರೆಗೆ ಸೇರಬೇಕಾಗಿಯೂ ಇಲ್ಲ, ಶಲ್ಯ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾಗಿಯೂ ಇಲ್ಲ.

ಈ ಚಿಕಿತ್ಸಾ ವಿಧಾನದಲ್ಲಿ ರೋಗಿಯ ಒಂದು ವಿದ್ಯುತ್ ಕುಂಡಲವನ್ನು ಪ್ರಭಾವಿತ ಭಾಗದ ಮೇಲೆ ನಿಶ್ಚಿತ ಅವಧಿಯ ತನಕ ಇಡಬೇಕಾಗುತ್ತದೆ.

ಬಾಹ್ಯಸ್ನಾಯುಗಳ ವಿಕಾಸ-ದರವೂ ಪ್ರಭಾವಿತ :

ಅನೇಕ ಪಶುಗಳ ಮೇಲೆ ವಿದ್ಯುತ್ ಚಿಕಿತ್ಸಾವಿಧಿಯ ದೀರ್ಘಪ್ರಯೋಗವನ್ನು ಮಾಡಿ ವಿಜ್ಞಾನಿಗಳು ಈ ನಿರ್ಧಾರಕ್ಕೆ ಬಂದಿದ್ದಾರೆ. ಏನೆಂದರೆ, ವಿದ್ಯುತ್ತಿನ ಪ್ರಯೋಗದಿಂದ ಅವಯವಗಳ ಬಾಹ್ಯ ಸ್ನಾಯುಗಳ ವಿಕಾಸ-ದರವನ್ನು ಎರಡು ಅಥವಾ ಮೂರು ಪಟ್ಟು ತೀವ್ರಗೊಳಿಸಬಹುದು. ಅಪಘಾತ ಮತ್ತು ಗಾಜಿನಿಂದ ಅಂಗಗಳು ಕತ್ತರಿಸಿ ಹೋಗುವುದರಿಂದ ಅಥವಾ ಮುರಿದು ಹೋಗುವುದರಿಂದ ಉಂಟಾಗುವ ಹಾನಿಯನ್ನು (ತೊಂದರೆಯನ್ನು) ಸರಿಪಡಿಸಲು ಸಾಧಾರಣ ಚಿಕಿತ್ಸಾವಿಧಾನಗಳಿಗೆ ಎಷ್ಟು ಸಮಯ ತಗುಲುತ್ತದೆ. ಅದರ ಅರ್ಧಕ್ಕಿಂತ ಕಡಿಮೆ ಸಮಯ ವಿದ್ಯುತ್ ಚಿಕಿತ್ಸಾ ವಿಧಾನಕ್ಕೆ ತಗುಲುತ್ತದೆ.

ಡಾ|| ಭಾಸೆತ್ ಅಲ್ಲದೆ ಅನ್ಯ ಚಿಕಿತ್ಸಕರೂ ಕೂಡ ವಿದ್ಯುತ್ ಚಿಕಿತ್ಸಾ ವಿಧಾನವು ಬಾಹ್ಯ ಸ್ನಾಯುಗಳ ಪೆಟ್ಟುಗಳ ಚಿಕಿತ್ಸೆಯನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದೆ ಎಂಬ ಮಾತನ್ನು ಒಪ್ಪಿಕೊಳ್ಳತೊಡಗಿದ್ದಾರೆ. ಅಧರಾಂಗವಾತದ ಕೋಟ್ಯಾಂತರ ರೋಗಿಗಳಿಗೆ ಈ ನಿಶ್ಚಿತವಾದ ಚಿಕಿತ್ಸಾವಿಧಿ

ಯಿಂದ, ಅನ್ಯಚಿಕಿತ್ಸಾವಿಧಿಗಳಿಗಿಂತ ಹೆಚ್ಚಾಗಿ ಶೀಘ್ರ ಮತ್ತು ಸ್ಥಾಯೀಲಾಭ ಉಂಟಾಗುವುದು.

ವಿದ್ಯುತ್ ಚಿಕಿತ್ಸಾ ವಿಧಾನದಿಂದ ಈ ಚಮತ್ಕಾರಿಕ ಪರಿಣಾಮಗಳ ಒಂದು ಕಾರಣವೆಂದರೆ ಶರೀರದ ಕೋಶಗಳು ಮತ್ತು ಸ್ನಾಯುಗಳು ಶರೀರದೊಳಗಿರುವ ವಿದ್ಯುತ್ತಿನಿಂದ ಎಷ್ಟು ಲಾಭವನ್ನು ಪಡೆಯುತ್ತವೆಯೋ ಅಷ್ಟೇ ಲಾಭವನ್ನು ಬಾಹ್ಯ ವಿದ್ಯುತ್ತಿನಿಂದ ಪಡೆಯುತ್ತವೆ.

ವಿದ್ಯುತ್ ಚಿಕಿತ್ಸಾ ವಿಧಾನವನ್ನು ಪ್ರಗತಿಪಥದಲ್ಲಿ ತರುವ ಮತ್ತು ಒಂದು ಹೊಸ ದಿಕ್ಕನ್ನು ನೀಡುವ ಶ್ರೇಯಸ್ಸು ಅಮೆರಿಕೆಯ ವೈಜ್ಞಾನಿಕ ಚಿಕಿತ್ಸಕ ಡಾ|| ರಾಬರ್ಟ್ ಬೇಕರ್ ಅವರಿಗೆ ಸಲ್ಲುತ್ತದೆ. ಅವರು ಸೂಕ್ಷ್ಮ ಯಂತ್ರಗಳ ಸಹಾಯದಿಂದ ಗಾಯಗಳ ಚಿಕಿತ್ಸೆಯಲ್ಲಿ ತೊಡಗಿರುವ ಆಂತರಿಕ ವಿದ್ಯುತ್ ತರಂಗಗಳ ವಿಶೇಷ ಅಧ್ಯಯನವನ್ನು ಮಾಡಿದ್ದರು. ಈ ಅಧ್ಯಯನದಿಂದ ಗಾಯಗೊಂಡ ಅವಯವವನ್ನು ಸರಿಯಾದ ಸ್ಥಿತಿಗೆ ತರುವುದಕ್ಕಾಗಿ ಒಂದು ಆ್ಯಂಫಿಯರ್ ವಿದ್ಯುತ್‌ತರಂಗದ ಅರ್ಬುದದ ಒಂದು ಭಾಗದಷ್ಟು ಸಾಕಾಗುತ್ತದೆ ಎಂಬುದನ್ನು ಕಂಡುಕೊಂಡರು.

ಮತ್ತೊಬ್ಬ ಅಮೇರಿಕೆಯ ವೈಜ್ಞಾನಿಕ ಚಿಕಿತ್ಸಕ ಡಾ|| ಸ್ಟೀಫನ್‌ಸ್ಮಿತ್ತನು ಒಂದು ಕಪ್ಪೆಯ ಗಾಯಗೊಂಡ ಪಾದಗಳ ಮೇಲೆ ಆಂತರಿಕ ವಿದ್ಯುತ್‌ಧಾರೆಯ ಪ್ರಭಾವದ ವಿಸ್ತಾರವಾದ ಅಧ್ಯಯನಮಾಡಿ ಈ ಕೆಲಸವನ್ನು ಮತ್ತಷ್ಟು ಮುಂದುವರಿಸಿದ ಡಾ|| ಸ್ಟೀಫನ್ನನು ವಿದ್ಯುತ್ತಿನ ಬಾಹ್ಯಪ್ರಯೋಗದಿಂದ ಈ ಕಾಲನ್ನು ಕಡಿಮೆ ಸಮಯದಲ್ಲಿ ಸರಿಪಡಿಸಿ ತೋರಿಸಿದ. ಇಂಥ ಪ್ರಯೋಗಗಳನ್ನು ಅನೇಕ ಕಪ್ಪೆಗಳ ಮೇಲೆ ಮಾಡಿದ. ಈ ಪ್ರಯೋಗಗಳಿಂದ ಕಪ್ಪೆ, ಇಲಿ ಮಾತ್ರವಲ್ಲ ಮನುಷ್ಯನ ಒಳಗೆ ಯಾವ ವಿದ್ಯುತ್ ಇದೆ. ಅದು ಈ ಅಸ್ವಸ್ಥ ಅವಯವಗಳನ್ನು ಸರಿಪಡಿಸುವುದಕ್ಕೆ ಸಾಲುವುದಿಲ್ಲ. ಒಂದು ವೇಳೆ ಅದಕ್ಕೆ ಬಾಹ್ಯವಿದ್ಯುತ್ ತರಂಗಗಳು ಸಹಾಯ ಒದಗಿದರೆ, ಆ ಅಂಗಗಳನ್ನು ಸುಗಮವಾಗಿ ಮತ್ತು ಶೀಘ್ರವಾಗಿ ಸರಿಮಾಡಬಹುದು ಎಂಬುದರ ಪರಿಚಯ ಅವನಿಗೆ ದೊರಕಿತು. ಇದು ಒಂದು ಕ್ರಾಂತಿಕಾರಿ ಆವಿಷ್ಕಾರವಾಗಿತ್ತು.

ಪ್ರಾಗೈತಿಹಾಸಿಕ ಮಾನವನಿಗೆ ಜೀವವಿದ್ಯುತ್ತಿನ ಪರಿಚಯವಿತ್ತು :

ಸಸ್ತನಿ ಪ್ರಾಣಿಗಳ ಕೋಶ ಮತ್ತು ಸ್ನಾಯುಗಳ ಬಾಹ್ಯ ವಿದ್ಯುತ್ತಿನ ಪ್ರಯೋಗಗಳಿಂದ ಸಫಲ ಚಿಕಿತ್ಸೆ ಮಾತ್ರವಲ್ಲ ನವೀಕರಣವೂ ಸಂಭವ ಎಂಬ

ಈ ಕ್ರಾಂತಿಕಾರಕ ಆವಿಷ್ಕಾರವು ಚಿಕಿತ್ಸಾಕ್ಷೇತ್ರದಲ್ಲಿ ಇದುವರೆಗೂ ಗುಪ್ತವಾಗಿದ್ದ ಅನೇಕ ದ್ವಾರಗಳನ್ನು ತೆರೆಯಿತ್ತು ಮತ್ತು ಈ ಅಕಲ್ಪಿತ ಆವಿಷ್ಕಾರವೂ ಅನೇಕಾನೇಕ ಅಪ್ರತ್ಯಾಶಿತ ಸಂಭಾವನೆಗಳಿಗೆ ಜನ್ಮವಿತ್ತಿದೆ ಎಂದು ಅನೇಕ ಅಗ್ರಮಾನ್ಯ ಚಿಕಿತ್ಸಕ ವಿಜ್ಞಾನಿಗಳು ನಂಬಿದ್ದಾರೆ.

ಪ್ರಾಗೈತಿಹಾಸಿಕ ಕಾಲದ ಮಾನವನಿಗೆ ಜೀವವಿದ್ಯುತ್ ಮತ್ತು ವಿದ್ಯುತ್ ಚಿಕಿತ್ಸಾವಿಧಾನವು ಹುಟ್ಟಿನಿಂದಲೇ ತಿಳಿದಿತ್ತು ಮತ್ತು ಈ ಪರಿಚಯದ ಆಧಾರದ ಮೇಲೆ ಅವನು ತನ್ನ ಆಂತರಿಕ ಪೆಟ್ಟುಗಳನ್ನು ಸರಿಪಡಿಸಿಕೊಳ್ಳುತ್ತಿದ್ದ ಎಂದು ಪುರಾತತ್ವವೇತ್ತರು ಮತ್ತು ಇತಿಹಾಸಜ್ಞರು ಹೇಳುತ್ತಾರೆ. ಬಾಹ್ಯವಿದ್ಯುತ್ತಿನ ನಿರ್ಮಾಣವನ್ನು ಹೇಗೆ ಮಾಡಬಹುದು, ಎಂಬುದು ಅಜ್ಞಾತವಾಗಿದೆ. ಆದರೆ ಮಾನವನು ಸಭ್ಯ ಮತ್ತು ಸುಸಂಸ್ಕೃತವಾಗುತ್ತ ಹೋದಂತೆಲ್ಲ ಈ ತಿಳಿವು ಅವನಿಂದ ಮರೆಯಾಗುತ್ತಾ ಹೋಯಿತು ಎಂಬ ಊಹೆ ಸ್ವಾಭಾವಿಕ. ಇದರಿಂದ ಜೀವವಿದ್ಯುತ್ ಮತ್ತು ವಿದ್ಯುತ್ ಚಿಕಿತ್ಸಾವಿಧಿ ಸಂಪೂರ್ಣವಾಗಿ ಪ್ರಕೃತಿದತ್ತವಾದುದು ಅದನ್ನು ವಿಜ್ಞಾನವು ಕೇವಲ ಕಂಡು ಹಿಡಿಯಿತಷ್ಟೇ ಎಂಬುದು ಗೊತ್ತಾಗುತ್ತದೆ.

ಈ ಚಿಕಿತ್ಸಾ ವಿಧಾನವನ್ನು ಕಂಡು ಹಿಡಿದ ಮೇಲೆ ಶರೀರದ ಕೆಲವು ಅಂಗ ಮತ್ತು ಅವಯವಗಳು ಇತರ ಅಂಗ ಮತ್ತು ಅವಯವಗಳಿಗಿಂತ ಹೆಚ್ಚಾಗಿ ವಿದ್ಯುತ್ತಿನ ಉತ್ಪಾದನೆಯನ್ನು ಏಕೆ ಮಾಡುತ್ತವೆ ಮತ್ತು ವಿದ್ಯುತ್‌ತರಂಗಗಳು ತಾವಾಗಿಯೇ ಕ್ಷತಿಗ್ರಸ್ತ ಅಂಗ ಮತ್ತು ಅವಯವಗಳ ಕಡೆಗೆ ಏಕೆ ಮತ್ತು ಹೇಗೆ ಹರಿಯುತ್ತವೆ? ಎಂಬುದನ್ನು ತಿಳಿಯುವ ಪ್ರಯತ್ನವನ್ನು ವಿಜ್ಞಾನಿಗಳು ಮಾಡಿದರು.


ಈ ಪ್ರಯತ್ನದಿಂದ ಎಲ್ಲಿಂದ ಕ್ಷತಿಗ್ರಸ್ತ ಭಾಗಗಳಿಗೆ ವಿದ್ಯುತ್ ಧಾರೆ ಹರಿಯುತ್ತದೆ, ಆ! ಆರ್ಗ್ಯಾನಿಕ್ (ಆಂಗಿಕ) ಬ್ಯಾಟರಿಯ ಪತ್ತೆಯಾಯಿತು. ಐದು ವರ್ಷಗಳ ತನಕ ಈ ಪ್ರವಾಹದ ಪ್ಯಾಟರ್ನ್‌ನ ಅಧ್ಯಯನ ಮಾಡಿದ ಮೇಲೆ ಮಾನವನನ್ನೊಳಗೊಂಡು ವಿಭಿನ್ನ ಪ್ರಾಣಿಗಳ ಗಾಯಗೊಂಡ ಅಂಗಗಳನ್ನು ಸರಿಪಡಿಸಲು ಆವಶ್ಯಕವಾಗಿರುವ ಅವಿಭಿನ್ನವೋಲ್ಟೇಜುಗಳನ್ನು ಪತ್ತೆ ಹಚ್ಚಿದರು.

ಈ ಪ್ರಯೋಗಗಳಿಂದ ದೊರೆತ ಅನುಭವದ ಆಧಾರದ ಮೇಲೆ ವಿಜ್ಞಾನಿಗಳು ಅಂತರಿಕ್ಷ ಯಾತ್ರಿಗಳಿಗಾಗಿ ಇಂಥ ಕೆಲವು ವಿದ್ಯುತ್ ಕುಂಡಲಗಳನ್ನು ತಯಾರಿಸಿದರು. ಆ ಕುಂಡಲಗಳು ಅಂತರಿಕ್ಷ ಯಾತ್ರೆಯ ಸಂದರ್ಭದಲ್ಲಿ ಸುಣ್ಣದ ನ್ಯೂನತೆ

(ಉಂಟಾಗುವ) ಅವರ ಮೂಳೆಗಳು ಮೆದುವಾಗುವುದನ್ನು ತಪ್ಪಿಸುತ್ತಿರುತ್ತವೆ. ಈ ಕುಂಡಲಗಳನ್ನು ಧರಿಸದೆ ಅಂತರಿಕ್ಷ ಯಾತ್ರೆಗೆ ಹೋದ ಅಂತರಿಕ್ಷ ಯಾತ್ರಿಗಳ ಮೂಳೆಗಳು ಸಾಕಷ್ಟು ಮೆದುವೂ ಮತ್ತು ನಾಜೂಕೂ ಆಗಿಬಿಟ್ಟಿದ್ದವು ಮತ್ತು ಅವರನ್ನು ಸಾಧಾರಣ ಪರಿಸ್ಥಿತಿಗೆ ಮರಳಿಸಲು ಚಿಕಿತ್ಸಕರಿಗೆ ಸಾಕಷ್ಟು ಸಮಯ ಹಿಡಿಯಿತು.

ಭವಿಷ್ಯದಲ್ಲಿ ವಿದ್ಯುತ್ ಚಿಕಿತ್ಸಾ ವಿಧಿಯ ಮೂಲಕ, ಬಹುಬೇಗ ನಿರ್ಬಲರಾಗಿ ಬಿಡುವವರ ಚಿಕಿತ್ಸೆ ಸಂಭವವಾಗಬಹುದು ಎಂದು ವಿಶೇಷಜ್ಞರು ಭಾವಿಸುತ್ತಾರೆ. ತ್ವಚೆ, ಮೂಳೆಗಳು ಮತ್ತು ಬಾಹ್ಯಸ್ನಾಯುಗಳನ್ನೂ ಸಶಕ್ತ ಮತ್ತು ಪುನರ್ ಜೀವಿತಗೊಳಿಸುವುದರಲ್ಲಿಯೂ ಸಹ ಈ ಚಿಕಿತ್ಸಾ ವಿಧಿ ಬಹಳ ಸಹಾಯಕವಾಗುವುದು.

ಜಗದಂಬಾ ಜಂಪ್ರಯ್ಯ



ಬುದ್ಧಿವಾದ ಎಲ್ಲರಿಗೂ ದೊರೆಯುತ್ತದೆ. ಆದರೆ ಅದರಿಂದ ಪ್ರಯೋಜನ ಹೊಂದುವವರು ಬಹಳ ವಿರಳ.

—ಸೈರಸ್

ವಿನಾಶದ ಕಡೆಗೆ ಹೋಗುವ ಹೆಬ್ಬಾಗಲು ಯಾವಾಗಲೂ ವಿಶಾಲವಾದುದು. ಆ ಬಾಗಿಲಿಗೆ ಕರೆದೊಯ್ಯುವ ಪಥವೂ ಸಹ ಅಗಲವಾದುದು. ಆದ್ದರಿಂದ ಆ ಕಡೆಗೆ ಹೋಗುವವರ ಸಂಖ್ಯೆಯೇ ಜಾಸ್ತಿ.

—ನ್ಯೂ ಟೆಸ್ಟಮೆಂಟ್

ಹಸುಗಳ ರಾಣಿ: ಫ್ರೀಸಿಯನ್ ಹಸು

ವಿಲಾಯತಿ ಹಸುವನ್ನು ನೋಡಿದ್ದೀರಲ್ಲವೇ? ಕಪ್ಪು ಬಿಳಿದೊಗಲಿನ ದಷ್ಟ ಪುಷ್ಟ ದೇಹದ ಈ ಹಸು ವಿಶಿಷ್ಟವಾದದ್ದು. ಬಿಳಿಯ ಚರ್ಮದ ಮೇಲೆ ಖಂಡಗಳ ಚಿತ್ರ ಬರೆದಂತೆ ಕಪ್ಪುಭಾಗಗಳ ಈ ಹಸುವಿನ ತಳಿಯನ್ನು ಮೊದಲು ರೂಪಿಸಿದವರು ಉತ್ತರ ಹಾಲೆಂಡಿನ ಅನುಭವಸ್ಥ ರೈತರು. ಕ್ಷೀರಧಾರೆ ಹರಿಸುವ ಈ ಕಾಮಧೇನು ತಳಿ ಜಗತ್ತಿನಾದ್ಯಂತ ಅತ್ಯಂತ ಜನಪ್ರಿಯ ಹಾಗೂ ಬಹು ಸಂಖ್ಯಾತ.

ಸಾಧಾರಣ ಹಸುಗಳ ಗುಂಪಿನಲ್ಲಿ ಎಲ್ಲಿಯೇ ನಿಂತಿದ್ದರೂ ಈ ಹಸು ಎದ್ದು ಕಾಣುತ್ತದೆ.

ಹಾಲೆಂಡಿನ ರೈತ ಸ್ಟೆಲ್‌ವಾಗೆನ್ ಸಾಕಿದ್ದ ಇಂಥ ಒಂದು ಹಸುವಿನ ಕಥೆ ಕೇಳಿ. ಅವನ ಹಸುವಿನ ಹೆಸರು ಯಾಂಟ್ಜೆ. ಈ ಹಸುವಿನ ಹಾಲು ನೀಡುವ ಸಾಧನೆ ಒಂದು ವಿಕ್ರಮ. ಅದ್ಭುತ ಹಸು ಇದು. ಅದರ ಪುಷ್ಕಳ ಕೆಚ್ಚಲಿನಿಂದ ೧೦೦ ಟನ್ನಿಗೂ ಹೆಚ್ಚು ಹಾಲು ಹರಿದುಬಂದಿದೆ. ತನ್ನ ಜೀವಿತಾವಧಿಯಲ್ಲಿ ಲಕ್ಷಾಂತರ ಜನರಿಗೆ ಹಾಲೊದಗಿಸಿದ ಕೀರ್ತಿ ಈ ಕಾಮಧೇನುವಿನದು. ಜಗತ್ತಿನಲ್ಲಿ 'ಟನ್ ಹಾಲಿನ ಹಸು' ಎಂದೇ ಖ್ಯಾತಿ ಪಡೆದ ಯಾಂಟ್ಜೆ ಹಸು ೧೯೮೦ ಏಪ್ರಿಲ್‌ನಲ್ಲಿ ಸಾವನ್ನಪ್ಪಿದಾಗ ಅದರ ವಯಸ್ಸು ೧೭ ವರ್ಷ. ಹಸುವಿನ ೧೭ ವರ್ಷದ ಅವಧಿ ಮಾನವನ ೧೨೦ ವರ್ಷದ ಅವಧಿಗೆ ಸಮ.

ನೆದರ್‌ಲ್ಯಾಂಡಿನ ಉತ್ತರ ಭಾಗದ ಜನತೆಗೆ ಜಗತ್ ವ್ಯಾಪಕ ಖ್ಯಾತಿ ಬಂದದ್ದು ಈ ಕಪ್ಪು ಬಿಳಿದೊಗಲಿನ ಹಸುವಿನ ತಳಿಯಿಂದಲೇ. "ಜಗತ್ತಿನ ಅತ್ಯಂತ ಶ್ರೇಷ್ಠ ಹಸುಗಳು ಹಾಲೆಂಡ್ ದೇಶದವು. ಹಾಲೆಂಡಿನ ಅತ್ಯಂತ ಶ್ರೇಷ್ಠ ಹಸುಗಳು ಫ್ರೀಸ್‌ಲ್ಯಾಂಡ್ ಪ್ರಾಂತ್ಯದವು" ಎಂಬ ಅಭಿಪ್ರಾಯವೇ ಇದೆ.

ಸಾಮಾನ್ಯವಾಗಿ ಎಲ್ಲೆಡೆಯೂ ಫ್ರೀಸಿಯನ್ ಹಸು ಎಂದೇ ಕರೆಯಲಾಗಿರುವ ಈ ವಿಲಾಯಿತಿ ಹಸು ಇಂದು ಅತ್ಯಂತ ಜನಪ್ರಿಯ. ವಾಸ್ತವವಾಗಿ ಜಗತ್ತಿನಲ್ಲಿ ಹಾಲಿಗಾಗಿ ಸಾಕುವ ಹಸುಗಳಲ್ಲಿ ಅತ್ಯಂತ ಆದರ್ಶವಾದದ್ದು. ಅಮೆರಿಕ ಮತ್ತು ಕೆನಡಾ ದೇಶಗಳಲ್ಲಿ ಒಟ್ಟು ಹಾಲಿನ ಪೂರೈಕೆಯಲ್ಲಿ ಐದನೆ ನಾಲ್ಕು ಭಾಗ ಈ ಕಪ್ಪು–ಬಿಳಿದೊಗಲಿನ ಹಸುಗಳಿಂದಲೇ ಆಗುತ್ತಿದೆ. ಹಾಲೆಂಡಿನ ಮೂರನೆ

೧೯೮೨ ಸೆಪ್ಟೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ "ಫ್ರೀಸಿಯನ್ಸ್; ದಿ ಕ್ರೀಮ್ ಆಫ್ ಕೌಸ್" ಎಂಬ ಲೇಖನದ ಅನುವಾದ.

ಎರಡು ಭಾಗ, ಜರ್ಮನಿಯಲ್ಲಿ ಮೂರನೆ ಒಂದು ಭಾಗದಷ್ಟು ಕ್ಷೀರ ಪದಾರ್ಥಗಳ ಪೂರೈಕೆ ಈ ಹಸುಗಳದೇ. ಬ್ರಿಟನ್ ದೇಶದಲ್ಲಿ ಶೇಕಡ ೯೦ ಮಂದಿಗೆ ಫ್ರೀಸಿಯನ್ ಹಸುಗಳೇ ಹಾಲುಣಿಸುತ್ತಿವೆ.

ಎರಡನೆ ಮಹಾಯುದ್ಧವಾದ ನಂತರದ ಈಚೆಗೆ ಹಾಲೆಂಡ್ ಮತ್ತು ಬ್ರಿಟನ್ ದೇಶಗಳು ಜಗತ್ತಿನ ಎಲ್ಲೆಡೆಗೂ ಫ್ರೀಸಿಯನ್ ಹಸುಗಳನ್ನು ರಫ್ತು ಮಾಡತೊಡಗಿವೆ. ಈ ತಳಿಯ ಹಸುಗಳು ಎಲ್ಲ ಪರಿಸರಗಳಿಗೂ ಸುಲಭವಾಗಿ ಒಗ್ಗಿಕೊಂಡವು. ಭಾರತದಲ್ಲಿಯೂ ಆಸ್ಟ್ರೇಲಿಯ, ಡೆನ್ಮಾರ್ಕ್ ಹಾಗೂ ಬ್ರಿಟನ್ ದೇಶಗಳಿಂದ ಫ್ರೀಸಿಯನ್ ಹಸುಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಈ ಹಸುಗಳನ್ನು ದೇಶಿ ತಳಿಗಳೊಂದಿಗೆ ಕಸಿತಳಿ ಮಾಡಲಾಗಿದೆ. ಈ ಕಸಿ ತಳಿ ಹಸುಗಳನ್ನು ಕೇವಲ ಕ್ಷೀರೋತ್ಪಾದನೆಗೆ ಮಾತ್ರ ಸಾಕಲಾಗುತ್ತಿದೆ. ಈ ಕಸಿ ತಳಿ ಹಸುಗಳು ನಮ್ಮ ದೇಶದ ಸ್ಥಳೀಯ ಪರಿಸರಕ್ಕೆ ಒಗ್ಗಿಕೊಂಡು ಒಟ್ಟು ಸುಮಾರು ೨೫೦೦ ಲೀಟರ್‌ಗಳಷ್ಟು ಹಾಲನ್ನು ನೀಡುತ್ತವೆ. ಸಾಧಾರಣವಾದ ಭಾರತೀಯ ಹಸು ನೀಡುವ ಹಾಲಿನ ಪ್ರಮಾಣ ಸುಮಾರು ೧೭೦೦ ಲೀಟರ್‌ಗಳು ಮಾತ್ರ.

ಭಾರತದಲ್ಲಿ ಈ ಕಸಿ ತಳಿ ಪ್ರಯೋಗ ಬಹಳಷ್ಟು ಯಶ ಕಂಡಿದೆ. ಅದರಿಂದ ಕರ್ನಾಟಕ, ಪಂಜಾಬ್, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳಗಳಲ್ಲಿನ ಪಶುಸಂಗೋಪನ ಇಲಾಖೆಗಳು ಮುಖ್ಯ ತಳಿ ಕೇಂದ್ರಗಳನ್ನು ಸ್ಥಾಪಿಸಿ ಶುದ್ಧ ಫ್ರೀಸಿಯನ್ ತಳಿಗಳನ್ನು ರೂಪಿಸುತ್ತಿವೆ.

ಹಿಂದೆ ಹೇಳಿದ ಯಾಂಟ್ಜೆ ಹಸುವಿನ ಕಥೆಗೆ ಮತ್ತೆ ಬರೋಣ. ಈ ಹಸುವಿನ ದಿನಚರಿ ಬೆಳಗ್ಗೆ ೫ ಗಂಟೆಗೆ ಆರಂಭ. ೯೦ ನಿಮಿಷಗಳ ಕಾಲ ಹಾಲು ಕರೆಯುವಿಕೆ. ಮತ್ತೆ ಹಾಲು ಕರೆಯುವುದು ಸಂಜೆ ೪ ಗಂಟೆಗೆ. ಈ ನಡುವಿನ ಅವಧಿಯಲ್ಲಿ ಹಸುವಿನ ಬಾಯಿ ಮೂಲಕ ಹೊಟ್ಟೆಗೆ ಸಾಗುವ ಸರಕಿನ ಮೇಲೆ ಜೀವ-ರಾಸಾಯನಿಕ ಕ್ರಿಯೆ. ಹಸು ಎಂದರೆ ಹಾಲು ಕೊಡುವ ಯಂತ್ರ ಜೈವಿಕ ಸಾಧನ. ಹಸುವಿನ ಹೊಟ್ಟೆ ನಮ್ಮ ಹೊಟ್ಟೆಯಂತಲ್ಲ. ನಾಲ್ಕು ಚೀಲಗಳ ಹೊಟ್ಟೆ. ಅದಕ್ಕೆ ತದ್ವಿರುದ್ಧ ವಿಸ್ಮಯ ಇದರದು. ಹುಲ್ಲನ್ನು ಹಾಲಾಗಿ ಪರಿವರ್ತಿಸುವ ಪವಾಡ ಇಲ್ಲಿ ನಡೆಯುತ್ತದೆ.

ನಾಲ್ಕು ಹೊಟ್ಟೆಗಳ ಕಾರ್ಯವನ್ನು ನೋಡಿ. ಹಸು ಜಗಿದು ನುಂಗುವ ಹುಲ್ಲು, ತೌಡು, ಹಿಂಡಿ ಎಲ್ಲವೂ ಮೊದಲ ಹೊಟ್ಟೆಯನ್ನು ಸೇರಿದೊಡನೆ ಅವುಗಳ ಮೇಲೆ ಜಠರ ರಸದ ಕ್ರಿಯೆ ಆರಂಭವಾಗುತ್ತದೆ. ಎಲ್ಲವೂ ನುಣುಪಾಗು

ವವರೆಗೆ ಇನ್ನು ಗಟ್ಟಿಯಾಗಿ ಉಳಿದ ಶೇಷಗಳು ಎರಡು ಮತ್ತು ಮೂರನೆಯ ಹೊಟ್ಟೆಯಲ್ಲಿ ಮೆತ್ತಗಾಗುತ್ತವೆ ಹಾಗೂ ಗಟ್ಟಿಯಾಗಿ ಉಳಿದ ಜಗಿಯಬೇಕಾದ ಆಹಾರ ಶೇಷ ಮತ್ತೆ ಹಸುವಿನ ಬಾಯಿಗೆ ಬರುತ್ತದೆ. ಆದ್ದರಿಂದ ಹಸು ಸದಾ ಮೆಲುಕು ಹಾಕುತ್ತಿರುತ್ತದೆ. ಮೂರನೆಯ ಹೊಟ್ಟೆಯಿಂದ ಆಹಾರ ವಿಶೇಷ ನಾಳವೊಂದರ ಮೂಲಕ ನಾಲ್ಕನೆಯ ಹೊಟ್ಟೆಗೆ ಹೋಗುತ್ತದೆ. ಈ ನಾಲ್ಕನೆಯ ಹೊಟ್ಟೆಯ ಕೆಲಸ ನಮ್ಮ ಜಠರದ ಕೆಲಸದಂತೆ. ಆಹಾರದ ಮೇಲೆ ಎಂಜೈಮು ರಸಗಳನ್ನು ಸುರಿಸಿ ಅವನ್ನು ಗ್ಲುಕೋಸಾಗಿ ಪರಿವರ್ತಿಸುತ್ತದೆ. ಈ ಗ್ಲುಕೋಸನ್ನು ರಕ್ತಪ್ರವಾಹ ಕೊಂಡುಹೋಗಿ ಪಿತ್ತ ಜನಕಾಂಗದಲ್ಲಿ ಬಿಡುತ್ತದೆ. ಈ ಪಿತ್ತ ಜನಕಾಂಗ ಶಕ್ತಿಯನ್ನು ಶೇಖರಿಸಿಟ್ಟು ಹಸುವಿನ ದೇಹಕ್ಕೆ ಬೇಕಾದಷ್ಟು ಶಕ್ತಿಯನ್ನು ಪೂರೈಸುತ್ತದೆ.

ಕರು ಹುಟ್ಟಿದ ಮೇಲೆ ಸುಮಾರು ಆರು ತಿಂಗಳ ಕಾಲ ತಾಯಿ ಹಾಲನ್ನು ಉಣ್ಣುತ್ತದೆ. ಆದ್ದರಿಂದ ಪಿತ್ತಜನಕಾಂಗ ಕೊಬ್ಬು, ಗ್ಲುಕೋಸ್ ಮತ್ತು ಪ್ರೋಟೀನ್‌ಗಳನ್ನು ಬಿಡುಗಡೆ ಮಾಡುತ್ತದೆ. ರಕ್ತ ಇವುಗಳನ್ನು ಹೊತ್ತೊಯ್ದು ಹಸುವಿನ ಕೆಚ್ಚಲಿನಲ್ಲಿರುವ ಸ್ಪಂಜಿನಂಥ ಕೋಶ ಸಮುದಾಯದಲ್ಲಿ ಬಿಡುತ್ತದೆ. ಇಲ್ಲಿ ಶಕ್ತಿಯ ಕಚ್ಚಾ ಮೂಲವಸ್ತುಗಳು ನೀರಿನೊಂದಿಗೆ ಬೆರೆತು ಹಾಲನ್ನು ಉತ್ಪಾದಿಸುತ್ತವೆ. ಕರು ಕೆಚ್ಚಲಿಗೆ ಬಾಯಿ ಹಾಕದಿದ್ದರೂ ಸುಮಾರು ಹತ್ತು ತಿಂಗಳವರೆಗೆ ಹಾಲಿನ ಉತ್ಪಾದನೆ ನಡೆಯುತ್ತಿರುತ್ತದೆ. ನಂತರ ಸ್ವಲ್ಪಕಾಲದಲ್ಲೇ ಹಸು ಇನ್ನೊಂದು ಕರುವಿಗೆ ಜನ್ಮ ನೀಡಿದರೆ ಮತ್ತೆ ಈ ಪ್ರಕ್ರಿಯೆ ಪುನರಾರಂಭವಾಗುತ್ತದೆ.

ಇಂಗ್ಲೆಂಡಿನಲ್ಲಿರುವ ಒಂದು ಕಪ್ಪು ಬಿಳಿ ತಳಿಯಾದ 'ವಿಂಟ್ ಪೆಲ್ ಈವಾ ೨' ಎಂಬ ಹಸುವಿನ ಅದ್ಭುತ ಸಾಧನೆ ಜಾಗತಿಕ ವಿಕ್ರಮ. ಈ ಹಸು ದಿನಕ್ಕೆ ೩೭ ಲೀಟರ್‌ಗಳಂತೆ ೧೬೪ ಟನ್ ಹಾಲನ್ನು ಉತ್ಪಾದಿಸಿದೆ.

ಪಾಶ್ಚಾತ್ಯ ದೇಶಗಳಲ್ಲಿ ಹಸುವಿನ ತಳಿ ಉತ್ತಮಗೊಳ್ಳುವುದರ ಜೊತೆ ಜೊತೆಗೆ ಕ್ಷೀರ ಉದ್ಯಮದ ಎಲ್ಲ ಕೆಲಸಗಳೂ ವೈಜ್ಞಾನಿಕವಾಗಿ ಉತ್ತಮಗೊಂಡಿವೆ.

ಇಪ್ಪತ್ತು ವರ್ಷಗಳ ಕೆಳಗೆ, ಇಂಗ್ಲೆಂಡಿನಲ್ಲಿ ಹಸುವಿನ ಒಡೆಯ ಇಬ್ಬರು ಆಳುಗಳ ಸಹಿತ ತಾನೂ ಕುಳಿತು ೪೦ ಹಸುಗಳ ಹಾಲನ್ನು ಕೈಗಳ ಸಹಾಯದಿಂದಲೇ ಕರೆದು ವರ್ಷ ೨೦೦ ಟನ್ ಹಾಲನ್ನು ಉತ್ಪಾದಿಸುತ್ತಿದ್ದ. ಇಂದು ಅಲ್ಲಿ ಹಸುವಿನ ಒಡೆಯ ತಾನೊಬ್ಬನೆ ೬೫ ಹಸುಗಳನ್ನು ಕರೆದು ೪೫೦ ಟನ್

ಹಾಲನ್ನು ಉತ್ಪಾದಿಸುತ್ತಿದ್ದಾನೆ. ಕರೆಯುವ ಯಂತ್ರಗಳು ಅವನಿಗೆ ಸಹಕರಿಸುತ್ತಿವೆ.

ಇಂದು ತನ್ನ ದೊಡ್ಡ ಕೊಟ್ಟಿಗೆಯನ್ನು ಸ್ವಚ್ಛ ಮಾಡಲು ಆತ ಗಂಟೆಗಟ್ಟಲೆ ಪೊರಕೆ ಹಿಡಿಯಬೇಕಿಲ್ಲ. ಸುಮ್ಮನೆ ಒಂದು ಗುಂಡಿ ಒತ್ತಿದರೆ ಸಾಕು. ಸರಪಳಿಗೆ ಜೋಡಿಸಿದ ಮರದ ಹಲ್ಲೊಂದು ನಿಧಾನವಾಗಿ ನೆಲದುದ್ದಕ್ಕೂ ಸಾಗಿ ಸಗಣಿ ಕಸ ಎಲ್ಲವನ್ನು ಮೂಲೆಗೆ ತಳ್ಳುತ್ತದೆ.

ಹಿಂದೆ ಹಸುಗಳಿಗೆ ಹಸಿಹುಲ್ಲನ್ನು ಕುಡ್ಲುಗಳಿಂದ ತಂದು ಬಂಡಿಗಳಿಗೆ ತುಂಬಿ ಹೊಡೆದುಕೊಂಡು ಬರಬೇಕಿತ್ತು. ದಿನಕ್ಕೆ ಎರಡು ಗಂಟೆ ಆ ಕೆಲಸವೇ ಆಗುತ್ತಿತ್ತು.

ಇಂದು ಹೊಸ ಟ್ರ್ಯಾಕ್ಟರಿನ ಸಹಾಯದಿಂದ ಆರೇ ನಿಮಿಷಗಳಲ್ಲಿ ಒಂದು ಟನ್ ಹುಲ್ಲನ್ನು ಕತ್ತರಿಸಿಕೊಂಡು ತರಬಹುದು.

ಹಸುಗಳ ಮೇಲೆ ಕೃತಕ ವೀರ್ಯ ಪ್ರಯೋಗದ ಮೂಲಕ ಗರ್ಭ ಕಟ್ಟಿಸುವ ತಂತ್ರವನ್ನು ಕಂಡುಹಿಡಿದ ಮೇಲೆ ತಳಿ ವ್ಯವಹಾರದಲ್ಲಿ ಕ್ರಾಂತಿಯೇ ಆಯಿತೆನ್ನಬಹುದು. ಇದರಿಂದಾಗಿ ಒಂದು ಹೋರಿಯಿಂದ ಇಡೀ ಹಸು ಸಮುದಾಯಕ್ಕೆ ಕೆಡುಕುಂಟಾಗಬಹುದಾದ ಪರಿಸ್ಥಿತಿ ತಗ್ಗಿತು.

ಭಾರತದಲ್ಲಿ ಈ ರೀತಿ ಕೃತಕ ವೀರ್ಯ ಪ್ರಯೋಗ ತಂತ್ರ ೧೯೪೪ರಲ್ಲಿ ಆರಂಭವಾಯಿತು. ಇದರಿಂದ ಕ್ಷೀರೋತ್ಪಾದ ತಳಿಗಳಲ್ಲಿ ಸಾಕಷ್ಟು ಉತ್ತಮಿಕೆ ಕಂಡು ಬಂದಿದೆ. ಭಾರತಸರ್ಕಾರ, ಡೆನ್ಮಾರ್ಕ್ ಸರ್ಕಾರದ ಸಹಯೋಗದಿಂದ, ಕರ್ನಾಟಕದಲ್ಲಿನ ಹೆಸರಘಟ್ಟದಲ್ಲಿ ೧೯೭೦ರಲ್ಲಿ ಕೇಂದ್ರ ವೀರ್ಯ ಬ್ಯಾಂಕನ್ನು ಸ್ಥಾಪಿಸಿದೆ.

ಕಪ್ಪು ಬಿಳಿ ತೊಗಲಿನ ತಳಿ ಹಸುಗಳು ಜಗತ್ತಿನಾದ್ಯಂತ ಒಂದೇ ಆದರೂ ಆಯಾ ಪರಿಸರಗಳಿಗೆ ತಕ್ಕಂತೆ ಸ್ವಲ್ಪ ಸ್ವಲ್ಪ ಭಿನ್ನವಾಗಿರುತ್ತವೆ.

ಇಂಥ ಕಾಮಧೇನು ಹಸುಗಳಿಂದ ಇಂದು ಹಾಲಿನ ಹೊಳೆ ಹರಿಯುತ್ತಿದೆ. ಬೆಣ್ಣೆ ಬೆಟ್ಟ ರೂಪುಗೊಳ್ಳುತ್ತಿದೆ.

ಸಂದೇಹವೇ ಇಲ್ಲ ಫ್ರೀಸಿಯನ್ ಹಸು ಎಂದರೆ ಹಸುಗಳ ರಾಣಿ.

ಗಾಯಿತ್ರಿ

"ಮನ ಏವ ಮನುಷ್ಯಾಣಾಂ, ಕಾರಣಂ ಬಂಧ ಮೋಕ್ಷಯೋಃ" ಮಾನವರ ಬಂಧ ಮೋಕ್ಷಗಳಿಗೆ ಅವರ ಮನವೇ **ಕಾರಣ.**

—ಶ್ರುತಿ

ಕ್ರಿಕೇಟ್‌ನ ವಿಶ್ವದಾಖಲೆಗಳು

ವಿಶ್ವದ ಮೊದಲ ಟೆಸ್ಟ್-ಮ್ಯಾಚ್ ೧೮೭೭ರಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ಗಳ ನಡುವೆ ನಡೆದಿತ್ತು. ಆದಾದ ಮೇಲೆ ಈ ೧೦೦ ವರ್ಷಗಳಲ್ಲಿ ವಿಭಿನ್ನ ದೇಶಗಳ ಕ್ರೀಡಾಪಟುಗಳು ವಿಭಿನ್ನ ರೀತಿಯಲ್ಲಿ ಕೀರ್ತಿಯನ್ನು ಗಳಿಸಿದ್ದಾರೆ.

೧. ವೈಯಕ್ತಿಕವಾಗಿ ಅತಿ ಹೆಚ್ಚು ರನ್ ಮಾಡಿದ ಶ್ರೇಯಸ್ಸು ವೆಸ್ಟ್ ಇಂಡೀಸ್‌ನ ಗ್ಯಾರಿ ಸೋಬರ್ಸ್‌ಗೆ ಲಭಿಸಿದೆ. ಅವರು ಈ ಶ್ರೇಯಸ್ಸನ್ನು ೧೯೫೭-೫೮ರಲ್ಲಿ ಕಿಂಗ್‌ಸ್ಟನ್‌ನಲ್ಲಿ ಪಾಕಿಸ್ಥಾನದ ವಿರುದ್ಧವಾಗಿ ಆಡಿದ ೩ನೇ ಟೆಸ್ಟ್‌ನಲ್ಲಿ ಔಟಾಗದೆ ೩೬೫ ರನ್‌ಗಳಿಸಿದ್ದರು.

೨. ಅತಿ ಹೆಚ್ಚು ಬಾರಿ ೨೦೦ಕ್ಕಿಂತ ಹೆಚ್ಚು ರನ್ ಮಾಡಿದವರು, ಡಾನ್ ಬ್ರಾಡ್‌ಮನ್—ಒಟ್ಟು ೧೨ ಬಾರಿ ಅವರು ಟೆಸ್ಟ್‌ಗಳಲ್ಲಿ ೩೦೦ ಕ್ಕಿಂತ ಹೆಚ್ಚು ರನ್‌ಗಳನ್ನು ೨ ಬಾರಿ ಮಾಡಿದ್ದಾರೆ. ಇದೊಂದು ಜಾಗತಿಕ ದಾಖಲೆ.

೩. ಅತಿ ಹೆಚ್ಚು ಶತಕ ಗಳಿಸಿದವರಲ್ಲಿ ಬ್ರಾಡ್‌ಮನ್‌ರವರೇ ಮೊದಲಿಗರು. ಅವರು ಒಟ್ಟು ೨೯ ಶತಕಗಳನ್ನು ಗಳಿಸಿದ್ದಾರೆ. ಅವರ ನಂತರ ಸೋಬರ್ಸ್ (೨೬ ಶತಕ) ದ್ವಿತೀಯ ಸ್ಥಾನ ಪಡೆದಿದ್ದಾರೆ.

೪. ಒಂದೇ ಟೆಸ್ಟ್‌ನ ಎರಡೂ ಇನ್ನಿಂಗ್ಸ್‌ಗಳಲ್ಲಿ ಅತಿ ಹೆಚ್ಚು ರನ್ ಮಾಡಿದವರಲ್ಲಿ ಆಸ್ಟ್ರೇಲಿಯಾದ ಗ್ರೆಗ್ ಚಾಪೆಲ್ ಮೊದಲಿಗರು. ಅವರು ೧೯೭೩-೭೪ರ ಸರಣಿಯಲ್ಲಿ ಮೊದಲ ಟೆಸ್ಟ್‌ನಲ್ಲಿ ನ್ಯೂಜಿಲೆಂಡಿನ ವಿರುದ್ಧ ಎರಡೂ ಇನ್ನಿಂಗ್ಸ್‌ಗಳಲ್ಲಿ ಒಟ್ಟು ೩೮೦ ರನ್‌ಮಾಡಿ ಈ ರೆಕಾರ್ಡ್ ಸ್ಥಾಪಿಸಿದರು. ಈ ಟೆಸ್ಟ್ ವೆಲಿಂಗ್ಟನ್‌ನಲ್ಲಿ ಆಡಲಾಗಿತ್ತು.

೫. ಒಂದೇ ಟೆಸ್ಟ್ ಸರಣಿಯಲ್ಲಿ ಅತಿ ಹೆಚ್ಚು ರನ್ ಬಾಚಿಕೊಂಡ ಶ್ರೇಯಸ್ಸು ಆಸ್ಟ್ರೇಲಿಯಾದ ಡಾನ್ ಬ್ರಾಡ್‌ಮನ್‌ರಿಗೇ ಸೇರುತ್ತದೆ. ಅವರು ೧೯೩೦ ರಲ್ಲಿ ಇಂಗ್ಲೆಂಡ್ ವಿರುದ್ಧ ಆಡಿದ ಸರಣಿಯಲ್ಲಿ ಒಟ್ಟು ೯೭೪ ರನ್ ಮಾಡಿದ್ದರು. ಇದು ಇಂದಿಗೂ ಅತಿ ಹೆಚ್ಚು ರನ್‌ಗಳ ದಾಖಲೆಯಾಗಿದೆ.

೬. ಕ್ರಿಕೇಟ್ ಜೀವನದಲ್ಲಿ ಅತಿ ಹೆಚ್ಚು ರನ್ ಮಾಡಿದವರು ಗ್ಯಾರಿ ಸೋಬರ್ಸ್—ಅವರು ೯೩ ಟೆಸ್ಟ್‌ಗಳಲ್ಲಿ ಒಟ್ಟು ೮,೦೩೨ ರನ್‌ಗಳಿಸಿ ವಿಶ್ವ ದಾಖಲೆ ಸ್ಥಾಪಿಸಿದ್ದಾರೆ.

೧೯೭೭ರ ನವನೀತದಲ್ಲಿ ಪ್ರಕಟವಾದ ಶಿವೇಂದ್ರ ಗುಪ್ತರವರ 'ಟೆಸ್ಟ್ ಕ್ರಿಕೇಟ್ ಕೆ ಸೌ ಸಾಲ್ ಅಂಕಡೋಂ ಕಿಜಬಾನಿ' ಲೇಖನದ ಕನ್ನಡಾನುವಾದ.

೭. ಕ್ರಿಕೇಟ್ ಇತಿಹಾಸದಲ್ಲಿ ಕೇವಲ ೧೩ ಬ್ಯಾಟ್ಸ್‌ಮನ್‌ಗಳು ತಮ್ಮ ಟೆಸ್ಟ್ ಜೀವನದಲ್ಲಿ ೫,೦೦೦ ಕ್ಕಿಂತ ಹೆಚ್ಚು ರನ್ ಮಾಡಿದ್ದಾರೆ. ಅವರುಗಳು– ಇಂಗ್ಲೆಂಡಿನ ಎಮ್.ಸಿ. ಕೌಡ್ರೆ, ಡಬ್ಲ್ಯೂ ಆರ್. ಹೈಮಂಡ್, ಲೆನ್‌ಹಟನ್, ಕೆನ್‌ಬ್ಯಾರಿಂಗ್ಟನ್, ಡೇನಿಸ್‌ಕ್ಯಾಂಪ್ಟನ್, ಜೆ. ಬಿ. ಹಾಬ್ಸ್ ಮತ್ತು ಜೆ.ಹೆಚ್. ಎಡ್ರಿಚ್, ಆಸ್ಟ್ರೇಲಿಯಾದ ಡಾನ್ ಬ್ರಾಡ್‌ಮನ್, ಆರ್.ಎನ್. ಹಾರ್ವೆ, ಇಯಾನ್ ಚಾಪೆಲ್ ಮತ್ತು ಬಿಲ್‌ಲಾರೀ ಹಾಗೂ ವೆಸ್ಟ್‌ಇಂಡೀಸಿನ ಗ್ಯಾರಿ ಸೋಬರ್ಸ್ ಮತ್ತು ರೋಹನ್ ಕನ್ಹಾಯ್.

[ಭಾರತ, ಪಾಕಿಸ್ಥಾನ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾದಿಂದ ಇದುವರೆಗೂ ಯಾವ ಕ್ರಿಕೆಟ್‌ಪಟು ಟೆಸ್ಟ್‌ಗಳಲ್ಲಿ ೭,೦೦೦ ರನ್‌ಗಳನ್ನು ಪೂರ್ಣ ಗೊಳಿಸಿಲ್ಲ.]

೮. ಒಂದೇ ಸಮನೆ ಅತಿಹೆಚ್ಚು ಶತಕ ಗಳಿಸಿದ ಶ್ರೇಯಸ್ಸು ವೆಸ್ಟ್ ಇಂಡೀಸ್‌ನ ಈ. ಡಿ. ವೀಕ್ಸ್‌ರವರಿಗೆ ದೊರೆತಿದೆ. ೧೯೪೭-೪೮ ರಲ್ಲಿ ಕಿಂಗ್‌ಸ್ಟನ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಆಡಿದ ನಾಲ್ಕನೇ ಟೆಸ್ಟ್‌ನಿಂದ ೧೯೪೮-೪೯ ರಲ್ಲಿ ಭಾರತದ ವಿರುದ್ಧ ಮೂರನೇ ಟೆಸ್ಟ್‌ನವರೆಗೆ ಒಂದೇ ಸಮನೆ ಐದು ಶತಕಗಳು ಸಾಧಿಸಿದ ಯಶಸ್ಸು ಇಂದಿಗೂ ಮುರಿಯದ ವಿಶ್ವದಾಖಲೆಯಾಗಿದೆ.

೯. ಬ್ರಾಡ್‌ಮನ್ ಮೂರು ಟೆಸ್ಟ್ ಸರಣಿಗಳಲ್ಲಿ (೧೯೩೦, ೧೯೩೪ ಮತ್ತು ೧೯೩೬-೩೭) ಪ್ರತಿಯೊಂದರಲ್ಲಿ ದ್ವಿಶತಕ ಗಳಿಸಿದ ಅದ್ಭುತ ದಾಖಲೆ ಯನ್ನು ಬಹುಶಃ ಎಂದಿಗೂ ಮುರಿಯಲು ಸಾಧ್ಯವಿಲ್ಲ.

೧೦. ಒಂದೇ ಕ್ಯಾಲೆಂಡರ್ ವರ್ಷದಲ್ಲಿ ಅತಿ ಹೆಚ್ಚು ರನ್ ಜೋಡಿಸಿದ ಗೌರವಕ್ಕೆ ಪಾತ್ರರಾದವರು ವೆಸ್ಟ್ ಇಂಡೀಸ್‌ನ ವಿವಿಯನ್ ರಿಚರ್ಡ್ಸ್. ಅವರು ೧೯೭೬ರಲ್ಲಿ ಜನವರಿಯಿಂದ ೧೭ ಆಗಸ್ಟ್ ತನಕ ೧೧ ಟೆಸ್ಟ್‌ಗಳಲ್ಲಿ ೧,೭೧೦ ರನ್ ಗಳಿಸಿ ದಾಖಲೆ ಸ್ಥಾಪಿಸಿದ್ದಾರೆ.

೧೧. ಒಂದೇ ಟೆಸ್ಟ್‌ನ ಎರಡೂ ಇನ್ನಿಂಗ್ಸ್‌ಗಳಲ್ಲಿ ಶತಕಗಳಿಸಿ ದಾಖಲೆ ಸ್ಥಾಪಿಸಿರುವವರು ಇಂಗ್ಲೆಂಡಿನ ಎಚ್. ಸಟ್‌ಕ್ಲಿಫ್, ಆಸ್ಟ್ರೇಲಿಯಾದ ಗ್ರೆಗ್ ಚಾಪೆಲ್ ಮತ್ತು ವೆಸ್ಟ್ ಇಂಡೀಸ್‌ನ ಜಿ. ಎ. ಹೆಡ್‌ಲೀ ಮತ್ತು ಸಿ. ಎಲ್. ವಾಲ್ಕಾಟ್. ವಾಲ್ಕಾಟ್ ಈ ಚಮತ್ಕಾರವನ್ನು ಒಂದೇ ಸರಣಿಯಲ್ಲಿ ಮಾಡಿ ತೋರಿಸಿದರು.

೧೨. ಒಂದೇ ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ಬೌಂಡರಿ ಹೊಡೆದವರು ಇಂಗ್ಲೆಂಡಿನ ಜೆ.ಹೆಚ್. ಎಡ್ರಿಚ್. ಅವರು ೧೯೬೫ ರಲ್ಲಿ ನ್ಯೂಜಿಲೆಂಡ್ ವಿರುದ್ಧ

ತೃತೀಯ ಟೆಸ್ಟ್‌ನಲ್ಲಿ ಔಟಾಗದೆ ೩೧೦ ರನ್ ಗಳಿಸಿದ್ದರು. ಆದರಲ್ಲಿ ೫೨ ಬೌಂಡರಿಗಳು ಸೇರಿದ್ದವು.

೧೩. ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿ ದಾಖಲೆ ಸ್ಥಾಪಿಸಿದವರು—ದಕ್ಷಿಣ ಆಫ್ರಿಕಾದ ಜೆ. ಎಚ್. ಸಿಂಕ್ಲೇಯರ್ ಮತ್ತು ಇಂಗ್ಲೆಂಡಿನ ಡಬ್ಲ್ಯು. ಆರ್. ಹ್ಯಾಮಂಡ್. ಸಿಂಕ್ಲೇಯರ್ ಕೇಪ್‌ಟೌನ್‌ನಲ್ಲಿ ೧೯೦೨-೦೩ ರ ಸರಣಿಯಲ್ಲಿ ಆಸ್ಟ್ರೇಲಿಯಾದ ವಿರುದ್ಧ ಆಡಿದ ಮೂರನೇ ಟೆಸ್ಟ್‌ನಲ್ಲಿ ೧೦೪ ರನ್ ಮಾಡಿದರು. ಅದರಲ್ಲಿ ೧೦ ಸಿಕ್ಸರ್‌ಗಳೂ ಸೇರಿದ್ದವು. ಹ್ಯಾಮಂಡ್ ಆಕ್ಲೆಂಡ್‌ನಲ್ಲಿ ೧೯೩೨-೩೩ರ ಸರಣಿಯ ಎರಡನೇ ಟೆಸ್ಟ್‌ನಲ್ಲಿ ೩೩೬ ರನ್ ಗಳಿಸಿದ್ದರು. ಅದರಲ್ಲಿ ೧೦ ಸಿಕ್ಸರ್‌ಗಳಿದ್ದವು.

೧೪. ಅತಿ ವೇಗವ ಒಂದು ಸಹಸ್ರ ರನ್ ಪೂರ್ಣಗೊಳಿಸಿದವರು ಡಾನ್ ಬ್ರಾಡ್‌ಮನ್. ತಮ್ಮ ಮೊದಲ ಏಳು ಟೆಸ್ಟ್‌ಗಳ ೧೩ ಇನ್ನಿಂಗ್ಸ್‌ಗಳಲ್ಲಿಯೇ ಅವರು ಇದನ್ನು ಗಳಿಸಿದ್ದರು.

೧೫. ೧೯೨೧-೨೨ ರ ಸರಣಿಯಲ್ಲಿ ದಕ್ಷಿಣ ಆಫ್ರಿಕಾದ ವಿರುದ್ಧ ಜೋಹಾನ್ಸ್‌ಬರ್ಗ್‌ನಲ್ಲಾಡಿದ ಎರಡನೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾದ ಜೆ.ಎಂ. ಗ್ರೆಗರಿಯವರು ಎಪ್ಪತ್ತು ನಿಮಿಷದಲ್ಲಿ ಶತಕ ಮುಗಿಸಿ ಅತಿ ಕಡಿಮೆ ಅವಧಿಯಲ್ಲಿ ಶತಕ ಬಾರಿಸಿದ ಕೀರ್ತಿಯನ್ನು ಗಳಿಸಿದರು.

೧೬. ಶತಕ ಮುಗಿಸುವುದರಲ್ಲಿ ಅತಿ ಹೆಚ್ಚು ವೇಳೆಯನ್ನು ತೆಗೆದುಕೊಂಡ ಕೀರ್ತಿ ದಕ್ಷಿಣ ಆಫ್ರಿಕಾದ ಡಿ. ಜೆ. ಮ್ಯಾಕ್‌ಗ್ಲೂ ರವರಿಗೆ ಸಲ್ಲುತ್ತದೆ. ೧೯೫೭-೫೮ ರಲ್ಲಿ ಆಸ್ಟ್ರೇಲಿಯಾದ ವಿರುದ್ಧ ಡರ್ಬನ್‌ನಲ್ಲಾಡಿದ ಮೂರನೇ ಟೆಸ್ಟ್‌ನಲ್ಲಿ ಶತಕ ಗಳಿಸಲು ಅವರಿಗೆ ೫೪೫ ನಿಮಿಷಗಳು ಹಿಡಿದವು.

೧೭. ಟೆಸ್ಟ್‌ನ ಮೊದಲ ದಿನ ಲಂಚ್ ವಿರಾಮಕ್ಕೆ ಮೊದಲು ಸೆಂಚುರಿ ಪೂರ್ಣಗೊಳಿಸಿದ ಶ್ರೇಯಸ್ಸು ಜಗತ್ತಿನಲ್ಲಿ ಕೇವಲ ಮೂರು ಬ್ಯಾಟ್ಸ್‌ಮನ್‌ಗಳಿಗೆ ದೊರೆತಿದೆ: ವಿ. ಟಿ. ಟ್ರಂಪರ್, ಸಿ. ಜಿ. ಮೆಕಾರ್ಟ್ನಿ ಮತ್ತು ಡಾನ್ ಬ್ರಾಡ್‌ಮನ್—ಈ ಮೂವರೂ ಆಸ್ಟ್ರೇಲಿಯಾದವರು.

೧೮. ಮೊದಲ ದಿನವನ್ನುಳಿದು ಇತರೆ ದಿನಗಳಲ್ಲಿ, ಲಂಚ್‌ಗಿಂತ ಮೊದಲು ಸೆಂಚುರಿ ಗಳಿಸಿದವರಲ್ಲಿ ಇವರು ಬರುತ್ತಾರೆ—ಇಂಗ್ಲೆಂಡಿನ ಕೆ. ಎಸ್. ರಣಜೀತ ಸಿಂಹಜಿ, ಸಿ. ಪಿ. ಮೀಡ್, ಜೆ. ಬಿ. ಹಾಬ್ಸ್ ಮತ್ತು ಡಬ್ಲ್ಯು. ಆರ್. ಹ್ಯಾಮಂಡ್; ಆಸ್ಟ್ರೇಲಿಯಾದ ಸಿ. ಹಿಲ್ ಮತ್ತು ಎಸ್. ಜೆ. ಮ್ಯಾಕೆಬ್ ಹಾಗೂ ದಕ್ಷಿಣ ಆಫ್ರಿಕಾದ ಎಚ್. ಜೆ. ಒವೆನ್‌ಸ್ಮಿಥ್.

೧೯. ವೆಸ್ಟ್ ಇಂಡೀಸ್‌ನ ಎಲ್. ಆರ್. ಗಿಬ್ಸ್‌ರು ಟೆಸ್ಟ್‌ಗಳಲ್ಲಿ ೩೯ ಬಾರಿ ನಾಟೌಟ್ ಆಗಿದ್ದು ಇದೊಂದು ದಾಖಲೆಯಾಗಿದೆ.

೨೦. ತಮ್ಮ ಜೀವನದ ಮೊದಲ ಟೆಸ್ಟ್‌ನಲ್ಲೇ ಶತಕ ಗಳಿಸಿದವರಲ್ಲಿ ವೆಸ್ಟ್‌ಇಂಡೀಸ್‌ನ ಎಲ್. ಜಿ. ರೋವ್‌ರವರು ಎರಡೂ ಇನ್ನಿಂಗ್ಸ್‌ಗಳಲ್ಲಿ ಸೆಂಚುರಿಗಳಿಸಿ ದಾಖಲೆ ಸ್ಥಾಪಿಸಿದ್ದಾರೆ. ವಾಸ್ತವವಾಗಿ, ರೋವ್ ಮೊದಲ ಇನ್ನಿಂಗ್ಸ್‌ನಲ್ಲಿ ದ್ವಿಶತಕ (೨೧೪) ಮತ್ತು ಎರಡನೇ ಇನ್ನಿಂಗ್ಸ್‌ನಲ್ಲಿ ಔಟಾಗದೇ ಶತಕ (೧೦೦) ಗಳಿಸಿದ್ದರು. ಕಿಂಗ್‌ಸ್ಟನ್‌ನಲ್ಲಿ ನ್ಯೂಜಿಲೆಂಡಿನ ವಿರುದ್ಧ ೧೯೭೧–೭೨ರ ಸರಣಿಯ ಮೊದಲ ಟೆಸ್ಟ್‌ನಲ್ಲಿ ಅವರು ಇದನ್ನು ಸಾಧಿಸಿದ್ದರು.

೨೧. ತಮ್ಮ ಟೆಸ್ಟ್ ಜೀವನದ ಮೊದಲ ಮತ್ತು ಕೊನೆಯ ಟೆಸ್ಟ್ ಮ್ಯಾಚ್‌ಗಳಲ್ಲಿ ಸೆಂಚುರಿ ಮಾಡಿದ ಶ್ರೇಯಸ್ಸು ಮೂವರು ಬ್ಯಾಟ್ಸ್‌ಮನ್‌ಗಳಿಗೆ ದೊರೆತಿದೆ—ಆಸ್ಟ್ರೇಲಿಯಾದ ಆರ್.ಎ.ಡಫ್ ಮತ್ತು ಡಬ್ಲ್ಯೂ. ಹೆಚ್. ಪೋನ್ಸ್‌ಫೋರ್ಡ್ ಹಾಗೂ ವೆಸ್ಟ್‌ಇಂಡೀಸ್‌ನ ಎ.ಜಿ. ಗ್ರೆಂಟಿಯೂಮಿ.

೨೨. ಅತಿ ಚಿಕ್ಕವಯಸ್ಸಿನಲ್ಲಿ ಸೆಂಚುರಿ ಮಾಡಿದವರು ಪಾಕಿಸ್ತಾನದ ಮುಷ್ತಾಕ್ ಮಹಮ್ಮದ್. ೧೯೬೦–೬೧ರ ಸರಣಿಯ ಐದನೇ ಟೆಸ್ಟ್‌ನಲ್ಲಿ ದೆಹಲಿಯಲ್ಲಿ ೧೦೧ ರನ್ ಮಾಡಿದಾಗ ಅವರಿಗೆ ಕೇವಲ ಹದಿನೇಳು ವರ್ಷ, ಎಪ್ಪತ್ತೆಂಟು ದಿನಗಳಾಗಿದ್ದುವು.

೨೩. ಇನ್ನಿಂಗ್ಸ್ ಪ್ರಾರಂಭಮಾಡಿದ ಮೇಲೆ ಕೊನೆಯವರೆಗೂ ಔಟಾಗದೆ ದಾಖಲೆ ಸ್ಥಾಪಿಸಿದವರು ಇಂಗ್ಲೆಂಡಿನ ಲೆನ್ ಹಟನ್, ಆಸ್ಟ್ರೇಲಿಯಾದ ಡಬ್ಲ್ಯೂ. ಎಂ. ವುಡ್‌ಫುಲ್ ಮತ್ತು ಬಿಲ್ ಲಾರೀ ಹಾಗೂ ನ್ಯೂಜಿಲೆಂಡಿನ ಗ್ಲೆನ್ ಟರ್ನರ್. ಇವರಲ್ಲಿ ಪ್ರತಿಯೊಬ್ಬರೂ ಇನ್ನಿಂಗ್ಸ್ ಪ್ರಾರಂಭಮಾಡಿದ ಮೇಲೆ ಕೊನೆತನಕವೂ ಔಟಾಗದ ಚಮತ್ಕಾರವನ್ನು ಎರಡೆರಡು ಬಾರಿ ಮಾಡಿ ತೋರಿಸಿದರು. ಇವರಲ್ಲಿ ಗ್ಲೆನ್‌ಟರ್ನರ್ ಎರಡನೇ ನಂಬರ್ (ನಂ. ೨ ಬ್ಯಾಟ್ಸ್‌ಮನ್) ಆಟಗಾರರಾಗಿದ್ದರು.

೨೪. ಒಂದೇ ಇನ್ನಿಂಗ್ಸ್‌ನಲ್ಲಿ ಅತಿಹೆಚ್ಚು ರನ್ ಸೇರಿಸಿದ ಶ್ರೇಯಸ್ಸು ಇಂಗ್ಲೆಂಡಿಗಿದೆ. ೧೯೩೮ರಲ್ಲಿ ಆಸ್ಟ್ರೇಲಿಯದ ವಿರುದ್ಧ ಓವಲ್‌ನಲ್ಲಾಡಿದ ಐದನೇ ಟೆಸ್ಟ್‌ನಲ್ಲಿ ಆದೇಶವು ಏಳು ವಿಕೆಟಿಗೆ ೯೦೩ರನ್ ಮಾಡಿ ಡಿಕ್ಲೇರ್ ಮಾಡಿ ಕೊಂಡಿತು.

೨೫. ಅತಿ ದೀರ್ಘಕಾಲದವರೆಗೆ ನಡೆಯುವ ಟೆಸ್ಟ್ ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್‌ಗಳ ನಡುವೆ ಡರ್ಬನ್‌ನಲ್ಲಾಡಲಾಗಿತ್ತು. ಇದು ೧೯೩೮–

೩೯ರ ಸರಣಿಯ ಐದನೇ ಟೆಸ್ಟ್ ಆಗಿತ್ತು. ಹತ್ತು ದಿನಗಳವರೆಗೆ ಆಡಲಾದ ಈ ಟೆಸ್ಟ್ ಸೋಲು-ಗೆಲುವಿನ ತೀರ್ಮಾನವಾಗಿದೇ ಮುಕ್ತಾಯಗೊಂಡಿತು.

೨೬. ಟೆಸ್ಟ್‌ನಲ್ಲಿ ಅತಿ ಕಡಿಮೆ ರನ್‌ಗಳನ್ನು ನ್ಯೂಜಿಲೆಂಡ್ ಗಳಿಸಿದೆ. ೧೯೫೪-೫೫ರಲ್ಲಿ ಇಂಗ್ಲೆಂಡ್ ವಿರುದ್ಧ ಎರಡನೇ ಟೆಸ್ಟ್‌ನಲ್ಲಿ ನ್ಯೂಜಿಲೆಂಡ್ ಟೀಮ್ ಕೇವಲ ೨೬ ರನ್‌ಗೆ ಔಟಾಗಿತ್ತು.

೨೭. ರನ್‌ಗಳ ಆಧಾರದ ಮೇಲೆ ಗೆಲ್ಲುವ ಮಾತು ಬಂದರೆ, ಇಂದಿನವರೆಗಿನ ಟೆಸ್ಟ್ ಇತಿಹಾಸದಲ್ಲಿ ಮಹಾನ್ ವಿಜಯ ಇಂಗ್ಲೆಂಡ್‌ನ ಪಾಲಿಗಿದೆ. ೧೯೨೮-೨೯ರ ಸರಣಿಯಲ್ಲಿ ಬ್ರಿಸ್ಬೇನ್‌ನಲ್ಲಿ ಆಡಲಾದ ಮೊದಲ ಟೆಸ್ಟ್‌ನಲ್ಲಿ ೬೭೫ ರನ್‌ಗಳಿಂದ ಇಂಗ್ಲೆಂಡ್ ಆಸ್ಟ್ರೇಲಿಯಾದ ಮೇಲೆ ಜಯಗಳಿಸಿತ್ತು.

೨೮. ಇನ್ನಿಂಗ್ಸ್ ಮತ್ತು ರನ್‌ಗಳ ದೃಷ್ಟಿಯಿಂದ ಓವಲ್‌ನಲ್ಲಿ ೧೯೩೮ರ ಸರಣಿಯ ಐದನೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾದ ಮೇಲೆ ಇಂಗ್ಲೆಂಡಿನ ವಿಜಯ ಅತಿ ಮಹತ್ವದ್ದು. ಈ ಟೆಸ್ಟ್‌ನಲ್ಲಿ ಇಂಗೆಂಡ್ ಒಂದು ಇನ್ನಿಂಗ್ಸ್ ಮತ್ತು ೫೭೯ ರನ್‌ಗಳಿಂದ ಗೆದ್ದಿತ್ತು.

೨೯. ಅತಿ ಕಡಿಮೆ ರನ್‌ಗಳಿಂದ ಗೆದ್ದ ರೆಕಾರ್ಡ್ ಆಸ್ಟ್ರೇಲಿಯಾಕ್ಕೆ ಹೋಗುತ್ತದೆ. ಅದು ಇಂಗ್ಲೆಂಡಿನ ವಿರುದ್ಧ ೧೯೦೨ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಆಡಲಾದ ನಾಲ್ಕನೇ ಟೆಸ್ಟ್‌ನಲ್ಲಿ ಕೇವಲ ಮೂರು ರನ್‌ಗಳಿಂದ ಗೆದ್ದಿತ್ತು.

೩೦. ಮೊದಲಿನಿಂದ ಹನ್ನೊಂದನೇ ಸಂಖ್ಯೆಯವರೆಗಿನ ಬ್ಯಾಟ್ಸ್‌ಮನ್‌ಗಳು ಅಧಿಕ ರನ್‌ಗಳಿಂದ ದಾಖಲೆ ಕ್ರಮವಾಗಿ ಈ ರೀತಿ ಇದೆ:—

೩೬೪ ರನ್ ಲೆನ್ ಹಟನ್ ಇಂಗ್ಲೆಂಡಿಗಾಗಿ ಆಸ್ಟ್ರೇಲಿಯಾದ ವಿರುದ್ಧ ೧೯೩೮ರಲ್ಲಿ ಓವಲ್‌ನ ಐದನೇ ಟೆಸ್ಟ್‌ನಲ್ಲಿ ಗಳಿಸಿದರು.

೩೨೫ ರನ್ ಎ. ಸ್ಯಾಂಡ್‌ಹಮ್‌ರವರು ಇಂಗ್ಲೆಂಡಿಗಾಗಿ ವೆಸ್ಟ್‌ಇಂಡೀಸ್‌ನ ವಿರುದ್ಧ ೧೯೨೯-೩೦ರಲ್ಲಿ ಕಿಂಗ್ಸ್‌ಟನ್‌ನ ನಾಲ್ಕನೇ ಟೆಸ್ಟ್‌ನಲ್ಲಿ ಗಳಿಸಿದರು.

ಔಟಾಗದ ೩೬೫ ರನ್ ಗ್ಯಾರಿ ಸೋಬರ್ಸ್‌ರವರು ವೆಸ್ಟ್‌ಇಂಡೀಸ್‌ಗಾಗಿ ಪಾಕಿಸ್ತಾನದ ವಿರುದ್ಧ ೧೯೫೭-೫೮ರಲ್ಲಿ ಕಿಂಗ್ಸ್‌ಟನ್‌ನ ೩ನೇ ಟೆಸ್ಟ್‌ನಲ್ಲಿ ಗಳಿಸಿದರು.

ಆರ್. ಎಂ. ಕೌಪರ್‌ರವರು ಆಸ್ಟ್ರೇಲಿಯಾಕ್ಕಾಗಿ ಇಂಗ್ಲೆಂಡ್‌ನ ವಿರುದ್ಧ ೧೯೬೫-೬೬ರಲ್ಲಿ ಮೆಲ್ಬೋರ್ನ್‌ನ ೫ನೇ ಟೆಸ್ಟ್‌ನಲ್ಲಿ ೩೦೭ ರನ್ ಗಳಿಸಿದರು.

ಡಾನ್ ಬ್ರಾಡ್‌ಮನ್‌ರವರು ಆಸ್ಟ್ರೇಲಿಯಾಕ್ಕಾಗಿ ಇಂಗ್ಲೆಂಡಿನ ವಿರುದ್ಧ ೧೯೩೪ರಲ್ಲಿ ಲೀಡ್ಸ್‌ನ ನಾಲ್ಕನೇ ಟೆಸ್ಟ್‌ನಲ್ಲಿ ೩೦೪ ರನ್ ಗಳಿಸಿದರು.

ಡಾನ್ ಬ್ರಾಡ್‌ಮನ್‌ರವರು ಆಸ್ಟ್ರೇಲಿಯಾಕ್ಕಾಗಿ ಇಂಗ್ಲೆಂಡಿನ ವಿರುದ್ಧ ೧೯೪೬-೪೭ರಲ್ಲಿ ಸಿಡ್ನಿಯ ಎರಡನೇ ಟೆಸ್ಟ್‌ನಲ್ಲಿ ೨೩೪ ರನ್ ಗಳಿಸಿದರು.

ಡಾನ್ ಬ್ರಾಡ್‌ಮನ್ನರೇ ಆಸ್ಟ್ರೇಲಿಯಾಕ್ಕಾಗಿ ಇಂಗ್ಲೆಂಡಿನ ವಿರುದ್ಧ ೧೯೩೬-೩೭ರಲ್ಲಿ ಮೆಲ್ಬೋರ್ನ್‌ನ ಮೂರನೇ ಟೆಸ್ಟ್‌ನಲ್ಲಿ ೨೭೦ ರನ್ ಗಳಿಸಿದರು.

ಇಮ್ತಿಯಾಜ್ ಅಹಮದ್‌ರವರು ಪಾಕೀಸ್ಥಾನಕ್ಕಾಗಿ ನ್ಯೂಜಿಲೆಂಡಿನ ವಿರುದ್ಧ ೧೯೫೫-೫೬ ರಲ್ಲಿ ಲಾಹೋರ್‌ನ ಎರಡನೇ ಟೆಸ್ಟ್‌ನಲ್ಲಿ ೨೦೯ ರನ್ ಗಳಿಸಿದರು.

ಸಿ. ಹಿಲ್‌ರವರು ಆಸ್ಟ್ರೇಲಿಯಾಕ್ಕಾಗಿ ಇಂಗ್ಲೆಂಡ್‌ನ ವಿರುದ್ಧ ೧೯೦೭-೦೮ರಲ್ಲಿ ಅಡಿಲೆಯ್ಡ್‌ನ ಮೂರನೇ ಟೆಸ್ಟ್‌ನಲ್ಲಿ ೧೬೦ ರನ್ ಗಳಿಸಿದರು.

ಡಬ್ಲ್ಯು. ಡಬ್ಲ್ಯು. ರೀಡ್‌ರವರು ಇಂಗ್ಲೆಂಡಿಗಾಗಿ ಆಸ್ಟ್ರೇಲಿಯಾದ ವಿರುದ್ಧ ೧೮೮೪ ರಲ್ಲಿ ಓವಲ್‌ನ ಮೂರನೇ ಟೆಸ್ಟ್‌ನಲ್ಲಿ ೧೧೭ ರನ್ ಗಳಿಸಿದರು.

ಆರ್. ಒ. ಕೋಲಿಂಸ್‌ರವರು ನ್ಯೂಜಿಲೆಂಡಿಗಾಗಿ ಪಾಕೀಸ್ಥಾನದ ವಿರುದ್ಧ ೧೯೭೨-೭೩ ರಲ್ಲಿ ಆಕ್ಲೆಂಡ್‌ನ ಎರಡನೇ ಟೆಸ್ಟ್‌ನಲ್ಲಿ ಔಟಾಗದ ೬೮ ರನ್ ಗಳಿಸಿದರು.

೩೧. ಪ್ರತಿಯೊಂದು ವಿಕೆಟ್‌ಗಳ ಪಾಲುಗಾರಿಕೆಗಳಲ್ಲಿ ವಿಶ್ವ ರೆಕಾರ್ಡ್ ಕ್ರಮವಾಗಿ ಈ ರೀತಿ ಇದೆ:—

೪೧೩ ರನ್ ಮೊದಲ ವಿಕೆಟ್‌ಗೆ–ವೀನೂ ಮಂಕಡ್ ಮತ್ತು ಪಂಕಜರಾಯ್ ರವರು ಭಾರತಕ್ಕಾಗಿ ನ್ಯೂಜಿಲೆಂಡಿನ ವಿರುದ್ಧ ೧೯೫೫-೫೬ ರಲ್ಲಿ ಮದ್ರಾಸಿನ ಐದನೇ ಟೆಸ್ಟ್‌ನಲ್ಲಿ;

೪೫೧ ರನ್ ಡಾನ್‌ಬ್ರಾಡ್‌ಮನ್ ಮತ್ತು ಡಬ್ಲ್ಯು. ಎಚ್. ಪೋಂಸ ಫೋರ್ಡ್‌ರಿಂದ ಎರಡನೇ ವಿಕೆಟಗೆ–ಇಂಗ್ಲೆಂಡ್ ವಿರುದ್ಧ ಆಸ್ಟ್ರೇಲಿಯಕ್ಕಾಗಿ ೧೯೩೪ ರಲ್ಲಿ ಓವಲ್‌ನ ಐದನೇ ಟೆಸ್ಟ್‌ನಲ್ಲಿ;

೩೭೦ ರನ್ ಮೂರನೇ ವಿಕೆಟ್ಟಿಗೆ–ಡಬ್ಲ್ಯು.ಜೆ. ಎಡ್ರಿಚ್ ಮತ್ತು ಡೆನಿಸ್ ಕಾಂಪ್ಟನ್‌ರವರು ಇಂಗ್ಲೆಂಡಿಗಾಗಿ ದಕ್ಷಿಣ ಆಫ್ರಿಕಾದ ವಿರುದ್ಧ ೧೯೪೭ ರಲ್ಲಿ ಲಾರ್ಡ್ಸ್‌ನ ಎರಡನೇ ಟೆಸ್ಟ್‌ನಲ್ಲಿ;

೪೧೧ ರನ್ ನಾಲ್ಕನೇ ವಿಕೆಟ್ಟಿಗೆ–ಪಿ.ಬಿ. ಎಚ್‌ನಲ್ಲಿ ಮತ್ತು ಕಾಲಿನ್‌ಕೌಡ್ರಿ ಯಿಂದ ಇಂಗ್ಲೆಂಡಿಗಾಗಿ ವೆಸ್ಟ್‌ಇಂಡೀಸ್‌ನ ವಿರುದ್ಧ ೧೯೫೭ ರಲ್ಲಿ ಬರ್ಮಿಂಗ್ ಹ್ಯಾಂನ ಮೊದಲ ಟೆಸ್ಟ್‌ನಲ್ಲಿ;

೪೦೫ ರನ್ ಐದನೇ ವಿಕೆಟ್ಟಿಗೆ–ಡಾನ್‌ಬ್ರಾಡ್‌ಮನ್ ಮತ್ತು ಎಸ್. ಜಿ.

ಬಾರ್ನೆಸ್‌ರವರಿಂದ ಆಸ್ಟ್ರೇಲಿಯಾಕ್ಕಾಗಿ ಇಂಗ್ಲೆಂಡ್ ವಿರುದ್ಧ ೧೯೪೬-೪೭ ರಲ್ಲಿ ಸಿಡ್ನಿಯ ಎರಡನೇ ಟೆಸ್ಟ್‌ನಲ್ಲಿ;

೩೪೬ ರನ್ ಆರನೇ ವಿಕೆಟ್ಟಿಗೆ–ಡಾನ್‌ಬ್ರಾಡ್‌ಮನ್ ಮತ್ತು ಜೆ. ಎಚ್. ಫಿಂಗಲ್‌ಟನ್‌ರಿಂದ ಆಸ್ಟ್ರೇಲಿಯಾಕ್ಕಾಗಿ ಇಂಗ್ಲೆಂಡ್‌ನ ವಿರುದ್ಧ ೧೯೩೬-೩೭ರಲ್ಲಿ ಮೆಲ್ಬೋರ್ನ್‌ನ ಮೂರನೇ ಟೆಸ್ಟ್‌ನಲ್ಲಿ;

೩೪೭ ರನ್ ಏಳನೇ ವಿಕೆಟ್ಟಿಗೆ–ಡಿ. ಅಟ್‌ಕಿನ್‌ಸನ್ ಮತ್ತು ಸಿ. ಡೆಪೀಜಾರವರಿಂದ ವೆಸ್ಟ್‌ಇಂಡೀಸ್‌ಗಾಗಿ ಆಸ್ಟ್ರೇಲಿಯಾದ ವಿರುದ್ಧ ೧೯೫೪-೫೫ ರಲ್ಲಿ ಬ್ರಿಜಟಾನ್‌ನ ನಾಲ್ಕನೇ ಟೆಸ್ಟ್‌ನಲ್ಲಿ;

೨೪೬ ರನ್ ಎಂಟನೇ ವಿಕೆಟ್ಟಿಗೆ–ಎಲ್. ಈ.ಜಿ. ಜೇಮ್ಸ್ ಮತ್ತು ಜಿ. ಓ. ಅಲನ್‌ರಿಂದ ಇಂಗ್ಲೆಂಡಿಗಾಗಿ ನ್ಯೂಜಿಲೆಂಡಿನ ವಿರುದ್ಧ ೧೯೩೧ ರಲ್ಲಿ ಲಾರ್ಡ್ಸ್‌ನ ಮೊದಲ ಟೆಸ್ಟ್‌ನಲ್ಲಿ;

೧೯೦ ರನ್ ಒಂಬತ್ತನೇ ವಿಕೆಟ್ಟಿಗೆ–ಆಸಿಫ್‌ಇಕ್ಬಾಲ್ ಮತ್ತು ಇಂತಿಖಾಬ್ ಆಲಮ್‌ರವರಿಂದ ಪಾಕೀಸ್ಥಾನಕ್ಕಾಗಿ ಇಂಗ್ಲೆಂಡಿನ ವಿರುದ್ಧ ೧೯೬೭ ರಲ್ಲಿ ಓವಲ್‌ನ ಮೂರನೇ ಟೆಸ್ಟ್‌ನಲ್ಲಿ; ಮತ್ತು ೧೫೦ ರನ್ ಬಿ. ಎಫ್. ಹೇಸ್ಟಿಂಗ್ಸ್ ಮತ್ತು ಆ. ಓ. ಕೋಲಿಂಸ್‌ರವರಿಂದ – ನ್ಯೂಜಿಲೆಂಡಿಗಾಗಿ ಪಾಕೀಸ್ಥಾನದ ವಿರುದ್ಧ ಹತ್ತನೆ ವಿಕೆಟ್ಟಿಗಾಗಿ ೧೯೭೨-೭೩ರಲ್ಲಿ ಆಕ್ಲೆಂಡ್‌ನ ಮೂರನೇ ಟೆಸ್ಟ್‌ನಲ್ಲಿ.

೩೨. ಬೋಲಿಂಗ್‌ನಲ್ಲಿ ಒಂದು ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ವಿಕೆಟ್ಟನ್ನು ಇಂಗ್ಲೆಂಡಿನ ಜೆ.ಸಿ. ಲೇಕರ್ ಪಡೆದಿದ್ದಾರೆ. ಅವರು ೧೯೫೬ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಆಸ್ಟ್ರೇಲಿಯಾದ ವಿರುದ್ಧ ಆಡಲಾದ ನಾಲ್ಕನೇ ಟೆಸ್ಟ್‌ನಲ್ಲಿ ಒಂದು ಇನ್ನಿಂಗ್ಸ್‌ನ ಹತ್ತೂ ವಿಕೆಟ್‌ಗಳನ್ನು ಕೇವಲ ೫೩ ರನ್ ಕೊಟ್ಟು ತೆಗೆದುಕೊಂಡರು.

೩೩. ಒಂದು ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ಸಾರಿ ಅಥವಾ ಹೆಚ್ಚು ವಿಕೆಟ್‌ಗಳನ್ನು ಇಂಗ್ಲೆಂಡಿನ ಎಸ್. ಎಫ್. ಬಾರ್ನೆಸ್‌ರವರು ತೆಗೆದುಕೊಂಡಿದ್ದಾರೆ—ಒಟ್ಟು ೨೪ ಸಾರಿ.

೩೪. ಒಂದು ಟೆಸ್ಟ್‌ನಲ್ಲಿ ಅತಿ ಹೆಚ್ಚು ವಿಕೆಟ್‌ಗಳನ್ನು ಇಂಗ್ಲೆಂಡಿನವರೇ ಆದ ಜೆ.ಡಿ. ಲೇಕರ್ ತೆಗೆದುಕೊಂಡಿದ್ದಾರೆ. ಅವರು ೧೯೫೬ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಆಸ್ಟ್ರೇಲಿಯಾದ ವಿರುದ್ಧ ಆಡಲಾದ ನಾಲ್ಕನೇ ಟೆಸ್ಟ್‌ನಲ್ಲಿ ಎರಡೂ ಇನ್ನಿಂಗ್ಸ್‌ಗಳಲ್ಲಿ ಕೇವಲ ೯೦ ರನ್ ಕೊಟ್ಟು ೧೯ ವಿಕೆಟ್ ಪಡೆದರು.

೩೫. ಒಂದೇ ಸರಣಿಯಲ್ಲಿ ಅತಿ ಹೆಚ್ಚು ವಿಕೆಟ್‌ಗಳನ್ನು ಇಂಗ್ಲೆಂಡಿನವರೇ ಆದ ಎಸ್. ಎಫ್. ಬಾರ್ನೆಸ್‌ರವರು ಉರುಳಿಸಿದ್ದಾರೆ. ೧೯೧೩-೧೪ರಲ್ಲಿ ದಕ್ಷಿಣ ಆಫ್ರಿಕಾದ ವಿರುದ್ಧ ದಕ್ಷಿಣ ಆಫ್ರಿಕಾದಲ್ಲೇ ಆಡಿದ ಸರಣಿಯಲ್ಲಿ ಅವರು ೪೯ ವಿಕೆಟ್ ಪಡೆದರು.

೩೬. ಟೆಸ್ಟುಗಳಲ್ಲಿ ಒಟ್ಟು ಸೇರಿ ಅತಿ ಹೆಚ್ಚು ವಿಕೆಟ್‌ಗಳನ್ನು ವೆಸ್ಟ್‌ಇಂಡೀಸ್‌ನ ಎಲ್. ಆರ್. ಗಿಬ್ಸ್‌ರವರು ಪಡೆದಿದ್ದಾರೆ. ಅವರು ತಮ್ಮ ಟೆಸ್ಟ್ ಜೀವನದಲ್ಲಿ ಒಟ್ಟು ೩೦೯ ವಿಕೆಟ್ ಪಡೆದು ವಿಶ್ವ ದಾಖಲೆಯನ್ನು ಸ್ಥಾಪಿಸಿದ್ದಾರೆ.

೩೭. ಅತಿ ಶೀಘ್ರದಲ್ಲಿ ವಿಕೆಟ್ ಶತಕ ಪೂರ್ಣಗೊಳಿಸಿದ ಶ್ರೇಯಸ್ಸು ಇಂಗ್ಲೆಂಡಿನ ಜಿ. ಎ. ಲೋಹಮನ್‌ಗೆ ದೊರೆತಿದೆ. ಅವರು ತಮ್ಮ ಮೊದಲ ೧೬ ಟೆಸ್ಟುಗಳಲ್ಲಿಯೇ ೧೦೦ ವಿಕೆಟ್‌ಗಳನ್ನು ಪಡೆದಿದ್ದರು.

೩೮. ತಮ್ಮ ಟೆಸ್ಟ್ ಜೀವನದ ಮೊದಲ ಚೆಂಡಿನಲ್ಲೇ ವಿಕೆಟ್ ಪಡೆದ ಅದೃಷ್ಟ ಇದುವರೆಗೆ ಈ ಕೆಳಕಂಡ ಆರು ಬೋಲರ್‌ಗಳಿಗೆ ಸಿಕ್ಕಿದೆ:

ಎ. ಕೋವಿಂಗ್ಟನ್ (ಆಸ್ಟ್ರೇಲಿಯಾ), ಜಿ. ಜಿ. ಮೈಕಾಲ್ (ಇಂಗ್ಲೆಂಡ್), ಎಂ. ಡಬ್ಲ್ಯೂ. ಟೇಟ್ (ಇಂಗ್ಲೆಂಡ್), ಟಿ. ಜಾನ್‌ಸನ್ (ವೆಸ್ಟ್‌ಇಂಡೀಸ್), ಆರ್. ಹಾರ್ವಡ್ (ಇಂಗ್ಲೆಂಡ್) ಮತ್ತು ಇಂತಿಖಾಬ್ ಆಲಮ್ (ಪಾಕಿಸ್ತಾನ).

೩೯. ಹ್ಯಾಟ್ರಿಕ್ ಪಡೆದ ಬೋಲರ್‌ಗಳಲ್ಲಿ ಆಸ್ಟ್ರೇಲಿಯಾದ ಟಿ. ಜೆ ಮ್ಯಾಥ್ಯೂಸ್‌ರವರು ಉಲ್ಲೇಖನೀಯ. ಅವರು ಒಂದೇ ಟೆಸ್ಟ್‌ನಲ್ಲಿ ಒಂದೇ ದಿನದಲ್ಲಿ ಎರಡು ಸಾರಿ ಹ್ಯಾಟ್ರಿಕ್ ಪಡೆದರು. ಈ ಚಮತ್ಕಾರವನ್ನು ಅವರು ದಕ್ಷಿಣ ಆಫ್ರಿಕಾದ ವಿರುದ್ಧ ೧೯೧೨ರಲ್ಲಿ ಮ್ಯಾಂಚೆಸ್ಟರ್‌ನಲ್ಲಾಡಿದ ಮೊದಲ ಟೆಸ್ಟ್‌ನಲ್ಲಿ ಮಾಡಿದ್ದರು.

೪೦. ಒಂದು ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ಬೋಲ್‌ಮಾಡಿದ ಶ್ರೇಯಸ್ಸು ವೆಸ್ಟ್‌ಇಂಡೀಸ್‌ನ ಸೋನಿರಾಮಾಧೀನ್‌ರಿಗೆ ದೊರೆಕಿದೆ. ಅವರು ೧೯೫೭ರಲ್ಲಿ ಬರ್ಮಿಂಗ್ ಹ್ಯಾಂನಲ್ಲಿ ಇಂಗ್ಲೆಂಡ್ ವಿರುದ್ಧ ಆಡಿದ ಮೊದಲ ಟೆಸ್ಟ್‌ನಲ್ಲಿ ಒಂದು ಇನ್ನಿಂಗ್ಸ್‌ನಲ್ಲಿ ೯೮ ಸಲ ಬೋಲ್‌ಮಾಡಿ ದಾಖಲೆ ಸ್ಥಾಪಿಸಿದರು.

೪೧. ಒಂದು ಟೆಸ್ಟ್‌ನಲ್ಲಿ ಅತಿ ಹೆಚ್ಚು ಬೌಲಿಂಗ್ ಮಾಡಿದ ಶ್ರೇಯಸ್ಸು ರಾಮಾಧೀನ್‌ರಿಗೆ ದೊರಕಿದೆ ಅವರು, ಮೇಲೆ ತಿಳಿಸಿದ ಟೆಸ್ಟ್‌ನಲ್ಲಿಯೇ ೭೭೪ ಚೆಂಡೆಸೆದು ಕೀರ್ತಿ ಗಳಿಸಿದ್ದಾರೆ.

೪೨. ೧೦೦೦ ಕ್ಕಿಂತ ಹೆಚ್ಚು ರನ್ ಮಾಡಿ, ೧೦೦ ಕ್ಕಿಂತ ಹೆಚ್ಚು ವಿಕೆಟ್

ಪಡೆದು ಮತ್ತು ೧೦೦ ಕ್ಕಿಂತ ಹೆಚ್ಚು ಕ್ಯಾಚ್ ಹಿಡಿದವರು ಟೆಸ್ಟ್ ಇತಿಹಾಸದಲ್ಲಿ ಆಲ್‌ರೌಂಡರ್ ಗ್ಯಾರಿ ಸೋಬರ್ಸ್‌ರವರೊಬ್ಬರೇ ೯೩ ಟೆಸ್ಟ್‌ಗಳಲ್ಲಿ ೮೦೩೨ ರನ್‌ಗಳನ್ನು ಮಾಡಿದ್ದಲ್ಲದೆ ಅವರು ೨೩೫ ವಿಕೆಟ್ ಪಡೆದು, ೧೧೦ ಕ್ಯಾಚ್ ಹಿಡಿದಿದ್ದಾರೆ.

೪೩. ೨೦೦೦ ರನ್ ಮಾಡಿ, ೨೦೦ ವಿಕೆಟ್ ಪಡೆದ ಆಲ್‌ರೌಂಡರ್‌ಗಳ ವಿಷಯ ಬಂದಾಗ ಸೋಬರ್ಸ್ ಜೊತೆಗೆ ಆಸ್ಟ್ರೇಲಿಯಾದ ಆರ್. ಬೆನೋ ಬರುತ್ತಾರೆ. ಬೆನೋರವರು ೬೩ ಟೆಸ್ಟ್‌ಗಳಲ್ಲಿ ೨೨೦೧ ರನ್ ಮಾಡಿ ೨೪೮ ವಿಕೆಟ್ ಪಡೆದರು.

೪೪. ಒಂದೇ ಮ್ಯಾಚ್‌ನಲ್ಲಿ ೧೦ ವಿಕೆಟ್ ಪಡೆಯುವುದರ ಜೊತೆಗೆ ೧೦೦ ಕ್ಕಿಂತ ಹೆಚ್ಚು ರನ್ ಗಳಿಸಿದವರಲ್ಲಿ ಆಸ್ಟ್ರೇಲಿಯಾದ ಆಲ್‌ರೌಂಡರ್ ಅಲನ್ ಡೇವಿಡ್‌ಸನ್‌ರವರೊಬ್ಬರೇ. ಅವರು ೧೯೬೦–೬೧ರಲ್ಲಿ ವೆಸ್ಟ್‌ಇಂಡಿಸ್‌ನ ವಿರುದ್ಧ ಬ್ರಿಸ್ಬೇನ್‌ನ ಮೊದಲ ಟೆಸ್ಟ್‌ನಲ್ಲಿ ೪೪ ಮತ್ತು ೮೦ ರನ್ ಮಾಡಿ, ೧೩೫ ರನ್ ಕೊಟ್ಟು ಐದು ವಿಕೆಟನ್ನು ಮೊದಲ ಇನ್ನಿಂಗ್ಸ್‌ನಲ್ಲಿ ಮತ್ತು ೮೭ ರನ್‌ಗೆ ಆರು ವಿಕೆಟನ್ನು ಎರಡನೇ ಇನ್ನಿಂಗ್ಸ್‌ನಲ್ಲಿ ಪಡೆದರು.

೪೫. ಒಂದೇ ಟೆಸ್ಟ್‌ನಲ್ಲಿ ಹ್ಯಾಟ್ರಿಕ್ ಮತ್ತು ಶತಕಗಳಿಸಿದವರು ಇಂಗ್ಲೆಂಡಿನ ಜೆ. ಬ್ರಿಗ್ಸ್‌ರವರು. ಆಸ್ಟ್ರೇಲಿಯಾದ ವಿರುದ್ಧ ೧೮೯೧–೯೨ರ ಸರಣಿಯಲ್ಲಿ ೩ನೇ ಟೆಸ್ಟ್ ಸಿಡ್ನಿಯಲ್ಲಿ ಆಡಲಾಗಿತ್ತು. ಅದರಲ್ಲಿ ಬ್ರಿಗ್ಸ್‌ರವರು ೧೨೧ ರನ್ ಜೊತೆಗೆ ಹ್ಯಾಟ್ರಿಕ್ ಸಹ ಪಡೆದರು.

೪೬. ೧೦೦೦ ರನ್ ಮತ್ತು ೧೦೦ ವಿಕೆಟ್‌ನ ಜೋಡಿ ದಾಖಲೆಯನ್ನು (ಟ್ವಿನ್‌ರಿಕಾರ್ಡ್ಸ್) ಅತಿ ಕಡಿಮೆ ಟೆಸ್ಟ್‌ಗಳಲ್ಲಿ ಭಾರತದ ವೀನೂ ಮಂಕಡ್‌ರವರು ಗಳಿಸಿದ್ದಾರೆ. ಅವರು ಕೇವಲ ೨೩ ಟೆಸ್ಟ್‌ಗಳಲ್ಲಾಡಿ ಈ ಯಶಸ್ಸನ್ನು ಗಳಿಸಿದ್ದರು.

೪೭. ವಿಕೆಟ್-ಕೀಪಿಂಗ್‌ನಲ್ಲಿ ಒಂದೇ ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡುವುದರಲ್ಲಿ ಸಹಕರಿಸಿದ ಶ್ರೇಯಸ್ಸು ಆಸ್ಟ್ರೇಲಿಯಾದ ಗ್ರೌಟ್, ದಕ್ಷಿಣ ಆಫ್ರಿಕಾದ ಲಿಂಡಸೆ, ಇಂಗ್ಲೆಂಡಿನ ಮರ್ರೆ ಮತ್ತು ಭಾರತದ ಕಿರ್ಮಾನಿಯವರಿಗಿದೆ. ಇವರೆಲ್ಲರೂ ಒಂದು ಇನ್ನಿಂಗ್ಸ್‌ನಲ್ಲಿ ೬–೬ ಆಟಗಾರರನ್ನು ಬಲಿತೆಗೆದುಕೊಂಡರು. ಉಳಿದವರು ೬ಕ್ಕೆ ೬ಕ್ಯಾಚ್ ಹಿಡಿದು ಔಟ್ ಮಾಡಿದರೆ ಕಿರ್ಮಾನಿ ಐದು ಕ್ಯಾಚ್ ಮತ್ತು ಒಂದು ಸ್ಟಂಪ್‌ನಿಂದ ಔಟ್ ಮಾಡಿದ್ದಾರೆ.

೪೮. ಒಂದೇ ಮ್ಯಾಚ್‌ನ ವಿಕೆಟ್ ಕೀಪಿಂಗ್‌ನಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ಬಲಿತೆಗೆದುಕೊಳ್ಳುವಂತೆ ಮಾಡಿದವರು, ಆಸ್ಟ್ರೇಲಿಯಾದ ಜಿ. ಆರ್. ಲ್ಯಾಂಗ್ಲೆ—ಒಟ್ಟು ಒಂಭತ್ತು. ಇದನ್ನು ಅವರು ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧ ೧೯೫೬ರ ಎರಡನೇ ಟೆಸ್ಟ್‌ನಲ್ಲಿ ಸಾಧಿಸಿದ್ದರು.

೪೯. ಒಂದೇ ಸರಣಿಯಲ್ಲಿ ವಿಕೆಟ್‌ಕೀಪಿಂಗ್‌ನಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಬಲಿ ತೆಗೆದುಕೊಂಡ ಶ್ರೇಯಸ್ಸು ದಕ್ಷಿಣ ಆಫ್ರಿಕಾದ ಜೆ.ಎಚ್.ಬಿ. ವೇಟಿ ಮತ್ತು ಆಸ್ಟ್ರೇಲಿಯಾದ ರಾಡ್ನೀಮಾರ್ಶ್‌ರಿಗೆ ದೊರಕುತ್ತದೆ. ೧೯೬೧–೬೨ರಲ್ಲಿ ನ್ಯೂಜಿಲೆಂಡಿನ ವಿರುದ್ಧ ದಕ್ಷಿಣ ಆಫ್ರಿಕಾದಲ್ಲೂ ಮತ್ತು ಮಾರ್ಶ್‌ರವರು ೧೯೭೫-೭೬ ರಲ್ಲಿ ವೆಸ್ಟ್ಇಂಡೀಸ್‌ನ ವಿರುದ್ಧ ಆಸ್ಟ್ರೇಲಿಯಾದಲ್ಲೂ ಒಂದು ಸರಣಿಯಲ್ಲಿ ೨೬–೨೬ ರಂತೆ ಬಲಿ ತೆಗೆದುಕೊಂಡರು. ಇವು ೬ ಟೆಸ್ಟ್ ಮ್ಯಾಚ್‌ಗಳ ಸರಣಿಗಳಾಗಿದ್ದವು.

೫೦. ಟೆಸ್ಟ್ ಜೀವನದಲ್ಲಿ ವಿಕೆಟ್‌ಕೀಪರ್ ಆಗಿ ಅತಿ ಹೆಚ್ಚು ಸಫಲತೆಯು ಇಂಗ್ಲೆಂಡಿನ ಅಲನ್ ನಾಟ್‌ರಿಗೆ ಸಿಕ್ಕಿದೆ. ಇಲ್ಲಿಯವರೆಗೆ ಅವರು ೭೮ ಟೆಸ್ಟ್‌ಗಳಲ್ಲಿ ೨೨೧ ಬಲಿ (೨೦೪ ಕ್ಯಾಚ್ ಮತ್ತು ೧೭ ಸ್ಟಂಪ್ಸ್) ತೆಗೆದುಕೊಂಡಿದ್ದಾರೆ.

೫೧. ಇಂಗ್ಲೆಂಡಿನವರೇ ಆದ ಟಿ. ಜೆ. ಇವಾಂಸ್‌ರವರು ೧೯೪೬–೪೭ರಲ್ಲಿ ಸಿಡ್ನಿಯ ಎರಡನೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾದ ಎಂಟು ವಿಕೆಟಿಗೆ ೬೫೯ (ಡಿಕ್ಲೇರ್ಡ್) ಸ್ಕೋರಿನಲ್ಲಿ ಒಂದೂ ಬೈ ಕೊಡದೆ ಹೊಸ ದಾಖಲೆಯನ್ನು ಸ್ಥಾಪಿಸಿದರು.

೫೨. ಒಟ್ಟು ಏಳು ವಿಕೇಟ್‌ಕೀಪರ್‌ಗಳು ೧೦೦೦ ರನ್ ಮಾಡುವುದರಲ್ಲಿ ಮತ್ತು ೧೦೦ ಬಲಿ ತೆಗೆದುಕೊಳ್ಳುವುದರಲ್ಲಿ ಹೆಚ್ಚಿನ ಯಶಸ್ಸನ್ನು ಗಳಿಸಿದ್ದಾರೆ. ಇವರಲ್ಲಿ ಇಂಗ್ಲೆಂಡಿನ ಅಲನ್‌ನಾಟ್ ಮೊದಲಿಗರು. ಅವರು ಇದುವರೆಗೆ ೭೮ ಟೆಸ್ಟ್‌ಗಳಲ್ಲಿ ಒಟ್ಟು ೩೫೯೫ ರನ್‌ಮಾಡಿ ೨೨೧ ಬಲಿತೆಗೆದುಕೊಂಡಿದ್ದಾರೆ. ಉಳಿದ ಆರು ಜನರೆಂದರೆ—ಇಂಗ್ಲೆಂಡಿನ ಟಿ.ಜಿ. ಇವಾಂಸ್ ಮತ್ತು ಜೆ.ಎಂ. ಪಾರ್ಕ್ಸ್, ದಕ್ಷಿಣ ಆಫ್ರಿಕಾದ ಜೆ.ಎಚ್.ಬಿ. ವೇಟಿ, ಆಸ್ಟ್ರೇಲಿಯಾದ ರಾಡ್ನೀಮಾರ್ಶ್ ಮತ್ತು ಓಲ್ಡ್‌ಫೀಲ್ಡ್ ಹಾಗೂ ವೆಸ್ಟ್ಇಂಡೀಸ್‌ನ ಡಿ.ಎಲ್. ಮರ್ರೆ.

೫೩. ಒಂದೇ ಮ್ಯಾಚ್‌ನಲ್ಲಿ ಅತಿಹೆಚ್ಚು ಕ್ಯಾಚ್‌ಗಳನ್ನು (ವಿಕೆಟ್-ಕೀಪರ್ ಬಿಟ್ಟು) ಹಿಡಿದಿರುವವರ. ಆಸ್ಟ್ರೇಲಿಯಾದ ಗ್ರೇಗ್ ಚಾಪಲ್—ಒಟ್ಟು ಏಳು, ಪರ್ಥ್‌ನಲ್ಲಿ ಇಂಗ್ಲೆಂಡಿನ ವಿರುದ್ಧ ೧೯೭೪–೭೫ರ ಸರಣಿಯ ಎರಡನೇ ಟೆಸ್ಟ್‌ನಲ್ಲಿ ಭಾರತದ ಯಜುರ್ವೇಂದ್ರಸಿಂಗ್‌ರವರೂ ವೆಸ್ಟ್ಇಂಡೀಸ್ ವಿರುದ್ಧ

ಬೆಂಗಳೂರು ಟೆಸ್ಟ್‌ನಲ್ಲಿ ೭ ಕ್ಯಾಚ್ ಹಿಡಿದು ಈ ದಾಖಲೆಯನ್ನು ಸಮಗೊಳಿಸಿದ್ದಾರೆ.

೫೪. ಒಂದು ಸರಣಿಯಲ್ಲಿ ಒಟ್ಟು ೧೫ ಕ್ಯಾಚ್ ಹಿಡಿದು ಆಸ್ಟ್ರೇಲಿಯಾದ ಜೆ. ಎಂ. ಗ್ರೆಗರಿಯವರು ಹೊಸ ದಾಖಲೆ ಸ್ಥಾಪಿಸಿದರು. ೧೯೨೦-೨೧ರಲ್ಲಿ ಇಂಗ್ಲೆಂಡಿನ ವಿರುದ್ಧ ಆಸ್ಟ್ರೇಲಿಯಾದಲ್ಲಿ.

೫೫. ಟೆಸ್ಟ್ ಜೀವನದಲ್ಲಿ ಅತಿಹೆಚ್ಚು ಕ್ಯಾಚ್ ಹಿಡಿದವರು ಇಂಗ್ಲೆಂಡಿನ ಕಾಲಿನ್‌ಕೌಡ್ರೆ ಒಟ್ಟು ೧೨೦ ಕ್ಯಾಚ್ (೧೧೪ ಟೆಸ್ಟ್‌ಗಳಲ್ಲಿ).

೫೬. ಅತಿ ಹೆಚ್ಚು ಟೆಸ್ಟ್‌ಗಳಲ್ಲಿ ಕ್ಯಾಪ್ಟನ್ ಆಗಿರುವ ಶ್ರೇಯಸ್ಸು ಇಂಗ್ಲೆಂಡಿನ ಪಿ.ಬಿ.ಹೆಚ್. ಮೇಯುವರಿಗೆ ಸಲ್ಲುತ್ತದೆ-ಒಟ್ಟು ೪೧ ಟೆಸ್ಟ್‌ಗಳಲ್ಲಿ.

೫೭. ಗ್ಯಾರಿ ಸೋಬರ್ಸ್‌ರವರು ಒಂದೇಸಮ ೩೯ ಸಾರಿ ವೆಸ್ಟ್ ಇಂಡೀಸ್‌ನ ಕ್ಯಾಪ್ಟನ್ ಆಗಿದ್ದು ಕೀರ್ತಿಗಳಿಸಿದ್ದಾರೆ. ಬೇರಾರೂ ಇಷ್ಟು ಹೆಚ್ಚು ಟೆಸ್ಟ್‌ಗಳಲ್ಲಿ ಒಂದೇ ಸಮನೆ ಕ್ಯಾಪ್ಟನ್ ಆಗಿಲ್ಲ.

೫೮. ಸೋಬರ್ಸ್‌ರವರೇ ಎರಡು ಟೆಸ್ಟ್ ಸರಣಿಗಳ ಎಲ್ಲಾ ಟೆಸ್ಟ್‌ಗಳಲ್ಲಿ ಟಾಸ್‌ಗೆದ್ದು ಮಹಿಮೆ ತೋರಿದ್ದಾರೆ. ಅವರು ೧೯೬೬ರಲ್ಲಿ ಇಂಗ್ಲೆಂಡ್ ವಿರುದ್ಧ ಇಂಗ್ಲೆಂಡ್‌ನಲ್ಲೂ ಮತ್ತು ೧೯೭೧-೭೨ರಲ್ಲಿ ನ್ಯೂಜಿಲೆಂಡ್ ವಿರುದ್ಧ ವೆಸ್ಟ್ ಇಂಡೀಸ್‌ನಲ್ಲೂ ೫ಕ್ಕೆ ೫ ಟೆಸ್ಟ್‌ಗಳಲ್ಲಿ ಟಾಸ್ ಗೆದ್ದರು. ಐದೈದು ಟೆಸ್ಟ್ ಮ್ಯಾಚ್‌ಗಳ ಎರಡೆರಡು ಸರಣಿಗಳಲ್ಲಿ ಎಲ್ಲಾ ಟೆಸ್ಟ್‌ಗಳಲ್ಲಿ ಟಾಸ್ ಗೆದ್ದ ಚಮತ್ಕಾರ ಇದುವರೆಗೆ ಯಾರೂ ತೋರಿಲ್ಲ.

೫೯. ಅತಿ ಹೆಚ್ಚು ಟೆಸ್ಟ್‌ಗಳಲ್ಲಿ ಅಂಪೈರ್ ಆದವರು ಇಂಗ್ಲೆಂಡಿನ ಎಫ್. ಚೇಸ್ಟರ್ ಒಟ್ಟು ೪೮ ಟೆಸ್ಟ್‌ಗಳಲ್ಲಿ.

೬೦. ೧೯೩೬-೩೭ರಲ್ಲಿ ಮೆಲ್ಬೋರ್ನ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡಿನ ನಡುವೆ ಆಡಲಾದ ಮೂರನೇ ಮ್ಯಾಚನ್ನು ೩,೫೦,೫೩೪ ಪ್ರೇಕ್ಷಕರು ವೀಕ್ಷಿಸಿದರು. ಇದೇ ಅತಿ ಹೆಚ್ಚು ದರ್ಶಕರು ಟೆಸ್ಟ್ ವೀಕ್ಷಿಸಿದ ದಾಖಲೆ.

೬೧. ಕೊನೆಯಲ್ಲಿ, ಟೆಸ್ಟ್ ಮ್ಯಾಚಿನ ಪ್ರಪ್ರಥಮ ರೇಡಿಯೋ ಕಾಮೆಂಟರಿಯು ೧೯೩೦ರಲ್ಲಿ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾದ ನಡುವೆ ಆಡಲಾದ ನಾಟಿಂಗ್ ಹ್ಯಾಮ್ ಟೆಸ್ಟ್‌ಗೆ ಬಿತ್ತರಿಸಲ್ಪಟ್ಟಿತ್ತು. ಇದು ಆ ಸರಣಿಯ ಪ್ರಥಮ ಟೆಸ್ಟ್ ಆಗಿತ್ತು.

ಡಿ. ಎನ್. ಶ್ರೀನಾಥ್

ಪುಸ್ತಕ ವಿಮರ್ಶೆ

ಕುಣಿಕೆ (ಸಾಮಾಜಿಕ ಕಾದಂಬರಿ) — ಲೇಖಕರು : ಆರ್ಯಾಂಬ ಪಟ್ಟಾಭಿ ; ಪ್ರಕಾಶಕರು : ಬಾಪ್ಕೋ ಪ್ರಕಾಶನ, ೮೮, ಮೈಸೂರು ರಸ್ತೆ, ಬೆಂಗಳೂರು ; ಪುಟಗಳು : ೯೦ ; ಪ್ರಥಮ ಮುದ್ರಣ : ೧೯೮೩ ; ಬೆಲೆ : ರೂ. ೭ ೫೦.

ಆಂಗ್ಲ ಕಾದಂಬರಿಯೊಂದರ ಸ್ಫೂರ್ತಿಯಿಂದ ರಚಿತವಾಗಿರುವ ಆರ್ಯಾಂಬ ಪಟ್ಟಾಭಿಯವರ ‘ಕುಣಿಕೆ’ ಕಾದಂಬರಿ ಈಗಾಗಲೇ ರಾಗಸಂಗಮ ಎಂಬ ಮಾಸ ಪತ್ರಿಕೆಯಲ್ಲಿ ‘ಕಾಳಿ’ ಎಂಬ ಹೆಸರಿನಲ್ಲಿ ಬೆಳಕು ಕಂಡಿರುವ ಕೃತಿ. ಉಗ್ರ ಸ್ವರೂಪಿ ಎಂದು ನಂಬಲಾದ ಕಾಳಿ ಆರಾಧನೆಯ ಭಕ್ತರ ಪೈಶಾಚಿಕ ಕೃತ್ಯ ವನ್ನು ಬಯಲಿಗೆಳೆಯುವ ಈ ಕೃತಿ ಪತ್ತೇದಾರಿ ಜಾತಿಗೆ ಸೇರಿರುವಂಥದ್ದು. “ವಿಗ್ರಹಾರಾಧನೆಯಲ್ಲಿ ಅತಿಯಾದ ನಂಬಿಕೆಯಿಟ್ಟು ಅತಿರೇಕಕ್ಕೆ ಹೋದ ಮನಸ್ಸು ಎಂಥೆಂಥ ಹೀನ ಕೃತ್ಯಗಳಲ್ಲಿ ತೊಡಗುತ್ತದೆ, ಇದರಿಂದ ಮಾನವನ ಪ್ರಗತಿಗೆ ಅಡ್ಡಿ ಎನ್ನುವ ಚಿತ್ರಣ ಕೊಡುವ ಪ್ರಯತ್ನ ಈ ಕಿರು ಕಾದಂಬರಿ ಯಲ್ಲಿ ಮಾಡಿದ್ದೇನೆ” ಎಂದು ಕಾದಂಬರಿಗಾರ್ತಿಯವರು ತಮ್ಮ ಮೊದಲ ಮಾತಿನಲ್ಲಿ ಕಾದಂಬರಿ ರಚನೆಯ ತಮ್ಮ ಉದ್ದೇಶವನ್ನು ಹೇಳಿಕೊಂಡಿದ್ದಾರೆ. ಕಾಳಿ ವಿಗ್ರಹದ ಕಳವಿನಿಂದ ಕಾದಂಬರಿಯು ಆರಂಭವಾಗಿ ಕಾಳಿ ವಿಗ್ರಹದ ಭಗ್ನತೆಯಲ್ಲಿ ಕಾದಂಬರಿಯು ಮುಕ್ತಾಯವಾಗಿದೆ. ಕಾಳಿ ವಿಗ್ರಹದ ಹಿನ್ನೆಲೆಯಲ್ಲಿ ಮೂರ್‍ನಾಲ್ಕು ಕೊಲೆಗಳು ನಡೆಯುತ್ತವೆ. ಈ ಕೊಲೆ ಮಾಡಿದವರು ಯಾರು, ಅವರ ಕೊಲೆಯ ಉದ್ದೇಶವೇನು ಎಂಬುದರ ಪತ್ತೆ ಹಚ್ಚುವ ಪ್ರಯತ್ನದೊಡನೆ ಕಾದಂಬರಿ ಬೆಳೆಯುತ್ತಾ ಹೋಗಿದೆ. ಚಂಚಲ ಎಂಬ ಸುಂದರ ಹೆಣ್ಣು ಈ ಎಲ್ಲ ಕೊಲೆಗಳ ಹಿಂದಿರುವ ವ್ಯಕ್ತಿ ಎಂಬ ಸಂಗತಿ ಆಶ್ಚರ್ಯಕರ ರೀತಿಯಲ್ಲಿ ಕಾದಂಬರಿಯ ಅಂತ್ಯದಲ್ಲಿ ತಿಳಿಯುತ್ತದೆ.

ಕಾದಂಬರಿಗೆ ಗೊತ್ತುಗುರಿ ಯಾವುದೂ ಇದ್ದಂತಿಲ್ಲ ; ಎಲ್ಲೋ ಆರಂಭವಾಗಿ, ಮಧ್ಯದಲ್ಲಿ ದಿಕ್ಕು ತಪ್ಪಿ, ಓದುಗರನ್ನೂ ದಿಕ್ಕು ತಪ್ಪಿಸಿ, ಮತ್ತೆ ಇನ್ನೆಲ್ಲೋ ಮುಕ್ತಾಯವಾಗಿದೆ. ಅಗ್ಗದ ರಂಜನೆ ಕಾದಂಬರಿಯ ಉದ್ದೇಶ. ಉದ್ರೇಕ ತರಿಸಲೆಂದೇ ಉದ್ದೇಶಪೂರ್ವಕವಾಗಿ ರೂಪಿಸಿದ ಅನೇಕ ಸಂದರ್ಭಗಳು, ಸಂಭಾ ಷಣೆಗಳು, ವರ್ಣನೆಗಳು ಕಾದಂಬರಿಯಲ್ಲಿವೆ. ಕೆಲವು ಉದಾಹರಣೆಗಳು :

೧) ವಿಜಯಮ್ಮ ಯಾರೋ ಏನೋ ತಿಳಿಯದು. ವಿಧವೆ ಬೇರೆ. ಆಕೆಗೆ ಸೀರೆಗಳನ್ನು ಕೊಟ್ಟುಬರೊದ್ರಲ್ಲಿ ನನಗೇನು ಮಜಾ ಸಿಕ್ಕೀತು ! ಅದಕ್ಕೆ ಬದ

ಲಾಗ ಮಾಪ ಸರೋಜಿನಿ ಮನೆಗಾವರೂ ಕಳುಹಿಸಿದ್ರೆ....

೨) "....ನನ್ನ ವಯಸ್ಸು ಇಪ್ಪತ್ನಾಲ್ಕು...."

"ನಿಜವಾಗ! ನಿನ್ನ ಮಾತ್ನಲ್ಲಿ ನಂಗೇನೋ ನಂಬಿಕೆಯಿಲ್ಲ.... ಹದಿನಾರು ಹದಿನೇಳರಬಹುದು ಅಂದ್ಕೊಂಡಿದ್ದೆ...." ಅದ್ಸರಿ ನೀನ್ ಕಾಫಿ, ಟೀ ಏನು ಕುಡಿತೀಯಾ?"

"ಹಾಲು...."

"ನಿಜ....ಹಾಲು ಕುಡಿಯೋ ವಯಸ್ಸೇ ನಿಂದು...."

೩) ಟ್ರಿಮ್ಮಾಗಿ ಶೃಂಗರಿಸಿಕೊಂಡು ನಿಶ್ಚಯದ ಮಾಮೂಲು ಜಾಗದಲ್ಲಿ ಸರೋಜಿನಿಯನ್ನು ಭೇಟಿಯಾದೆ....ನಸುಗತ್ತಲು....ನಿರ್ಜನ ಪ್ರದೇಶ....ಕೆಳ ಗಿಳಿದ ಸರೋಜಿನಿಯನ್ನು ಅಪ್ಪಿ ಮುದ್ದಿಸಿದೆ....

"ಇಲ್ಲಿ ಬೇಡ....ಮನೆಗೆ ಹೋಗೋಣ...." ಅಂದ್ಲು.

"ನಿನ್ನ ತಂಗಿ ಇರ್ತಾಳಲ್ಲಾ?" ಅಂದೆ.

"ಊರಿಗೆ ಹೋಗಿದ್ದಾಳೆ, ಮನೇಲಿ ನಾನೊಬ್ಬಳೇ...."

೪) ಹಾಲು ಬಣ್ಣದ ಬಳಕುವ ಮೈ.... ಮೈಬಣ್ಣ ಎದ್ದು ಕಾಣಲು ಸಹಕಾರಿ ಯಾಗಿದ್ದ ಉಟ್ಟಿದ್ದ ಕೆಂಪು ಬಣ್ಣದ ಸೀರೆ, ನಾನೆದ್ದು ಅವಳ ಪಕ್ಕದಲ್ಲೇ ಕುಳಿತುಕೊಂಡೆ. ಅವಳನ್ನು ಬಲಗೈಯಿಂದ ಬಳಸಿಹಿಡಿದು, ಎಡಗೈಯಿಂದ ಅವಳ ಗಲ್ಲ ಹಿಡಿದು ಅವಳ ಮುಖವನ್ನು ನನ್ನತ್ತ ತಿರುಗಿಸಿಕೊಂಡೆ. ಅವಳು ನನ್ನೆದೆಯ ಮೇಲೆ ನೆಮ್ಮದಿಯಿಂದ ತಲೆಯಿಟ್ಟು ಕಣ್ಮುಚ್ಚಿದಳು........ಅವಳ ಅವಳದ ಬಣ್ಣದ ತೆರೆದ ತುಟಿಗಳತ್ತ ಆಸೆಯಿಂದ ನೋಡುತ್ತ ನಾನು ಬಾಗಿದಾಗ ಹೊರ ಗಡೆ ಸದ್ದಾಯಿತು....

ಉತ್ತಮ ಕಾದಂಬರಿಗಾರ್ತಿಯರೆಂದು ಹೆಸರಾಗಿರುವ ಶ್ರೀಮತಿ ಆರ್ಯಾಂಬ ಪಟ್ಟಾಭಿಯವರ ಈ ಕೃತಿ ಓದುಗರಿಗೆ ನಿರಾಶೆಯುಂಟು ಮಾಡುತ್ತದೆಂದು ವಿಷಾದ ದಿಂದ ಹೇಳಬೇಕಾಗಿದೆ.

ಕೃಷ್ಣ ಹಾಸನ್

* * *

ಗುಹೆ ಸೇರಿದವರು—ಲೇಖಕರು: ಬಿ. ಎಸ್. ಎಲ್. ವೇಣು; ಪ್ರಕಾಶಕರು: ಬಾಪ್ಕೊ ಪ್ರಕಾಶನ ಸಂ. ೮೮, ಮೈಸೂರು ರಸ್ತೆ ಬೆಂಗಳೂರು ೫೬೦೦೧೮; ಮೊದಲ ಮುದ್ರಣ: ೧೯೮೨; ಪುಟಗಳು: ೪೭; ಬೆಲೆ: ೪.೫೦ ರೂ.

ಮಾತನಾಡುವ ಗಿಳಿ, ಹಾರಾಡುವ ಬೆಟ್ಟ, ತಲೆಯಲ್ಲಿ ಕೊಂಬಿನ ಮನುಷ್ಯ,

ಮುಂತಾದ ವಸ್ತುಗಳನ್ನೇ ಆಯ್ದುಕೊಂಡು ಮಕ್ಕಳಿಗಾಗಿ ಸಾಹಸಮಯ ಸಾಹಿತ್ಯ ನೀಡುವುದು ಒಂದು ಪದ್ಧತಿಯಾದರೆ, ವಿದೇಶಿ ಆಮದು ಸರಕನ್ನು ಕೊಡುವುದು ಇನ್ನೊಂದು ಪದ್ಧತಿಯಾಗಿದೆ. ಈ ವಿಷಯಗಳು ಮಕ್ಕಳಲ್ಲಿ ಕುತೂಹಲ ಕೆರಳಿಸಿ ಓದುವ ಅಭಿರುಚಿ ಬೆಳೆಯಲು ಸಹಕಾರಿಯಾದರೂ ಬೆಳೆಯುವ ಮಕ್ಕಳ ಮನಸ್ಸಿನ ಮೇಲೆ ಅವೈಜ್ಞಾನಿಕತೆಯ ಮುದ್ರೆಯೊತ್ತಿ ವಿಚಾರ ವಿಮರ್ಶೆಯ ತೊಳಲಾಟಕ್ಕೆ ಗುರಿ ಮಾಡುವ ಸಾಧ್ಯತೆಯೂ ಇದೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ದೊರೆಯುವ ವಸ್ತುವನ್ನೇ ಆಯ್ದುಕೊಂಡು ಹೇಗೆ ಪರಿಣಾಮಕಾರಿಯಾಗಿ ಮಕ್ಕಳಿಗೆ ಉಪಯುಕ್ತ ಸಾಹಸಮಯ ಘಟನೆ ನೀಡಬಹುದು ಎಂಬುದಕ್ಕೆ ಬಿ. ಎಲ್. ವೇಣು ಅವರ ಗುಹೆ ಸೇರಿದವರು ಉತ್ತಮ ನಿದರ್ಶನವಾಗಿದೆ. ಮಕ್ಕಳ ಸಾಹಿತ್ಯಕ್ಕೆ ಇಂತಹ ಕೊಡುಗೆಗಳು ಇಂದು ಅಗತ್ಯವಾಗಿವೆ.

ಮಾಧ್ಯಮಿಕ ಶಾಲೆಯ ಅರವತ್ತು ಸ್ಕೌಟ್ ವಿದ್ಯಾರ್ಥಿಗಳು ಇಬ್ಬರು ಅಧ್ಯಾಪಕರ ನೇತೃತ್ವದಲ್ಲಿ ಹೊರ ಸಂಚಾರಕ್ಕೆ ಹೊರಡುತ್ತಾರೆ. ಈ ಸಾರಿ ವಿದ್ಯಾರ್ಥಿಗಳ ಪ್ರವಾಸ 'ಅಂಕಳಿ ಗುಹೆ'ಯ ಸುತ್ತಮುತ್ತಲಿನ ಪ್ರದೇಶಕ್ಕೆ ಏರ್ಪಾಡಾಗಿದ್ದು, ಇದು ಕೋಟೆ ಕೊತ್ತಲೆಗಳಿಂದಾವೃತವಾದ ಪ್ರದೇಶವಾಗಿರುತ್ತದೆ. ವಿದ್ಯಾರ್ಥಿಗಳ ಪೈಕಿ ಚೀನಿ ಒಬ್ಬನನ್ನು ಮಾತ್ರಹೊರಗೆ ಉಳಿಸಿ ಎಲ್ಲರೂ ಗುಹೆ ನೋಡಲು ಒಳಗೆ ಹೋಗುತ್ತಾರೆ. ವಿದ್ಯಾರ್ಥಿಗಳು ಕುತೂಹಲದಿಂದ ಗುಹೆ ನೋಡಿಕೊಂಡು ಮುಂದೆ ಹೋಗುತ್ತಿದ್ದಂತೆ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳ ಆಸಕ್ತಿಗೆ ತಣ್ಣೀರೆರಚಿ ಹಿಂದಕ್ಕೆ ಕರೆದುಕೊಂಡು ಬರುತ್ತಾರೆ. ಗಿರಿ, ಆಚಾರಿ ಹಾಗೂ ಶೆಟ್ಟಿ ಎಂಬ ವಿದ್ಯಾರ್ಥಿಗಳು ಗುಹೆಯನ್ನು ಪರಿಪೂರ್ಣವಾಗಿ ನೋಡಿ ಬರಲು ಎಲ್ಲರ ಕಣ್ ತಪ್ಪಿಸಿ ಹೊರಡುತ್ತಾರೆ. ಚೀನಿ ಎಂಬ ವಿದ್ಯಾರ್ಥಿಯೂ ಸಹ ಇವರನ್ನು ಅನುಸರಿಸಿ ಹೋಗುತ್ತಾನೆ. ಈ ತಂಡದ ಮುಖಂಡತ್ವವನ್ನು ಗಿರಿ ವಹಿಸುತ್ತಾನೆ. ಗುಹೆ ಒಳಗೆ ಅಲ್ಲಲ್ಲಿ ಎದುರಾಗುವ ಇಕ್ಕಟ್ಟಿನ ಪರಿಸ್ಥಿತಿಯನ್ನು ಇವನು ಜಾಣ್ಮೆಯಿಂದ ಪರಿಹರಿಸುತ್ತಾನೆ. ಇತರರು ಅಧೈರ್ಯಗೊಂಡಾಗ ಧೈರ್ಯ ತುಂಬಿ ಮುನ್ನಡೆಸಿಕೊಂಡು ಹೋಗುತ್ತಾನೆ. ಗುಹೆಯ ಕತ್ತಲು ಪ್ರಪಂಚದಲ್ಲಿ ಹಸಿವು, ಬಾಯಾರಿಕೆ, ಭಯ ಮುಂತಾದ ಸಮಸ್ಯೆಗಳು ಕಾಡುವುದಲ್ಲದೆ ಕೆಲವು ಪ್ರಸಂಗದಲ್ಲಿ ಪ್ರಾಣಾಪಾಯವೂ ಎದುರಾಗುತ್ತದೆ. ಇಂತಹ ಎಲ್ಲ ಅಡ್ಡಿ ಆತಂಕಗಳನ್ನೂ ಬದಿಗೊತ್ತಿ, ಎದೆಗುಂದದೆ ಸಾಹಸ ಪಟ್ಟು ಎರಡು ದಿನದ ನಂತರ ಗುಹೆಯ ಗರ್ಭದಿಂದ ಹೊರಬರುತ್ತಾರೆ.

ಈ ನಾಲ್ವರು ಬಾಲಕರು ಗುಹೆಯನ್ನು ಪರಿಶೀಲಿಸಿ ಬರುವುದರ ಜೊತೆಗೆ ಕಳ್ಳಸಾಗಾಣಿಕೆದಾರರ ಜಾಲದ ಮುಖ್ಯಸ್ಥಳವನ್ನು ಪತ್ತೆ ಹಚ್ಚುವ ಕೆಲಸವನ್ನೂ ಮಾಡುತ್ತಾರೆ. ಇವರ ಸಾಹಸದ ಬಗ್ಗೆ ಪತ್ರಿಕೆಗಳು ಪ್ರಕಟಿಸುತ್ತದೆ. ಸಾಹಸಿ ಮಕ್ಕಳೆಂದು ಸರ್ಕಾರ ಆ ವರ್ಷ ಪ್ರಶಸ್ತಿ ನೀಡಿ ಪುರಸ್ಕರಿಸುತ್ತದೆ.

"ಗುಹೆ ಸೇರಿದವರು" ಮಕ್ಕಳಿಗಾಗಿ ಬರೆದ ಕಾದಂಬರಿ. ಮಕ್ಕಳಿಗಾಗಿ ಬರೆದಾಗ ಅವರ ವಾಚನಶಕ್ತಿ, ಅರ್ಥಗ್ರಹಣ ಸಾಮರ್ಥ್ಯ ಮುಂತಾದ ವನ್ನು ಗಮನದಲ್ಲಿ ಇರಿಸಿಕೊಂಡು ಬರೆಯುವುದು ಪ್ರಮುಖ ಸಂಗತಿಯಾಗಿದೆ. ಈ ಕಾದಂಬರಿಯಲ್ಲಿ ಅಲ್ಲಲ್ಲಿ ಉದ್ದುದ್ದ ವಾಕ್ಯಗಳು, ಕಠಿಣ ಪದಗಳು ಬಳಕೆ ಯಾಗಿವೆ.

ಉದಾಹರಣೆಗೆ—'ಆಲೆಮಂಗ ಬಡ್ಡಿ ಮಕ್ಳಾ ಯಾವನಾದ್ರೂ ತರ್ಲೆ ಮಾಡಿ ದರೆ ಬಲಿಹಾಕಿ ಬಿಡ್ತೀನಿ ಸಾಲಾಗಿ ಒಬ್ಬೊಬ್ಬರಾಗಿ ಹೋಗ್ಬೇಕು, ದೂಡೋದು, ಕೀಚೋದು ಮಾಡಿದಿರೊ? ಒಬ್ಬೊಬ್ಬನ ಚರ್ಮ ಸುಲಿದು ಬಿಡ್ತೀನಿ. ಸ್ಮಾರ್ಟ್ ಮಕ್ಕಳು ಅಂದರೆ ಶಿಸ್ತಿಗೆ ಪ್ರತೀಕವಾಗಿರ್ಬೇಕು" (ಪುಟ–೨....).

ಕಠಿಣ ಪದಗಳು—ಉದಾಹರಣೆಗೆ : ಕೋಟಿ ಕೊತ್ತಲಗಳಿಂದಾವೃತವಾದ, ಲೆಫ್ಟ್‌ರ್ಸ್ ಮಾರ್ಚ್, ಎಬೌಟ್‌ಟರ್ನ್, ಕ್ವಿಕ್ ಮಾರ್ಚ್, ಎಷ್ಟು ಗ್ರ್ಯಾಂಡ್ ಆಗೈತ್ರೋ, ಒಂದ್ ಹಲ್ಲಿರಬಾದ್ದು, ಟ್ರೈಮೆಷ್ಟಾಗಿರ್ಬ್ಯೋದಪ್ಪ, ಮುಂತಾದುವು. ಇಂತಹ ಪದಗಳನ್ನು ಎಳೆಯರಿರಲಿ ವಯಸ್ಕರೇ ಓದಲು ಪರದಾಡುವ ಸಂದರ್ಭ ಇದೆ. ಇಂತಹ ಕಡೆ ಸಮಾನಾರ್ಥ ಸುಲಭ ಪದ ಬಳಸಬಹುದಿತ್ತು. ಮಕ್ಕಳಿಗೆ ಓದಲು ತೊಡಕಾದಾಗ ಅಂತಹ ಪದಗಳು, ವಾಕ್ಯಗಳನ್ನೇ ಬಿಟ್ಟು ಮುಂದೆ ಜಿಗಿಯುವ ಸಾಧ್ಯತೆ ಇದೆ.

ಗುಹೆ ಒಳಗೆ ಇದ್ದಾಗ ಎಲ್ಲರಿಗೂ ಹಸಿವಾಗುತ್ತದೆ. ಅಲ್ಲಿ ದೊರೆತ ಮೀನನ್ನೇ ಸುಟ್ಟು ತಿನ್ನಲು ಪ್ರಯತ್ನಿಸುತ್ತಾರೆ. ಮಾಂಸಾಹಾರಿಯಲ್ಲದ ಆಚಾರಿ ನಾನು ಮೀನು ತಿನ್ನುವುದಿಲ್ಲ ಎಂದು ಪ್ರತಿಭಟಿಸುತ್ತಾನೆ. ಅದಕ್ಕೆ ಜೀನಿ ಈ ರೀತಿ ಹೇಳುತ್ತಾನೆ, "ಮರಣಾಂತಿಕ ಸಮಯಗಳಲ್ಲಿ ಯಾವುದೂ ನಿಷಿದ್ಧವಲ್ಲ ಅಂತಂದು ಉಪನಿಷತ್ತಿನಲ್ಲಿ ಹೇಳೈತೋ ಆಚಾರ್ಯ" ಎಷ್ಟೋ ಸಂದರ್ಭಗಳಲ್ಲಿ ಸತ್ತ ಹೆಣಾನೇ ತಿಂದು ಹೊಟ್ಟೆ ತುಂಬಿಕೊಂಡವರಿದ್ದಾರೆ—ಜೀನಿ ತಾನು ಓದಿ ಕೊಂಡಿದ್ದನ್ನು ಆರುಹಿದ (ಪುಟ-೩೦) ಮಾಧ್ಯಮಿಕ ಶಾಲೆಯಲ್ಲಿ ಓದುವ ಒಬ್ಬ ವಿದ್ಯಾರ್ಥಿಗೆ ಉಪನಿಷತ್ತನ್ನು ಓದಿಕೊಂಡು ವ್ಯಾಖ್ಯಾನ ಮಾಡುವಷ್ಟು ಅನುಭವ ಇದ್ದುದು ಆಶ್ಚರ್ಯಕರ ಸಂಗತಿಯಾಗಿದೆ.

ನಾಲ್ಕು ಹುಡುಗರು ಗುಹೆ ನೋಡುವ ಹಿನ್ನೆಲೆಯಲ್ಲಿ ಕಾದಂಬರಿಯ ವಸ್ತು ಸುರುಳಿ ಬಿಚ್ಚಿಕೊಂಡು ಹೋಗುತ್ತದೆ. ವಿಷಯ ನಿರೂಪಣಾ ವಿಧಾನವು ಪರಿಣಾಮಕಾರಿಯಾಗಿದ್ದು, ಕಾದಂಬರಿ ಓದುಗರ ಕುತೂಹಲವನ್ನು ಕೊನೆಯ ವರೆಗೂ ಉಳಿಸಿಕೊಂಡು ಯಶಸ್ವಿಯಾಗಿ ಮೂಡಿಬಂದಿದೆ. ಮಕ್ಕಳ ಸಾಹಿತ್ಯದ ಅಭಾವದಿಂದ ಸೊರಗುವ ಕನ್ನಡ ಸಾಹಿತ್ಯಕ್ಕೆ ಇಂತಹ ಕೊಡುಗೆಗಳು ಇಂದು ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗಿವೆ.

ಚಂದ್ರಶೇಖರಾರಾಧ್ಯ

* * *

ಗ್ರಾಮೀಣ ಪ್ರದೇಶಗಳಲ್ಲಿ ವರ್ಗಸಂಘರ್ಷ ಮತ್ತು ಜಾತಿ ವೈಷಮ್ಯ: ಲೇಖಕರು: ಎಸ್. ಜಿ. ಸರ್ದೇಸಾಯಿ; ಅನುವಾದಕರು: ಸಿ. ಸೀತಾರಾಮ್; ಪುಟಗಳು: ೬೪ ಪ್ರಥಮ ಮುದ್ರಣ: ೧೯೮೧, ನವ ಕರ್ನಾಟಕ ಪಬ್ಲಿಕೇಷನ್ಸ್, ಪ್ರೈವೇಟ್ ಲಿಮಿಟೆಡ್, ಬೆಂಗಳೂರು-೫೬೦ ೦೦೯.

ಪ್ರಕೃತ ಪುಸ್ತಕದ ಕರ್ತೃ ಶ್ರೀ ಎಸ್. ಜಿ. ಸರ್ದೇಸಾಯಿ ಅವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಕ್ರಾಂತಿಕಾರಿ ಮತ್ತು ಭಾರತ ಕಮ್ಯೂನಿಸ್ಟ ಪಕ್ಷದ ಒಬ್ಬ ಪ್ರಮುಖ ನಾಯಕರು. ಅವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ದಲಿತ ಜನರ ವಿಮೋಚನೆಗೆ, ಶ್ರಮಜೀವಿಗಳ ಹಿತಾಸಕ್ತಿಗಳ ರಕ್ಷಣೆಗೆ, ದೇಶವನ್ನು ಸಮಾಜವಾದಿ ಪಥಕ್ಕೊಯ್ಯಲು ವಿವಿಧ ಕ್ಷೇತ್ರಗಳಲ್ಲಿ ನಡೆಯುವ ನಿರಂತರ ಹೋರಾಟಗಳಲ್ಲಿ ಉಗಮಿಸುವ ಅನೇಕ ಸಮಸ್ಯೆಗಳನ್ನು ಆಳವಾಗಿ ವಿಶ್ಲೇಷಿಸಿ, ಪರಿಹಾರ ಮಾರ್ಗವನ್ನು ಕಂಡುಹಿಡಿಯುವುದು ಅವರ ಎಲ್ಲ ಕೃತಿಗಳ ಮುಖ್ಯ ಉದ್ದೇಶ. ಇದಕ್ಕಾಗಿ ಲೇಖಕರು ಮಾರ್ಕ್ಸ್‌ವಾದ–ಲೆನಿನ್ ವಾದವನ್ನು ಅವಲಂಬಿಸಿದ್ದಾರೆ.

ದಲಿತರ ವಿಮೋಚನೆಗಾಗಿ ನಡೆಯುವ ಹೋರಾಟದಲ್ಲಿ, ನಮಗೆ ಯೋಗ್ಯ ಮಾರ್ಗದರ್ಶನವನ್ನು ನೀಡುವಂಥ ಒಂದು ಪುಟ್ಟ ಪುಸ್ತಕವಿದು. ಗ್ರಾಮೀಣ ವರ್ಗಸಂಘರ್ಷವನ್ನು ಜಾತೀಯ ಅಸಮತೆ, ದಬ್ಬಾಳಿಕೆ ಹಾಗೂ ಪೂರ್ವಾಗ್ರಹಗಳ ವಿರುದ್ಧ ಹೋರಾಟದೊಂದಿಗೆ ಮೇಳೈಸುವುದು ಹೇಗೆ ಎಂಬುದು ಈ ಪುಸ್ತಕದ ಮುಖ್ಯ ವಿಷಯ. ಗ್ರಾಮೀಣ ಪ್ರದೇಶಗಳಲ್ಲಿ ಹರಿಜನರ ವಿರುದ್ಧ ಪಟ್ಟಭದ್ರ ಹಿತಾಸಕ್ತಿಗಳು ಸಂಘಟಿಸುತ್ತಿರುವ ಜಾತೀಯ ಹಿಂಸೆಯು ಕೃಷಿ ಕಾರ್ಮಿಕರು ಹಾಗೂ ರೈತರ ಚಳುವಳಿಗೆ ದೊಡ್ಡ ಅಪಾಯವಾಗಿದೆ. ಇದು ಭೂಮಾಲೀಕ ಹಾಗೂ ಬಂಡವಾಳಶಾಹಿ ಶೋಷಣೆ ವಿರುದ್ಧ ಹೋರಾಟದಲ್ಲಿ

ಗ್ರಾಮೀಣ ಜನತೆಯಲ್ಲಿನ ಏಕತೆಯನ್ನು ಒಡೆದು, ಸಾಮಾಜಿಕ ಕಲಹಕ್ಕೆ ಕಾರಣವಾಗುತ್ತದೆ; ಭಾರತದ ಪ್ರಜಾಸತ್ತಾತ್ಮಕ ಪ್ರಗತಿಗೆ ಅಪಾಯ ತರುತ್ತದೆ ಅಲ್ಲದೆ ಪ್ರತಿಗಾಮಿ ಶಕ್ತಿಗಳ ವಿರುದ್ಧ ನಮ್ಮ ವಾಮ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಏಕತೆಗೆ ಭಂಗ ತರುತ್ತದೆ.

ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಜಾತಿಭೇದ, ದಬ್ಬಾಳಿಕೆ, ಅಸಮಾನತೆ ಮತ್ತು ಪೂರ್ವಾಗ್ರಹದ ಸಮಸ್ಯೆ ತೀವ್ರರೂಪ ತಾಳಿರುವುದನ್ನು ಲೇಖಕರು ಗಮನಿಸಿದ್ದಾರೆ. ಕಳೆದೆರಡು ವರ್ಷಗಳಲ್ಲಿ ಸವರ್ಣ ಹಿಂದೂಗಳಿಂದ ಹರಿಜನರ ಮೇಲೆ ಇಪ್ಪತ್ತಮೂರು ಸಾವಿರಕ್ಕೂ ಹೆಚ್ಚು ದೌರ್ಜನ್ಯ ನಡೆದಿದೆ. ಸಾವಿರಾರು ಮಂದಿ ಕೊಲೆಯಾಗಿದ್ದಾರೆ, ಜೀವಂತ ಸುಟ್ಟುಹೋದವರು ಅನೇಕ ಮಂದಿ. ಹಲವಾರು ಹರಿಜನ ಬಸ್ತಿಗಳು ಲೂಟಿಗೆ, ಬೆಂಕಿಗೆ ಗುರಿಯಾಗಿವೆ. ಅವುಗಳಲ್ಲಿ ಅನೇಕವು ನಿವಾಸಿಗಳ ಸಹಿತ ಉರಿದು ಬೂದಿಯಾಗಿವೆ. ತೊಟ್ಟಿಲ ಮಕ್ಕಳನ್ನು ಉಳಿಸಿಲ್ಲ. ಇವೆಲ್ಲವೂ ಶತಮಾನಗಳಿಂದ ಅಸ್ಪೃಶ್ಯರು ಅನುಭವಿಸಿರುವ ಹಲವಾರು ರೀತಿಯ ಅಪಮಾನ ಹಾಗೂ ದೌರ್ಜನ್ಯದ ನಂತರವೂ ನಡೆಯುತ್ತಿರುವ ಸಂಗತಿಗಳು—ಹರಿಜನರು ಶೋಷಣೆಗೀಡಾಗುತ್ತಿರುವ ಒಂದು ಶಬ್ದ ಚಿತ್ರವಿದು.

ಗ್ರಾಮೀಣ ಪ್ರದೇಶಗಳಲ್ಲಿ ಜಾತಿ ಸಮಸ್ಯೆಗೆ ಹೊಸ ರೂಪು, ಹೊಸ ಅರ್ಥ ಹಾಗೂ ಹೊಸ ದಿಸೆ ಕೊಟ್ಟಿರುವ ಆರ್ಥಿಕ-ಸಾಮಾಜಿಕ, ರಾಜಕೀಯ-ಸಾಂಸ್ಕೃತಿಕ, ಬದಲಾವಣೆಗಳನ್ನು ಸಾವಧಾನವಾಗಿ, ಆಮೂಲಾಗ್ರವಾಗಿ ಪರಿಶೀಲಿಸುವುದು ಇಂದಿನ ದಿನಗಳಲ್ಲಿ ಅತ್ಯವಶ್ಯಕ. ಅನಂತರ ಗ್ರಾಮೀಣ ಪ್ರದೇಶಗಳಲ್ಲಿನ ವರ್ಗ ಹೋರಾಟವನ್ನು ವರ್ಗಸಂಬಂಧ ಅಸಮಾನತೆ, ದಬ್ಬಾಳಿಕೆ ಮತ್ತು ಪೂರ್ವಾಗ್ರಹಗಳ ವಿರುದ್ಧ ಹೋರಾಟದ ಜತೆಗೂಡಿಸುವುದು. ಈ ಕಾರ್ಯಕ್ರಮವನ್ನು ಗ್ರಾಮೀಣ ಜನತೆಯೊಂದಿಗೆ ನಮ್ಮ ದೈನಂದಿನ ಚಟುವಟಿಕೆಯ ಅವಿಚ್ಛಿನ್ನ ಅಂಗವನ್ನಾಗಿ ಪರಿಗಣಿಸಬೇಕು (ಪು. ೮).

ಜಾತಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಅಸಮಾನತೆ, ಮೇಲರಿಮೆ-ಕೀಳರಿಮೆ ಇವುಗಳನ್ನು ಸಾಂಸ್ಥೀಕರಣಗೊಳಿಸಿರುವುದು ಭಾರತೀಯ ಸಮಾಜದ ವೈಚಿತ್ರ್ಯ ಹಾಗೂ ವೈಶಿಷ್ಟ್ಯ (ಪು : ೧೦)

ಸ್ವಾತಂತ್ರ್ಯ ಪೂರ್ವಕಾಲದ ಜಾತಿ ಹಾಗೂ ಅದರ ತಾತ್ವಿಕ-ಸಾಂಸ್ಕೃತಿಕ ಅಂಗರಚನೆಯನ್ನು ಸಾಮ್ರಾಜ್ಯ ಶಾಹಿಗಳು, ಊಳಿಗಮಾನ್ಯ ಪದ್ಧತಿಯ ಭೂಮಾಲೀಕರು ಹಾಗೂ ಹಿಂದೂ ಸಂಪ್ರದಾಯವಾದಿಗಳು ತಮ್ಮ ಹಿತಾಸಕ್ತಿ

ಗಳನ್ನು ಪೋಷಿಸಿಕೊಳ್ಳುವುದಕ್ಕಾಗಿ ಹಾಗೂ ಆಗತಾನೆ ಬೆಳೆಯುತ್ತಿದ್ದ ರಾಷ್ಟ್ರೀಯ ಚಳುವಳಿಯ ವಿರುದ್ಧ ಹೋರಾಡಲು ಬಳಸಿಕೊಂಡರು. ಆದರೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜಾತಿಸಮಸ್ಯೆಗೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳಾಗಿವೆ. ಭಾರತೀಯ ಸಮಾಜದಲ್ಲಿನ ವಿಚ್ಛಿದ್ರಕಾರಿ ಶಕ್ತಿಗಳನ್ನು ಪೋಷಿಸಿ ಬೆಳೆಸಿದುದು ವಿದೇಶಿ ಶಕ್ತಿಯೇ ವಿನಾ ಬೇರೇನೂ ಅಲ್ಲವೆಂಬ ಸಿದ್ಧಾಂತದಲ್ಲಿ ಏನೂ ಹುರುಳಿಲ್ಲ ಎಂಬ ಅಂಶ ಸ್ಪಷ್ಟವಾಗಿದೆ. ಕೈಗಾರಿಕಾ ಪ್ರಗತಿಯೂ ಸಹ ಇದಕ್ಕೆ ಪರಿಹಾರವಾಗಲಿಲ್ಲ. ಸಮಾಜದ ಕೆಳವರ್ಗದ ಜನ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದಂತೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಗತಿಯೂ ಜಾತಿಸಮಸ್ಯೆಯನ್ನು ತಗ್ಗಿಸಲಾಗಲಿಲ್ಲ. ಇವೆಲ್ಲ ಸಮಸ್ಯೆಗಳ ಸರಿಯಾದ ಅಧ್ಯಯನ ನಡೆಯಬೇಕಾಗಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಜಕೀಯ ಹಾಗೂ ಆರ್ಥಿಕ ಉದ್ದೇಶಗಳಿಗಾಗಿ ಪಟ್ಟಭದ್ರ ಹಿತಾಸಕ್ತಿಗಳಿಂದ ಜಾತೀಯತೆಯ ವ್ಯವಸ್ಥಿತ ದುರುಪಯೋಗವು ಹೆಚ್ಚಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ಹೊಸದಾದ ಆದರೆ ಅಪಾಯಕಾರಿಯಾದ ಬೆಳವಣಿಗೆಯ ಹಿಂದೆ ಸೀಮಿತ ಬಂಡವಾಳಶಾಹಿ ಬೆಳವಣಿಗೆ ಅಡಗಿದೆ. ಇದರಲ್ಲಿನ ಬಿಕ್ಕಟ್ಟಿನ ಪರಿಣಾಮವಾಗಿ ನಿರುದ್ಯೋಗ ಹಾಗೂ ಮಾನಸಿಕ ನೋವು ಉಂಟಾಗುತ್ತಿದೆಯಲ್ಲದೆ ಇದು ಸಾಮಾಜಿಕವಾಗಿ ಪರಸ್ಪರ ವೈರುಧ್ಯವನ್ನು ಇನ್ನಷ್ಟು ಮೊನಚುಮಾಡುತ್ತಿದೆ (ಪು. ೭೦).

ಕೃಷಿ ಕ್ಷೇತ್ರದಲ್ಲಿ ಬಂಡವಾಳಶಾಹಿಯ ಪ್ರಗತಿಯು ಮಧ್ಯಮ ಹಾಗೂ ಬಡರೈತರಾದಿ ಜನರ ಆಸ್ತಿ ಕಸಿದುಕೊಳ್ಳುವಿಕೆಯನ್ನು ತೀವ್ರಗೊಳಿಸಿದೆ. ಭೂರಹಿತರ ಸಂಖ್ಯೆ ಹೆಚ್ಚಿದೆ. ಇದೇ ಸಮಯದಲ್ಲಿ ಶ್ರೀಮಂತ ರೈತರ ಸಂಖ್ಯೆ, ಸಂಪತ್ತು, ಪ್ರಭಾವವೂ ಸಹ ಹೆಚ್ಚಿದೆ. ಶೋಷಣೆಯೂ ನಿಂತಿಲ್ಲ. ಈ ಎಲ್ಲ ಬೆಳವಣಿಗೆಯಿಂದಾಗಿ ಒಂದು ಕಡೆ ಬಂಡವಾಳಶಾಹಿ ಭೂಮಾಲೀಕರು ಮತ್ತು ಶ್ರೀಮಂತ ರೈತರು, ಮತ್ತೊಂದು ಕಡೆ ಗ್ರಾಮೀಣ ಜನತೆ—ಇವರ ನಡುವಣ ವರ್ಗಹೋರಾಟ ಹೆಚ್ಚಾಗಿದೆ. ಖಾಸಗಿ ಮಾಲೀಕತ್ವದ ಭೂಮಿಗೆ ಮಿತಿ ವಿಧಿಸುವುದು, ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ಹಂಚುವುದು ಹಾಗೂ ಕೃಷಿ ಕಾರ್ಮಿಕರಿಗೆ ನ್ಯಾಯ ವೇತನದ ಆಶ್ವಾಸನೆ ಮತ್ತು ಅಧಿಕ ಬಡ್ಡಿದರದ ಸಾಲ ಪದ್ಧತಿ—ಈ ವಿಷಯಗಳು ಆಸ್ಫೋಟಕಾರಿ ಬಿಕ್ಕಟ್ಟನ್ನು ಉಂಟುಮಾಡಿರುವ ಅಂಶವನ್ನು ಲೇಖಕರು ನಮ್ಮ ಗಮನಕ್ಕೆ ತರುತ್ತಾರೆ.

ಗ್ರಾಮೀಣ ಧನಿಕರು ತಮ್ಮ ಹಿತಾಸಕ್ತಿಗಳನ್ನು ಮತ್ತಷ್ಟು ಪೋಷಿಸಿಕೊಳ್ಳುವ ದೃಷ್ಟಿಯಿಂದ, ರಾಜಕೀಯ ಅಧಿಕಾರವನ್ನು ಕಸಿಯಲು ಜಾತಿಪದ್ಧತಿ ಒಂದು ಪ್ರಮುಖ ಸಾಧನವಾಗುತ್ತಿರುವುದನ್ನು ಲೇಖಕರು ಗುರುತಿಸಿದ್ದಾರೆ. ವರ್ಗರಹಿತ ಹಾಗೂ ಪ್ರಜಾಸತ್ತಾತ್ಮಕ ಸಮಾಜ ರಚನೆಗಾಗಿ ಅಧಿಕಾರಕ್ಕೆ ಬರಲು ಯತ್ನಿಸುವವರಿಗೆಲ್ಲಾ ಚುನಾವಣೆಗಳಲ್ಲಿನ ಜಾತೀಯ ಕೈವಾಡವು ದೊಡ್ಡ ಅಡಚಣೆ ಆಗಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಆಡಳಿತಾನುಸಾರವಾಗಿ ಹಾಗೂ ದೈಹಿಕವಾಗಿ ಹರಿಜನರೇ ಹೊಡೆತ ತಿನ್ನುವ ಸ್ಥಿತಿಯಲ್ಲಿರುವವರು ಎಂದು ಲೇಖಕರು ಹೇಳಿದ್ದಾರೆ (ಪು ೨೩).

ಗ್ರಾಮೀಣ ಪ್ರದೇಶಗಳಲ್ಲಿನ ಹೊಸ ಬಂಡವಾಳಶಾಹಿ ವರ್ಗಕ್ಕೆ, ಶ್ರಮಜೀವಿಗಳು ಹಾಗೂ ಅರೆಶ್ರಮಜೀವಿಗಳ ವಿರುದ್ಧ ಬಳಸಲು ಜಾತೀಯತೆಯು ಒಂದು ಮುಖ್ಯ ಅಸ್ತ್ರವಾಗಿದೆ. ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳಿಗೆ ಅಧಿಕಾರವನ್ನು ಸಂಪಾದಿಸಿ ಉಳಿಸಿಕೊಳ್ಳಲು ಜಾತೀಯತೆಯ ವಿರಾಟಸ್ವರೂಪವು ಒಂದು ಸುಲಭ ಸಾಧನವಾಗಿದೆ. ಈ ಕುತಂತ್ರದ ನೀತಿಯು ರಾಜಕೀಯ ಪ್ರಜಾಸತ್ತೆಯ ಆರ್ಥಿಕ ಹಾಗೂ ಸಾಮಾಜಿಕ ಉದ್ದೇಶಗಳನ್ನು ಹಾಳು ಮಾಡುತ್ತದೆಂಬುದನ್ನು ಜನ ತಿಳಿಯಬೇಕು. ಜನತೆಗಾಗಿ ಪ್ರಜಾಸತ್ತೆ ಎನ್ನುವಾಗ ಜಾತಿಯ ಒಲವಿನ ಮೇಲೆ ಮತ ಹಾಕುವುದು ಅರ್ಥವಿಲ್ಲದ್ದಾಗುತ್ತದೆ. ಜಾತಿಭೇದ ಹಾಗೂ ಅಸಮಾನತೆಯನ್ನು ಕೊನೆಗಾಣಿಸಿದರೆ ಮಾತ್ರ ನೈಜ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯನ್ನು ಸಾಧಿಸಲಾಗುತ್ತದೆ. ನಿಜವಾದ ಪ್ರಜಾಸತ್ತಾತ್ಮಕ ಶಕ್ತಿಯ ಆವಿಷ್ಕಾರವಾಗುವುದು ವರ್ಗನೀತಿಯ ಆಧಾರದ ಮೇಲೆ ಮಾತ್ರ. ಆದ್ದರಿಂದ ರಾಜಕೀಯ ಹಾಗೂ ಆರ್ಥಿಕ ಮತ್ತು ಸಾಮಾಜಿಕ ಗುರಿಗಳ ಈಡೇರಿಕೆಗಾಗಿ ಜನರು ಜಾತಿ ಒಲವುಗಳನ್ನು ಮತ್ತು ಸಂಕೋಚಗಳನ್ನು ಬಿಡಬೇಕು. ಜಾತಿ ಆಧಾರದ ಯಾವುದೇ ಪ್ರಲೋಭನೆಯನ್ನು ತಿರಸ್ಕರಿಸಬೇಕು. ಮತದಾರರ ಐಕ್ಯಯು ವರ್ಗೀಯ ಹಾಗೂ ಪ್ರಜಾಸತ್ತಾತ್ಮಕ ಏಕತೆಯ ಉದ್ದೇಶ ಸಾಧನೆಗಾಗಿರಬೇಕು. (ಪು ೩೨).

ಗ್ರಾಮಗಳಲ್ಲಿ ಹರಿಜನರು (ಅಸ್ಪೃಶ್ಯರು) ಪ್ರತ್ಯೇಕವಾಗಿ ವಾಸಿಸುವುದನ್ನು ತಪ್ಪಿಸಿ, ಎಲ್ಲರಂತೆಯೇ ಅವರೂ ಗ್ರಾಮದ ಜನರೊಂದಿಗೆ ಒಂದಾಗಿ ವಾಸ ಮಾಡುವ ಅವಕಾಶವನ್ನು ಕಲ್ಪಿಸಬೇಕು. ಹಬ್ಬಗಳ ಆಚರಣೆ, ಸಾಂಸ್ಕೃತಿಕ ಕಲಾಪಗಳು, ನಾಟಕಗಳು, ಔತಣ ಕೂಟಗಳು ಮುಂತಾದ ಸಾಮಾಜಿಕ-ಸಾಂಸ್ಕೃತಿಕ ಸಮ್ಮಿಲನಗಳು ಈ ನಿಟ್ಟಿನಲ್ಲಿ ಬಹಳ ಸಹಾಯಕ. ಹರಿಜನರು

"ಅಧಿಕವಾಗಿ ಅನುಕಂಪಕ್ಕೆ ಒಳಗಾದ ಹಾಗೂ ವಿಶೇಷ ಸವಲತ್ತುಗಳನ್ನು ಹೊಂದಿರುವ" ಸಮೂಹವಾಗುತ್ತಿರುವರೆಂಬ ಭಾವನೆ ತಪ್ಪೆಂಬುದನ್ನು ಹರಿಜನೇತರರಿಗೆ ತಿಳಿಸಿಕೊಡಬೇಕು.

ಜಾತೀಯ ದಬ್ಬಾಳಿಕೆ ಒಂದು ರೀತಿಯ ವಿಷದಂತ. ಅದು ಪ್ರಾಚೀನವಾದ, ರಕ್ತಗತವಾಗಿ ಬಂದಿರುವ ಸರ್ವವ್ಯಾಪಿ ಪೂರ್ವಾಗ್ರಹಗಳನ್ನೊಳಗೊಂಡಿದೆ. ಹಿಂದುಳಿದ ಸಮಾಜದಲ್ಲಿ ಇದು ಸುಲಭವಾಗಿ ನಾಶವಾಗುವುದಿಲ್ಲ. ಆದುದರಿಂದ ಅಂತರ್ಜಾತಿಯ ವಿವಾಹಗಳು ಸಾಮಾನ್ಯ ಪದ್ಧತಿಯಾದಾಗ ಮಾತ್ರ ಜಾತೀಯ ವಿಭಾಗಗಳ ಪೂರ್ಣ ನಿರ್ಮೂಲನ ಸಾಧ್ಯವಾಗುವುದು (ಪು. ೫೭).... ಆದರೆ ಇದರ ಪ್ರಮಾಣವನ್ನು ಬಲಾತ್ಕಾರದಿಂದ ಹೆಚ್ಚಿಸಲಾಗುವುದಿಲ್ಲ. ಇದು ಅನುಕೂಲತೆಯ ಪ್ರಶ್ನೆಯಲ್ಲ. ಅದಕ್ಕಿಂತ ಮುಖ್ಯವಾಗಿ ಒಂದು ತತ್ತ್ವದ ಪ್ರಶ್ನೆ. ವಿವಾಹ ಸಂಬಂಧಗಳು ಸ್ವಂತ ಆಯ್ಕೆಯ ಮೇಲೆ ಇರಬೇಕು ಎಂದು ಸ್ಪಷ್ಟ ಪಡಿಸಿದ್ದಾರೆ ಲೇಖಕರು.

ಪುಸ್ತಕದ ಕೊನೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಅನೇಕ ಸಮಸ್ಯೆಗಳಿಗೆ ಲೇಖಕರು ಪರಿಹಾರವನ್ನು ಸೂಚಿಸಿದ್ದಾರೆ: ಇವು ಬಹಳ ಮುಖ್ಯವಾದವು. ೧) ಎಲ್ಲ ಜಾತಿಮತಗಳ ಶ್ರಮಜೀವಿಗಳ ಏಕತೆ. ೨) ಸಮಾಜವಾದ ಹಾಗೂ ಪ್ರಜಾಸತ್ತೆಗಾಗಿ ನಡೆಸುವ ಹೋರಾಟದಲ್ಲಿ ಹರಿಜನ ಹಾಗೂ ಹರಿಜನೇತರೆಲ್ಲರ ಏಕತೆ, ಜಾತೀಯತೆ ಹಾಗೂ ಜಾತೀಯ ವರ್ಗೀಕರಣದ ವಿರುದ್ಧ ಹೋರಾಟ ದಲ್ಲಿ ಇದೇ ಅತ್ಯಂತ ಪ್ರಬಲ ಉಪಕರಣ. ೩) ಶ್ರಮಜೀವಿಗಳ ವರ್ಗೀಯ ಏಕತೆ ಹಾಗೂ ನಿರಂತರ ಪ್ರಜಾಸತ್ತೆ ಮಾತ್ರವೇ ಜಾತೀಯತೆಗೆ ಮದ್ದು. ಇದೇ ಪ್ರಗತಿ ಪಥ.

ಇಂದು ಅತ್ಯಗತ್ಯವಾಗಿರುವುದೆಂದರೆ ಗಾಂಧಿ, ನೆಹರು ಹಾಗೂ ಅಂಬೇಡ್ಕರ್ ಅವರ ಆರೋಗ್ಯಕರ ಹಾಗೂ ಪ್ರಗತಿಶೀಲ ಸಂಪ್ರದಾಯಗಳನ್ನು ಸಮನ್ವಯ ಗೊಳಿಸಿ ಮುಂದೊಯ್ಯುವುದು ಮತ್ತು ನಮ್ಮ ಸ್ವಾತಂತ್ರ್ಯ ಚಳುವಳಿಯ ಎಲ್ಲ ಉದಾರವಾದಿ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಒಗ್ಗೂಡಿಸಿ ಅವುಗಳಿಗೆ ಮಾರ್ಕ್ಸ್‌ವಾದಿ–ಸಮಾಜವಾದಿ ಸತ್ವವನ್ನು ತುಂಬುವುದು—ಇದು ಲೇಖಕರ ಮುಖ್ಯ ಆಶಯ.

ಆರ್. ರಾಮಕೃಷ್ಣ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ : ಒಂದು ರೂಪಾಯಿ

ವಾರ್ಷಿಕ ಚಂದಾ : ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ : : ಮೈಸೂರು - ೪

Reg. No. KRNN. 29 / WPP 6

LICENSE No. 21
LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು.....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಾಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyengar Manager at Karnataka State Adult Education Council Press and Published by Karnataka State Adult Education Council Mysore city (India)